24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 75 | ನವದೆಹಲಿ | ಬೆಲೆ ₹10 | ಸೆಪ್ಟಂಬರ್ 10 2026 ಗುರುವಾರ



**ಶ್ರೀ ಡಿ. ಕೆ. ಶಿವಕುಮಾರ್**
ಸನ್ಮಾನ್ಯ ಮುಖ್ಯಮಂತ್ರಿಗಳು



**ಶ್ರೀ ಸಿದ್ದರಾಮಯ್ಯ**
ಮಾನ್ಯ ನಿಕಟಪೂರ್ವ ಮುಖ್ಯಮಂತ್ರಿಗಳು



**ಡಾ. ಜಿ. ಪರಮೇಶ್ವರ**
ಮಾನ್ಯ ಉಪಮುಖ್ಯಮಂತ್ರಿಗಳು

**ಶ್ರೀ ಡಿ. ಕೆ. ಶಿವಕುಮಾರ್**
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

**ವಿಧಾನ ಸೌಧ**
**ಬೆಂಗಳೂರು - 560001**

**ನಮಸ್ಕಾರ**

ಮುಖ್ಯಮಂತ್ರಿಯಾಗಿ ರಾಜ್ಯದ ಜನತೆಯ ಸೇವೆ ಮಾಡುವ ಅವಕಾಶ ನನಗೆ ದೊರೆತು ಇಂದಿಗೆ ನೂರು ದಿನಗಳು ಪೂರೈಸಿವೆ.

ಈ ನೂರು ದಿನಗಳು ಕೇವಲ ಒಂದು ಅವಧಿಯ ಲೆಕ್ಕವಲ್ಲ. ಕೋಟ್ಯಂತರ ಕನ್ನಡಿಗರ ಬದುಕಿನಲ್ಲಿ ಬದಲಾವಣೆ ತರಬೇಕೆಂಬ ಹೊಣೆಗಾರಿಕೆಯನ್ನು ಇನ್ನಷ್ಟು ಆಳವಾಗಿ, ಗಾಢವಾಗಿ ಅರಿಯುವ ನೂರು ದಿನಗಳಾಗಿವೆ ಎಂದೇ ಭಾವಿಸುತ್ತೇನೆ.

ಜನರ ನಂಬಿಕೆ ಮತ್ತು ವಿಶ್ವಾಸದ ಮುಂದೆ ಅಧಿಕಾರ ಚಿಕ್ಕದು. ಜನರ ನಿರೀಕ್ಷೆಗಳ ಮುಂದೆ ಹುದ್ದೆ ಚಿಕ್ಕದು. ನಮ್ಮ ಮುಂದೆ ಇರುವ ಸವಾಲು, ಜವಾಬ್ದಾರಿ, ಹೊಣೆಗಾರಿಕೆ ಮಾತ್ರ ದೊಡ್ಡದು.

ಶ್ರೀ ಸಿದ್ದರಾಮಯ್ಯನವರು ನಮ್ಮ ನಾಡಿಗೆ ಸಾಮಾಜಿಕ ನ್ಯಾಯದ ಗಟ್ಟಿಯಾದ ಅಡಿಪಾಯ ಹಾಕಿಕೊಟ್ಟಿದ್ದಾರೆ. ಸರ್ಕಾರ ಎಂದರೆ ಎಲ್ಲರಿಗಾಗಿ ಇರಬೇಕು, ಅದರಲ್ಲೂ ಶೋಷಿತರ, ದಮನಿತರ ಪರವಾಗಿ ಗಟ್ಟಿಯಾಗಿ ನಿಲ್ಲಬೇಕು ಎನ್ನುವುದನ್ನು ಅವರು ತಮ್ಮ ಆಡಳಿತದ ಮೂಲಕ ಸಾಧಿಸಿ ತೋರಿಸಿದ್ದಾರೆ. ಇದೇ ಬದ್ಧತೆ ಮತ್ತು ಕಾಳಜಿಯನ್ನು ನಾನೂ ಮುಂದುವರೆಸುತ್ತಿದ್ದೇನೆ.

ನಮ್ಮ ಐದು ಗ್ಯಾರಂಟಿಗಳು ರಾಜ್ಯದ ಲಕ್ಷಾಂತರ ಕುಟುಂಬಗಳಿಗೆ ಆರ್ಥಿಕ ಚೈತನ್ಯ, ಬದುಕಿಗೆ ನೆಮ್ಮದಿ ಮತ್ತು ಭದ್ರತೆಯನ್ನು ನೀಡಿವೆ.

ಆದರೆ ಸರ್ಕಾರದ ಹೊಣೆಗಾರಿಕೆ ಇಷ್ಟಕ್ಕೇ ಮುಗಿಯುವುದಿಲ್ಲ. ಜನರಿಗೆ ಇಂದು ಏನು ಸಿಕ್ಕಿದೆ ಎನ್ನುವುದಕ್ಕಿಂತ, ನಾಳೆ ಅವರಿಗೆ ಇನ್ನೇನು ಬೇಕು ಎಂಬುದನ್ನು ಅರಿತು ಕೆಲಸ ಮಾಡುವುದು ನಮ್ಮ ದೃಷ್ಟಿಕೋನ ಮತ್ತು ಗುರಿಯಾಗಿದೆ.

ಈ ಮೊದಲ ನೂರು ದಿನಗಳಲ್ಲಿ ಆ ದಿಕ್ಕಿನಲ್ಲಿ ನಾವು ಹಲವು ಗಟ್ಟಿ ಹೆಜ್ಜೆಗಳನ್ನು ಇಟ್ಟಿದ್ದೇವೆ. **ವೃತ್ತಿಪರ ಕೋರ್ಸ್‌ಗಳ ಪ್ರವೇಶದಲ್ಲಿ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ 7.5% ಮೀಸಲಾತಿ, ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್‌ಗಳು, ₹29,679 ಕೋಟಿ ಮೊತ್ತದ ಹೂಡಿಕೆಗಳಿಗೆ ಅನುಮೋದನೆ ದೊರೆತಿದ್ದು, ಇದರಿಂದ ಸುಮಾರು 66,000 ಉದ್ಯೋಗಗಳು ಸೃಷ್ಟಿಯಾಗುವ ನಿರೀಕ್ಷೆ, ಯುವಜನರಲ್ಲಿ ಕ್ರೀಡೆ, ಸಂಸ್ಕೃತಿ ಮತ್ತು ವೈಜ್ಞಾನಿಕ ಮನೋಭಾವ ಬೆಳೆಸಲು 10,000 ಭಾರತ್ ಜೋಡೋ ಯುವ ಸಂಘಗಳು, ಭಾರತದ ಮೊದಲ ಸರ್ಕಾರಿ ಪ್ರಾಯೋಜಿತ AI ವಿಶ್ವವಿದ್ಯಾಲಯ, 6ನೇ ತರಗತಿಯಿಂದಲೇ AI ಶಿಕ್ಷಣ, ಮೋಡ ಬಿತ್ತನೆ (Cloud Seeding), ಅತ್ಯಂತ ಹಿಂದುಳಿದ 10 ಜಿಲ್ಲೆಗಳಲ್ಲಿ 1 ಲಕ್ಷ ಹೊಸ ಉದ್ಯೋಗಗಳನ್ನು ಸೃಷ್ಟಿಸುವ ಯೋಜನೆ, ಖಾಲಿ ಇರುವ 72,000 ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಗೆ ಚಾಲನೆ ನೀಡಿರುವುದು ಹಾಗೂ ಜನರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಲು ನನ್ನ ನೇರ ಮೇಲ್ವಿಚಾರಣೆಯಲ್ಲಿ 'ಪ್ರಜಾ ಸೇವೆ' ಇಲಾಖೆಯ ಸ್ಥಾಪನೆಯಾಗಿದೆ.**

ಇವೆಲ್ಲ ಯೋಜನೆಗಳಿಗೂ ಬಹಳ ಬದ್ಧತೆಯಿಂದ ಈ ನೂರು ದಿನಗಳಲ್ಲಿ ಚಾಲನೆ ನೀಡಲು ನಮಗೆ ಸಾಧ್ಯವಾಗಿದೆ. ಇವನ್ನೆಲ್ಲಾ ನಾನು ಸಾಧನೆಗಳ ಪಟ್ಟಿ ಎಂದು ಹೇಳುತ್ತಿಲ್ಲ. ಇವೆಲ್ಲವೂ ಮುಂದೆ ಸಾಗಬೇಕಾಗಿರುವ ಹಾದಿಗೆ ದಿಕ್ಸೂಚಿಗಳಾಗಿವೆ.

ಜನತೆಯ ನಿರೀಕ್ಷೆಗಳು ದೊಡ್ಡವು ಎಂಬುದು ನನಗೆ ಗೊತ್ತಿದೆ.

ಅವು ದೊಡ್ಡದಾಗಿಯೇ ಇರಬೇಕು. ನಮ್ಮ ಸರ್ಕಾರ ಜನತೆಯ ಧ್ವನಿಯನ್ನು, ಜನರ ಕೂಗನ್ನು ವಿನಮ್ರತೆಯಿಂದ ಕೇಳಿಸಿಕೊಳ್ಳುತ್ತದೆ. ಜನತೆಯ ಸಾಮೂಹಿಕ ಬೇಡಿಕೆ ಮತ್ತು ಸಲಹೆಗಳನ್ನು ಸದಾ ಮುಕ್ತವಾಗಿ ಸ್ವೀಕರಿಸುತ್ತದೆ ಮತ್ತು ಪೂರಕವಾಗಿ ವರ್ತಿಸುತ್ತದೆ, ಜನತೆಗೆ ಇಷ್ಟವಿಲ್ಲದ್ದನ್ನು ಮುಲಾಜಿಲ್ಲದೆ ಹಿಂದಕ್ಕೆ ಪಡೆಯುತ್ತದೆ ಎನ್ನುವುದನ್ನು ನಮ್ಮ ಸರ್ಕಾರ ಸಾಬೀತು ಮಾಡಿದೆ.

**ದೃಢ ಕರ್ನಾಟಕ** ನನ್ನ ಸಂಕಲ್ಪ. ಸಾಮಾಜಿಕವಾಗಿ, ಆರ್ಥಿಕವಾಗಿ, ಆಧುನಿಕವಾಗಿ ದೃಢವಾದ ಮಾದರಿ ಹೆಜ್ಜೆಗಳನ್ನು ನಾವು ಇಡುತ್ತೇವೆ.

ನನ್ನ ಸರ್ಕಾರದ ಎದುರಿಗೆ ದೊಡ್ಡ ಸವಾಲುಗಳಿವೆ. ನಮ್ಮ ಅನ್ನದಾತರು "ಬರ"ಕ್ಕೆ ಸಿಲುಕಿದ್ದಾರೆ. ಈ ನೂರು ದಿನಗಳ ನಮ್ಮ ನಡೆ ಮುಂದಿನ 500 ದಿನಗಳಲ್ಲಿ ಸಾಗಬೇಕಾದ ಹಾದಿಗೆ ದಿಕ್ಸೂಚಿಯಾಗಿದೆ ಎನ್ನುವುದನ್ನು ಮತ್ತೊಮ್ಮೆ ಹೇಳುತ್ತೇನೆ. ಕರ್ನಾಟಕ ಅವಕಾಶಗಳಿಗಾಗಿ ಕಾಯುವುದಿಲ್ಲ. **ಅವಕಾಶಗಳನ್ನು ಸೃಷ್ಟಿಸುತ್ತದೆ**

ಆದರೆ, ನಮ್ಮ ನಾಡಿಗೆ ಪ್ರಗತಿ, ಕಲ್ಯಾಣ ಮತ್ತು ಅಭಿವೃದ್ಧಿಯ ಅದ್ಭುತ ಚರಿತ್ರೆ ಇದೆ. ಎಂಥಾದ್ದೇ ಸವಾಲುಗಳನ್ನು ದಿಟ್ಟತನದಿಂದ ಎದುರಿಸಿ, ಪರಿಹರಿಸುವ **ಚೈತನ್ಯವನ್ನು ನಾನು ನಮ್ಮ ನಾಡಿನ ಚರಿತ್ರೆಯಿಂದ ಒದಗಿಸಿಕೊಳ್ಳುತ್ತೇನೆ.** ಇದೇ ನನ್ನ ಮಣ್ಣಿನ ಗುಣ.

ಈ ಬಲವಾದ ನಂಬಿಕೆ ಮತ್ತು ವಿಶ್ವಾಸದಿಂದ **ನಮ್ಮ ಸಂಪುಟದ ಪೂರ್ಣ ಸಹಕಾರದೊಂದಿಗೆ ಸವಾಲನ್ನು ಗೆದ್ದು, ಸಾಧಿಸುತ್ತೇವೆ. ನನ್ನ ಉಸಿರಿರುವವರೆಗೂ ಈ ಮಣ್ಣಿನ ಋಣವನ್ನು ತೀರಿಸಲು, ನನ್ನ ಜನರ ಬದುಕನ್ನು ಸುಧಾರಿಸಲು ಶ್ರಮಿಸುತ್ತೇನೆ ಎನ್ನುವ ಸಂಕಲ್ಪ ಹೊಂದಿದ್ದೇನೆ.**

**ಸದಾ ನಿಮ್ಮ ಸೇವೆಯಲ್ಲಿ,**

**ಡಿ. ಕೆ. ಶಿವಕುಮಾರ್**
ಪ್ರಜಾಸೇವಕ




ದೃಢ ಕರ್ನಾಟಕದ ಸಂಕಲ್ಪ
ಶತಕದ ಪಥ ಪ್ರಗತಿಯ ರಥ

100 ದಿನ - 100 ಹೆಜ್ಜೆ - ಒಂದೇ ಸಂಕಲ್ಪ

ದೃಢ ಕರ್ನಾಟಕದ ಸಂಕಲ್ಪ

ಗೃಹಲಕ್ಷ್ಮಿ | ಅನ್ನಭಾಗ್ಯ | ಗೃಹ ಜ್ಯೋತಿ | ಯುವನಿಧಿ | ಶಕ್ತಿ

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

CMofKarnataka
https://dipr.karnataka.gov.in/
Karnatakavarthe
ಕರ್ನಾಟಕ ವಾರ್ತೆ

24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

ಸೆಪ್ಟಂಬರ್ 10 2026 ಗುರುವಾರ

## ಒಳಪುಟಗಳಲ್ಲಿ

ಕರ್ನಾಟಕಕ್ಕೆ ಚತುಷ್ಪಥ ರೈಲು ಯೋಜನೆ ನೀಡಿಲ್ಲ ಎಂಬುದು ತಪ್ಪು - ಪು.4

ಈಶ್ವರ ಖಂಡ್ರೆ ಭೇಟಿ ಬೆನ್ನಲ್ಲೇ ಹಿರೇಹಳ್ಳಿ ಕೆರೆ ಒತ್ತುವರಿ ತೆರವು - ಪು.5

ಬಿಜೆಪಿಯ ಕಾರ್ಯಸೂಚಿಯಂತೆ ಇ.ಡಿ. ಸಿಬಿಐ ಕಾರ್ಯನಿರ್ವಹಣೆ - ಪು.6

# ಭಾರತ್ ಜೋಡೋಯಾತ್ರೆ; ದೇಶದ ಜನರ ಸಂಕಷ್ಟಕ್ಕೆ ಸಿಕ್ಕ ಪರಿಹಾರ: ಸಿಎಂ

**ಬೆಂಗಳೂರು, ಸೆ.9:** ಭಾರತ್ ಜೋಡೋ ಯಾತ್ರೆ ದೇಶದ ಯುವಕರು, ಮಹಿಳೆಯರು, ರೈತರು, ಬಡವರ ಸಮಸ್ಯೆಗೆ ಪರಿಹಾರ ನೀಡಿತು. ಜನಸಾಮಾನ್ಯರ ಸಂಕಷ್ಟಕ್ಕೆ ಒದಗಿ ಬಂದ ಪರಿಹಾರ. ರಾಹುಲ್ ಗಾಂಧಿ ಅವರು ಕೇವಲ ಯಾತ್ರೆ ಮಾಡಲಿಲ್ಲ, ಎಲ್ಲಾ ವರ್ಗದ ಜನರ ಸಮಸ್ಯೆ ಆಲಿಸಿದರು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಣ್ಣಿಸಿದರು.

ಕೆಪಿಸಿಸಿ ಕಚೇರಿಯ ಭಾರತ್ ಜೋಡೋ ಸಭಾಂಗಣದಲ್ಲಿ ಬುಧವಾರ ನಡೆದ ಭಾರತ್ ಜೋಡೋ ಪಾದಯಾತ್ರೆಯ ಐದನೇ ವಾರ್ಷಿಕೋತ್ಸವದಲ್ಲಿ ಮಾತನಾಡಿ, ಭಾರತ ಜೋಡೋ ಯಾತ್ರೆ ಕೇವಲ ಕಾಂಗ್ರೆಸ್ ಕಾರ್ಯಕ್ರಮ ಅಲ್ಲ. ದೇಶದ ಐಕ್ಯ, ಸಮಗ್ರತೆಗಾಗಿ ಹಾಗೂ ನಮ್ಮ ರಾಜ್ಯದಲ್ಲಿ ಈ ಯಾತ್ರೆ ಚಾಮರಾಜನಗರ ಹಾಗೂ ರಾಯಚೂರಿನವರೆಗೆ ನಡೆದ ಯಾತ್ರೆ ದೇಶದಲ್ಲಿ ಬದಲಾವಣೆ ಗಾಳಿ ನೀಡಿದ ಸಂದೇಶ ಎಂದರು.

ನಮ್ಮ ರಾಜ್ಯದಲ್ಲಿ 21 ದಿನ 511 ಕಿ ಮೀ ಪಾದಯಾತ್ರೆ ನಡೆಯಿತು. ರಾಷ್ಟ್ರಮಟ್ಟದಲ್ಲಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ 4 ಸಾವಿರ ಕಿ.ಮೀ ಹೆಜ್ಜೆ ಹಾಕಲಾಯಿತು. "ಸೋನಿಯಾ ಗಾಂಧಿ ಅವರು ದಸರಾ ಸಮಯದಲ್ಲಿ ಮೂರು ದಿನ ರಾಜ್ಯದಲ್ಲಿ ಉಳಿದು ಯಾತ್ರೆಯಲ್ಲಿ ಹೆಜ್ಜೆ ಹಾಕಿದರು. ಈ ಯಾತ್ರೆ ಸಂದರ್ಭದಲ್ಲೇ ಎಐಸಿಸಿ ಅಧ್ಯಕ್ಷರಾಗಿ ಮಲ್ಲಿಕಾರ್ಜುನ ಖರ್ಗೆ ಆಯ್ಕೆಯಾದರು. ನಿಜಲಿಂಗಪ್ಪ ಅವರ ನಂತರ ಕರ್ನಾಟಕದವರು ಈ ಸ್ಥಾನಕ್ಕೆ ಏರಿದರು" ಎಂದು ಹೇಳಿದರು.

"ಭಾರತ ಜೋಡೋಯಾತ್ರೆ ಮುಗಿಯುವುದಲ್ಲ. ಇದನ್ನು




ಈ ಡಿ.ಕೆ. ಶಿವಕುಮಾರ್ ಇಲ್ಲಿಗೆ ನಿಲ್ಲಿಸುವುದಿಲ್ಲ. ಕಾಂಗ್ರೆಸ್ ಶಕ್ತಿ ದೇಶದ ಶಕ್ತಿ, ಕಾಂಗ್ರೆಸ್ ಇತಿಹಾಸ ದೇಶದ ಇತಿಹಾಸ, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಎಲ್ಲಾ ವರ್ಗದ ಜನ ಅಧಿಕಾರಕ್ಕೆ ಬಂದಂತೆ. ಈಗಾಗಲೇ ಭಾರತ ಜೋಡೋ ಭವನ ಟ್ರಸ್ಟ್ ಆರಂಭಿಸಿದ್ದು, ಈ ಟ್ರಸ್ಟ್‌ನಿಂದ ಕಾಂಗ್ರೆಸ್ ಪಕ್ಷದ ಆಶಯ, ಸಿದ್ಧಾಂತದ ಬಗ್ಗೆ ತರಬೇತಿ ಕೇಂದ್ರ ನಿರ್ಮಿಸಲಾಗುವುದು. ಈ ವಿಚಾರವಾಗಿ ನಾನು, ಹರಿಪ್ರಸಾದ್ ಹಾಗೂ ಹೈಕಮಾಂಡ್ ನಾಯಕರ ಜೊತೆ ಚರ್ಚೆ ಮಾಡಿರುವೆ" ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

**ಬೆದರಿಕೆಗೆ ಹೆದರುವುದಿಲ್ಲ:** ಅಮೆರಿಕದಿಂದ ಬಂದು ಮಾಧ್ಯಮಗೋಷ್ಠಿ ನಡೆಸಿ ದೇಶದಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಸುತ್ತೇನೆ ಎಂದು ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ. ಈ ಡಿ.ಕೆ.ಶಿವಕುಮಾರ್, ಈ ಸರ್ಕಾರ ಇದಕ್ಕೆಲ್ಲಾ ಹೆದರುವುದಿಲ್ಲ. ರಾಹುಲ್ ಗಾಂಧಿ ಅನ್ಯಾಯ ಪ್ರಶ್ನೆ ಮಾಡಿದ್ದಕ್ಕೆ ಪ್ರಕರಣ ಹಾಕಿದ್ದಾರೆ. ಅವರು ಇದಕ್ಕೆ ಹೆದರುತ್ತಾರಾ. ಇಂತಹ ಪರಿಸ್ಥಿತಿಯಲ್ಲಿ ನಾವು ನಿಮ್ಮ ಬೆದರಿಕೆಗೆ ಹೆದರುವುದಿಲ್ಲ.

### 2029ಕ್ಕೂ ನಮ್ಮದೇ ಸರ್ಕಾರ

ಡಬಲ್ ಇಂಜಿನ್ ಸರ್ಕಾರ ಇದ್ದಾಗ ನಾವು 136 ಸ್ಥಾನ ಗೆಲ್ಲುತ್ತೇವೆ ಎಂದು ಹೇಳಿದ್ದೆ. ನಮ್ಮ ಲೆಕ್ಕ ತಪ್ಪಾಯಿತಾ? ಈಗ ಮತ್ತೆ ಹೇಳುತ್ತಿರುವೆ 2028ಕ್ಕೂ ನಮ್ಮದೇ ಸರ್ಕಾರ, 2029ಕ್ಕೂ ನಮ್ಮದೇ ಸರ್ಕಾರ. ನೀವು ಅದಕ್ಕೆ ಸಹಕಾರ ನೀಡಬೇಕು. ಇತ್ತೀಚೆಗೆ ನಡೆದ ಪರಿಷತ್ ಚುನಾವಣೆಯಲ್ಲಿ ನಾವು ವಿನಯ್ ಕಾರ್ತಿಕ್ ಅವರನ್ನು 5ನೇ ಅಭ್ಯರ್ಥಿಯಾಗಿಕಣಕ್ಕಿಳಿಸಿದೆವು. 12 ಬಿಜೆಪಿ ಹಾಗೂ ದಳದ ಶಾಸಕರು ಅಡ್ಡಮತದಾನ ಮಾಡಿದ್ದಾರೆ. 80 ಜನರ ಪೈಕಿ 12 ಜನ ತಮ್ಮ ಆತ್ಮಸಾಕ್ಷಿ ಮತವನ್ನು ಕಾಂಗ್ರೆಸ್‌ಗೆ ಹಾಕಿದ್ದಾರೆ. ಅವರ ಶಾಸಕರಿಗೆ ತಮ್ಮ ಪಕ್ಷಗಳ ಮೇಲೆ ವಿಶ್ವಾಸ ಇಲ್ಲ ಎಂದ ಮೇಲೆ ಹೇಗೆ" ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಇಲ್ಲಿ ಇರುವುದು ನಾನು ಮಾತ್ರವಲ್ಲ. ನಮ್ಮ ಹಿಂದೆ ಈ ಕಾರ್ಯಕರ್ತರ ಸೈನ್ಯವೇ ಇದೆ. ನಾವು ನೀವೆಲ್ಲ ಸೇರಿ ರಾಹುಲ್ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರ ಕೈ ಬಲಪಡಿಸೋಣ" ಎಂದರು. "ನಾನು, ಹರಿಪ್ರಸಾದ್, ಸಿದ್ದರಾಮಯ್ಯ ಸೇರಿ ಸಚಿವರು ನಾಯಕರು ಎಲ್ಲರೂ ಒಟ್ಟಾಗಿ ಪಕ್ಷದ ಸಿದ್ಧಾಂತ, ಎಲ್ಲಾ ವರ್ಗವನ್ನು ಒಗ್ಗೂಡಿಸೋಣ. ಕಾಂಗ್ರೆಸ್ ಪಕ್ಷವನ್ನು ಮತ್ತೆ ದೇಶದಲ್ಲಿ ಅಧಿಕಾರಕ್ಕೆ ತರೋಣ" ಎಂದು ಕರೆ ನೀಡಿದರು.

## ಕಾವೇರಿ ನೀರು ಹಂಚಿಕೆ: ಇಂದು ಸುಪ್ರೀಂ ಮೊರೆ

**ಬೆಂಗಳೂರು, ಸೆ.9:** ತಮಿಳುನಾಡಿಗೆ ಮುಂದಿನ 15 ದಿನಗಳ ಕಾಲ ಪ್ರತಿದಿನ 6,000 ಕ್ಯೂಸೆಕ್ಸ್ ಕಾವೇರಿ ನೀರನ್ನು ಹರಿಸುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿ ಹಾಗೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ನೀಡಿರುವ ನಿರ್ದೇಶನವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಲು ರಾಜ್ಯ ಸರ್ಕಾರ ಚಿಂತನೆ ನಡೆಸಿದ್ದು ಗುರುವಾರ ಅರ್ಜಿ ಸಲ್ಲಿಸಲಿದೆ.



■ ಸುಪ್ರೀಂ ಮೊರೆ ಹೋಗಲು ರಾಜ್ಯ ಸರ್ಕಾರ ಚಿಂತನೆ: ಸಚಿವ ಚೆಲುವರಾಯ ಸ್ವಾಮಿ

ರಾಜ್ಯದಲ್ಲಿ ಬರಗಾಲ ಮತ್ತು ಕುಡಿಯುವ ನೀರಿನ ಅಭಾವವಿರುವ ಹಿನ್ನೆಲೆ ಯಲ್ಲಿ ಈ ಆದೇಶವನ್ನು ಅನುಷ್ಠಾನಗೊಳಿಸುವುದು ಅಸಾಧ್ಯವೆಂದು ಸರ್ಕಾರ ಸ್ಪಷ್ಟಪಡಿಸಿದೆ. ಕಾವೇರಿ ಜಲಾನಯನ ಪ್ರದೇಶದ ಜಲಾಶಯಗಳಿಗೆ ಹರಿದುಬರುತ್ತಿರುವ ಒಳಹರಿವು ಗಣನೀಯ ವಾಗಿ ಕಡಿಮೆಯಾಗಿದೆ. ಪ್ರಸ್ತುತ ಜಲಾಶಯಗಳಲ್ಲಿ ಲಭ್ಯವಿರುವ ನೀರನ್ನು ರಾಜ್ಯದ ಜನರ ಕುಡಿಯುವ ನೀರಿನ ಅಗತ್ಯತೆಗಾಗಿ ಮತ್ತು ಸ್ಥಳೀಯ ಬೆಳೆಗಳಿಗೆ ಕಾಯ್ದಿರಿಸಬೇಕಾದ ತುರ್ತು ಪರಿಸ್ಥಿತಿ ಇದೆ. ಹೀಗಿರುವಾಗ, ತಮಿಳುನಾಡಿಗೆ ದಿನಕ್ಕೆ 6,000 ಕ್ಯೂಸೆಕ್‌ನಂತೆ ಒಟ್ಟು ಸುಮಾರು 7.8 ಟಿಎಂಸಿ ನೀರು ಬಿಡುಗಡೆ ಮಾಡುವುದು ನೆಲಮಟ್ಟದ ವಾಸ್ತವಕ್ಕೆ ವಿರುದ್ಧವಾಗಿದೆ ಎಂದು ಸಚಿವ ಎನ್. ಚಲುವರಾಯಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ದೆಹಲಿಯಲ್ಲಿ ಕುಳಿತು ನಿರ್ಧಾರ ಕೈಗೊಳ್ಳುವ ಪ್ರಾಧಿಕಾರಗಳಿಗೆ ರಾಜ್ಯದ ಜಲಾಶಯಗಳ ನೈಜ ಪರಿಸ್ಥಿತಿ ಹಾಗೂ ಬರದ ತೀವ್ರತೆ ಅರ್ಥವಾಗುತ್ತಿಲ್ಲ. ಆರಂಭದಲ್ಲಿ ತಮಿಳುನಾಡು 17,000 ಕ್ಯೂಸೆಕ್ ನೀರಿಗೆ ಬೇಡಿಕೆ ಇಟ್ಟಿತ್ತು. ನಮ್ಮ ತಾಂತ್ರಿಕ ತಂಡದ ಪ್ರಬಲ ವಾದದಿಂದಾಗಿ ನೀರು ಬಿಡುಗಡೆಯ ಪ್ರಮಾಣವನ್ನು 6,000 ಕ್ಯೂಸೆಕ್‌ಗೆ ಇಳಿಸಲಾಗಿದೆ. ಆದರೂ, ಈಗಿನ ಪರಿಸ್ಥಿತಿಯಲ್ಲಿ ಇಷ್ಟೂ ನೀರನ್ನು ಹರಿಸಲು ಸಾಧ್ಯವಿಲ್ಲ. ಆದ್ದರಿಂದ ಕಾನೂನು ತಜ್ಞರು ಹಾಗೂ ಸಿಎಂ ಜತೆ ಚರ್ಚಿಸಿ ಸುಪ್ರೀಂ ಕೋರ್ಟ್ ಮೊರೆ ಹೋಗುವುದು ಅನಿವಾರ್ಯವಾಗಿದೆ ಎಂದು ತಿಳಿಸಿದ್ದಾರೆ.

# ಸಚಿವ ಸತೀಶ್ ಜಾರಕಿಹೊಳಿಗೆ ಇ.ಡಿ. ಶಾಕ್

**ಫೆಮಾ ಕಾಯ್ದೆಯಡಿ ಬೆಂಗಳೂರು, ಬೆಳಗಾವಿ, ಮಹಾರಾಷ್ಟ್ರ ಸೇರಿ ಸಚಿವರಿಗೆ ಸೇರಿದ 18 ಸ್ಥಳಗಳ ಮೇಲೆ ದಾಳಿ**

**ಬೆಂಗಳೂರು, ಸೆ.9:** ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆಯಡಿ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರಿಗೆ ಸೇರಿದ 18 ಸ್ಥಳಗಳ ಮೇಲೆ ಜಾರಿ ನಿರ್ದೇಶನಾಲಯ (ಇಡಿ) ಅಧಿಕಾರಿಗಳು ಬುಧವಾರ ಮುಂಜಾನೆಯಿಂದ ಏಕಕಾಲದಲ್ಲಿ ಹಠಾತ್ ದಾಳಿ ನಡೆಸಿದ್ದಾರೆ. ಸತೀಶ್ ಜಾರಕಿಹೊಳಿ ಅವರಿಗೆ ಸೇರಿದ ಬೆಂಗಳೂರು, ಬೆಳಗಾವಿ, ಮಹಾರಾಷ್ಟ್ರ ಸೇರಿ 18 ಕಡೆಗಳಲ್ಲಿ ದಾಳಿ ನಡೆಸಿರುವ ಇ.ಡಿ ಅಧಿಕಾರಿಗಳು ಶೋಧ ಕೈಗೊಂಡಿದ್ದಾರೆ.



ನಗರದ ಡಾಲರ್ಸ್ ಕಾಲೋನಿಯ ನಿವಾಸ, ಸರ್ಕಾರಿ ನಿವಾಸ, ಬೆಳಗಾವಿಯ ನಿವಾಸದ ಮೇಲೆ ಇಡಿ ಅಧಿಕಾರಿಗಳ ತಂಡಗಳು ಮುಂಜಾನೆಯಿಂದ ನಡೆಸಿರುವ ದಾಳಿಯು ಮಧ್ಯಾಹ್ನದವರೆಗೆ ಮುಂದುವರೆಸಿ ದಾಖಲೆ ಪತ್ರಗಳ, ಪರಿಶೀಲನೆ ನಡೆದಿದೆ ಸಚಿವ ಸತೀಶ್ ಜಾರಕಿಹೊಳಿ ಹಾಗೂ ಅವರ ಪುತ್ರಿ, ಚಿಕ್ಕೋಡಿ ಲೋಕಸಭಾ ಕ್ಷೇತ್ರದ ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಅವರಿಗೆ ಸಂಬಂಧಿಸಿದ ಸ್ಥಳಗಳ ಮೇಲೆ ದಾಳಿ ನಡೆಸಿ ಪರಿಶೀಲನೆ ನಡೆಸಿದ್ದಾರೆ ಅಕ್ರಮ ಹಣ ವರ್ಗಾವಣೆ ಕುರಿತಂತೆ ನಡೆದಿರುವ ಕೋಟ್ಯಂತರ ರೂ ಅಕ್ರಮದ ಆರೋಪಗಳಿಗೆ ಸಂಬಂಧಿಸಿದಂತೆ ದಾಳಿ ಕೈಗೊಂಡು ಪರಿಶೀಲನೆ ನಡೆಸಲಾಗಿದೆ ಎಂದು ಇಡಿ ಮೂಲಗಳು ತಿಳಿಸಿವೆ.

**178 ಕೋಟಿ ಅಕ್ರಮ:** ಇಡಿ ಅಧಿಕಾರಿಗಳ ಪ್ರಾಥಮಿಕ ತನಿಖೆಯ ವೇಳೆ 178 ಕೋಟಿ ರೂ.ಗೂ ಅಧಿಕ ಅಬಕಾರಿ ಅಕ್ರಮ ನಡೆದಿರುವ ಸುಳಿವು ಲಭ್ಯವಾಗಿದೆ. ಅಷ್ಟೇ ಅಲ್ಲದೆ, ಕೋಟ್ಯಂತರ ರೂ. ಮೊತ್ತದ ವಿದೇಶಿ ಹಣ ವರ್ಗಾವಣೆ ನಡೆದಿರುವ ಶಂಕೆಯಿದ್ದು, ಅಧಿಕಾರಿಗಳು ಆಸ್ತಿಪಾಸ್ತಿ ಕಡತಗಳು, ಬ್ಯಾಂಕ್ ಖಾತೆಗಳು ಹಾಗೂ ಮಹತ್ವದ ದಾಖಲೆಗಳ ಸಮಗ್ರ ತನಿಖೆ ನಡೆಸುತ್ತಿದ್ದಾರೆ.

ಸಚಿವ ಸತೀಶ್ ಜಾರಕಿಹೊಳಿ ಅವರು ಬೆಂಗಳೂರಿನ ತಮ್ಮ ಸರ್ಕಾರಿ ನಿವಾಸದಲ್ಲೇ ಇದ್ದು, ಇಡಿ ಅಧಿಕಾರಿಗಳ ತಂಡ ಸ್ಥಳದಲ್ಲೇ ಸಚಿವರು ಹಾಗೂ ಸಿಬ್ಬಂದಿಯನ್ನು ವಿಚಾರಣೆಗೆ ಒಳಪಡಿಸಿದೆ. 25ಕ್ಕೂ ಹೆಚ್ಚು ಇಡಿ ಅಧಿಕಾರಿಗಳು ಅತ್ಯಂತ ಯೋಜಿತವಾಗಿ ಬೆಳಗಿನ ಜಾವ 4 ಗಂಟೆಯಿಂದಲೇ ದಾಳಿಗೆ ಯೋಜನೆ ರೂಪಿಸಿಕೊಂಡು, ಮುಂಜಾನೆ 7 ಗಂಟೆಗೆ ಭದ್ರತಾ ಸಿಬ್ಬಂದಿಯೊಂದಿಗೆ ಏಕಕಾಲಕ್ಕೆ ಸಚಿವರ ಮನೆ ಹಾಗೂ ಕಚೇರಿಗಳ ಮೇಲೆ ದಾಳಿ ನಡೆಸಿದ್ದಾರೆ. ಡಾಲರ್ಸ್ ಕಾಲೋನಿಯಲ್ಲಿರುವ ಸಚಿವರ ಅಧಿಕೃತ ಹಾಗೂ ಸರ್ಕಾರಿ ನಿವಾಸ ಸೇರಿದಂತೆ ರಾಜಧಾನಿಯ ಒಟ್ಟು 6 ಕಡೆ ಪರಿಶೀಲನೆ ಮುಂದುವರಿದಿದೆ. ಸಚಿವರ ಆಪ್ತ ಮಂಜುನಾಥ್ ಅವರಿಗೆ ಸೇರಿದ ಕಚೇರಿಗಳು ಹಾಗೂ ಮನೆಗಳ ಮೇಲೆ ಗೋವಾದಲ್ಲೂ ಇಡಿ ತಂಡಗಳು ಹಠಾತ್ ದಾಳಿ ನಡೆಸಿ ಪ್ರಮುಖ ದಾಖಲೆಗಳನ್ನು ವಶಕ್ಕೆ ಪಡೆದುಕೊಂಡಿವೆ.

**ಫೆಮಾ ಕಾಯ್ದೆ ಪ್ರಕರಣ:** ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ ಅಷ್ಟೇ ಅಲ್ಲದೆ, ವಿದೇಶಗಳಲ್ಲಿ ಅಕ್ರಮ ಆಸ್ತಿ ಮತ್ತು ಹೂಡಿಕೆ ಹೊಂದಿರುವ ಗಂಭೀರ ಆರೋಪದ ಹಿನ್ನೆಲೆಯಲ್ಲಿ ಸತೀಶ್ ಜಾರಕಿಹೊಳಿ ಮೇಲೆ ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಫೆಮಾ) ಅಡಿಯಲ್ಲೂ ಪ್ರಕರಣ ದಾಖಲಿಸಿಕೊಂಡು ಇಡಿ ತನಿಖೆ ಚುರುಕುಗೊಳಿಸಿದೆ.

**13.3 ಕೋಟಿ ಆಸ್ತಿ:** ಸಚಿವ ಸತೀಶ್ ಜಾರಕಿಹೊಳಿ ಹಾಗೂ ಅವರ ಬಾವ (ಸಹೋದರಿಯ ಪತಿ), ಬೆಳಗಾವಿ ವಲಯ ಅಬಕಾರಿ ಹೆಚ್ಚುವರಿ ಆಯುಕ್ತ ವೈ. ಮಂಜುನಾಥ್ ಅವರ ನಿವಾಸ ಹಾಗೂ ಕಚೇರಿಗಳ ಮೇಲೆ ಜಾರಿ ನಿರ್ದೇಶನಾಲಯ ಕಾರ್ಯಾಚರಣೆಯನ್ನು ತೀವ್ರಗೊಳಿಸಿದೆ. ಕಳೆದ ಜೂನ್ 24ರಂದು ಇದೇ ಸಚಿವ ಸತೀಶ್ ಜಾರಕಿಹೊಳಿ ಅವರ ಬಾವ ಮಂಜುನಾಥ್ ಮನೆ ಹಾಗೂ ಕಚೇರಿಗಳ ಮೇಲೆ ಮೊದಲ ಬಾರಿಗೆ ದಾಳಿ ನಡೆಸಿದ್ದ ಇ.ಡಿ ಅಧಿಕಾರಿಗಳು, ಬೃಹತ್ ಪ್ರಮಾಣದ ನಗದು, ಚಿನ್ನಾಭರಣ ಮತ್ತು ಅಕ್ರಮ ಆಸ್ತಿ ದಾಖಲೆಗಳನ್ನು ಜಪ್ತಿ ಮಾಡಿದ್ದರು. ಬರೋಬ್ಬರಿ 5.5 ಕೋಟಿ ರೂ. ನಗದು ಹಣ ಜಪ್ತಿ, 7.8 ಕೋಟಿ ರೂ. ಮೌಲ್ಯದ ಬಂಗಾರ ಹಾಗೂ ಬೆಳ್ಳಿ ಆಭರಣಗಳು ಪತ್ತೆ. 3.3 ಲಕ್ಷ ಮೌಲ್ಯದ ವಿವಿಧ ದೇಶಗಳ ವಿದೇಶಿ ನಾಣ್ಯ/ಕರೆನ್ಸಿ ಜಪ್ತಿ ಮಾಡಲಾಗಿತ್ತು.

### ದಾಳಿ ರಾಜಕೀಯಪ್ರೇರಿತ



ಸತೀಶ್ ಜಾರಕಿಹೊಳಿ ಅವರು ದಲಿತ ನಾಯಕರು, ರಾಜಕೀಯವಾಗಿ ಬೆಳೆಯುವುದನ್ನು ಸಹಿಸದೆ ಬಿಜೆಪಿಯವರು ಹೀಗೆ ಮಾಡುತ್ತಿದ್ದಾರೆ, ಇದು ಮುಂದೆ ಅವರಿಗೇ ತಿರುಗುಬಾಣವಾಗಲಿದೆ ಎಂದು ಜಾರಿ ನಿರ್ದೇಶನಾಲಯದ ದಾಳಿಯ ಕುರಿತಾಗಿ ಸಿಎಂ ಡಿ.ಕೆ. ಶಿವಕುಮಾರ್ ಪ್ರತಿಕ್ರಿಯಿಸಿದ್ದಾರೆ. ಕಾಂಗ್ರೆಸ್ ಸರ್ಕಾರವನ್ನು ರಾಜಕೀಯವಾಗಿ ಗುರಿಯಾಗಿಸಿ ಇ.ಡಿ. ಅಸ್ತ್ರವನ್ನು ಬಳಸಲಾಗುತ್ತಿದೆ. ಸುಳ್ಳು ಕಥೆ ಕಟ್ಟಿ, ಸುಳ್ಳು ಆರೋಪಗಳನ್ನು ಮಾಡಿ ಜನರನ್ನು ತಪ್ಪು ದಾರಿಗೆ ಎಳೆಯಲಾಗುತ್ತಿದೆ. ಇದರ ಹಿಂದೆ ಬಿಜೆಪಿಯ ದುರುದ್ದೇಶವಿದೆ. ಬಿಜೆಪಿಯವರಿಗೆ ತಲೆಯಲ್ಲಿ ಏನೂ ಇಲ್ಲ, ಸಿದ್ದರಾಮಯ್ಯನವರೇ ಅಂದು ವಾಲ್ಮೀಕಿ ನಿಗಮದಲ್ಲಿ ಅಕ್ರಮವಾಗಿದೆ ಎಂದಿದ್ದರು, ನಾಗೇಂದ್ರ ರಾಜೀನಾಮೆ ನೀಡಿದರೂ ಇನ್ನೂ ಪ್ರತಿಭಟನೆ ಮಾಡುತ್ತಲೇ ಇದ್ದಾರೆ. ಕೆಪಿಎಸ್‌ಸಿ ಹಗರಣ ಸಂಬಂಧ ಕೂಡ ಬಿಜೆಪಿಯವರು ರಾಜಕೀಯ ಮಾಡುತ್ತಿದ್ದಾರೆ. ನಾಗೇಂದ್ರ ಮೇಲೆ ಇ.ಡಿ ದಾಳಿ ಮಾಡಿದರು, ಆಮೇಲೆ ನಿಜಾನ, ಸುಳ್ಳೋ ಎಂದು ನಾನು ಪರೀಕ್ಷೆ ಮಾಡಿಸಿದೆ ಎಂದಿದ್ದಾರೆ. ಬಿಜೆಪಿ ನಾಯಕರ ವಿರುದ್ಧದ ಹಳೆಯ ಎಫ್‌ಐಆರ್‌ಗಳು, ವಿಶೇಷವಾಗಿ ಭೋವಿ ಇಲಾಖೆಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಇ.ಡಿ ಏಕೆ ಇನ್ನೂ ತನಿಖೆ ನಡೆಸಿಲ್ಲ. ಇದು ಬಿಜೆಪಿಯ ರಾಜಕೀಯ ಪ್ರೇರಿತ ತಂತ್ರ ಎಂದರು. 40 ಮಂದಿ ಕಾಂಗ್ರೆಸ್ ಶಾಸಕರು ಮತ್ತು ಸಚಿವರನ್ನು ಇ.ಡಿ ಗುರಿಯಾಗಿಸಬಹುದು. ನಮ್ಮ ಎಚ್ಚರಿಕೆಯಲ್ಲಿ ನಾವಿರಬೇಕು ಎಂದಿದ್ದಾರೆ. ಗುರುವಾರ ನನ್ನ ನೇತೃತ್ವದ ಸರ್ಕಾರ 100 ದಿನಗಳನ್ನು ಪೂರೈಸುತ್ತಿದೆ. ಈ ಸಂದರ್ಭದಲ್ಲಿ ನಾನು ಜನರ ಮುಂದೆ ಕೆಲವು ಉತ್ತಮ ವಿಚಾರಗಳನ್ನು ಹಂಚಿಕೊಳ್ಳಬೇಕೆಂದಿದ್ದೇನೆ, ಈ ಸಂದರ್ಭದಲ್ಲಿ ಜನರ ಮನಸ್ಸನ್ನು ಬೇರೆಡೆ ಸೆಳೆಯಲು ಇಡಿ ದಾಳಿ ಮಾಡಿಸಿದ್ದಾರೆ ಎಂದು ಆರೋಪಿಸಿದರು.

### ರಾಜಕೀಯ ಬೇಟೆ ಹೊಸದೇನಲ್ಲ



ಸತೀಶ್ ಜಾರಕಿಹೊಳಿ ಅವರ ವಿರುದ್ಧ ನಡೆಯುತ್ತಿರುವ ದಾಳಿ ಕೂಡ ರಾಜಕೀಯ ಸೇಡಿನ ಭಾಗವಾಗಿದೆ ಎಂದು ರಣದೀಪ್ ಸಿಂಗ್ ಸುರ್ಜೇವಾಲ ಟೀಕಿಸಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಸುರ್ಜೇವಾಲಾ, ಕಾಂಗ್ರೆಸ್ ನಾಯಕರ ವಿರುದ್ಧದ ಇಂತಹ 'ರಾಜಕೀಯ ಬೇಟೆ' ಹೊಸದೇನಲ್ಲ. ಇಂತಹ ಕ್ರಮಗಳಿಂದ ಕಾಂಗ್ರೆಸ್ ನಾಯಕರು ಬೆದರುವುದಿಲ್ಲ ಅಥವಾ ಕರ್ನಾಟಕದ ಜನರ ಸೇವೆಯಿಂದ ಹಿಂದೆ ಸರಿಯುವುದಿಲ್ಲ ಎಂದು ಹೇಳಿದ್ದಾರೆ. ಕಾಂಗ್ರೆಸ್ ನಾಯಕರ ವಿರುದ್ಧ ಮೋದಿ ಸರ್ಕಾರವು ಅಡ್ಡದಾರಿಯಲ್ಲಿ ನಡೆಸುತ್ತಿರುವ ಇಂತಹ ದಾಳಿಗಳು ಸವೆದುಹೋದ ತಂತ್ರವಷ್ಟೇ. ಪರಿಶಿಷ್ಟ ಪಂಗಡದ ಪ್ರಭಾವಿ ನಾಯಕ ಸತೀಶ್ ಜಾರಕಿಹೊಳಿ ಮೇಲಿನ ರಾಜಕೀಯ ದಾಳಿ ಹಾಗೂ ಇ.ಡಿ ದಾಳಿಗಳು, ಸೋಲಿನ ಭೀತಿಯಲ್ಲಿರುವ ಬಿಜೆಪಿ ನಡೆಸುತ್ತಿರುವ ರಾಜಕೀಯ ಸೇಡಿನ ರಾಜಕಾರಣಕ್ಕೆ ಮತ್ತೊಂದು ಪ್ರತ್ಯಕ್ಷ ಉದಾಹರಣೆಯಾಗಿದೆ ಎಂದಿದ್ದಾರೆ.

### ಕೇಂದ್ರದಿಂದ ತನಿಖಾ ಸಂಸ್ಥೆಗಳ ದುರ್ಬಳಕೆ

ಸಚಿವ ಸತೀಶ್ ಜಾರಕಿಹೊಳಿ ಹಾಗೂ ಅವರ ಕುಟುಂಬದವರ ಮೇಲೆ ಜಾರಿ ನಿರ್ದೇಶನಾಲಯ ಮತ್ತು ಆದಾಯ ತೆರಿಗೆ ದಾಳಿಯನ್ನು ಕೆಪಿಸಿಸಿ ಮುಖಂಡ ಬಿ.ಕೆ ಹರಿಪ್ರಸಾದ್ ಖಂಡಿಸಿದ್ದಾರೆ.



ದಾಳಿಯಿಂದ ಆಶ್ಚರ್ಯವೇನೂ ಆಗಿಲ್ಲ. ಬದಲಾಗಿ ವಿರೋಧ ಪಕ್ಷಗಳನ್ನು ಹೆದರಿಸಲು ಕೇಂದ್ರೀಯ ಸಂಸ್ಥೆಗಳ ದುರ್ಬಳಕೆ ಇದಾಗಿದೆ. ಈಗಾಗಲೇ ಸುಪ್ರೀಂ ಕೋರ್ಟ್ ಇ.ಡಿ.ಗೆ ಛೀಮಾರಿ ಹಾಕಿದ್ದರೂ ಅವರಿಗೆ ಬುದ್ಧಿ ಬಂದಿಲ್ಲ ಎಂದು ವಾಗ್ದಾಳಿ ನಡೆಸಿದ್ದಾರೆ. ಈ ನಡುವೆ ಸತೀಶ್ ಜಾರಕಿಹೊಳಿ ಮೇಲೆ ಆಗಿರುವ ರೇಡ್ ಅವರ ಬಾಮೈದ ಇರುವಂತಹ ಸಂದರ್ಭದಲ್ಲಿ ಮಾಡಿರುವ ದಾಳಿಯಾಗಿದೆ. ಸತೀಶ್ ಹಾಗೂ ಅವರ ಪುತ್ರಿಯ ಮೇಲೆ ದಾಳಿ ಮಾಡುವಾಗ ಸ್ಪೀಕರ್ ಅನುಮತಿ ಪಡೆದಿದ್ದರಾ ಎಂಬುದನ್ನು ಪ್ರಶ್ನಿಸಬೇಕಿದೆ. ಕೇವಲ ಕಾಂಗ್ರೆಸ್ ನಾಯಕರ ಮೇಲೆ ಮಾತ್ರ ದಾಳಿ ಆಗುತ್ತಿದೆ. ಅದನ್ನು ರಾಜಕೀಯವಾಗಿ ಎದುರಿಸುತ್ತೇವೆ ಎಂದು ಎಚ್ಚರಿಕೆ ನೀಡಿದ್ದಾರೆ.

# ರಾಜ್ಯದ 2 ರೈಲು ಯೋಜನೆಗೆ ಕೇಂದ್ರ ಒಪ್ಪಿಗೆ

**ನವದೆಹಲಿ, ಸೆ.9:** ಕರ್ನಾಟಕದ ರೈಲು ಮೂಲಸೌಕರ್ಯ ಹಾಗೂ ಸಂಚಾರ ಸಾಮರ್ಥ್ಯ ಹೆಚ್ಚಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದೆ. ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ ಸಭೆಯಲ್ಲಿ 10,021 ಕೋಟಿ ರೂ. ವೆಚ್ಚದ ಐದು ಬಹುಹಳಿ ರೈಲ್ವೆ ಯೋಜನೆಗಳಿಗೆ ಅನುಮೋದನೆ ನೀಡಿದೆ.

ನಾಲ್ಕು ರಾಜ್ಯಗಳ 17 ಜಿಲ್ಲೆಗಳನ್ನು ಒಳಗೊಂಡ ಈ ಯೋಜನೆಗಳಿಂದ ರೈಲ್ವೆಜಾಲಕ್ಕೆ 540 ಕಿ.ಮೀ. ಹೆಚ್ಚುವರಿ ಮಾರ್ಗ ಸೇರ್ಪಡೆಯಾಗಲಿದೆ. ಕರ್ನಾಟಕಕ್ಕೆ ಸಂಬಂಧಿಸಿದಂತೆ ವೈಟ್‌ಫೀಲ್ಡ್ – ಬಂಗಾರಪೇಟೆ 3ನೇ ಮತ್ತು 4ನೇ ಮಾರ್ಗ ಹಾಗೂ ಹೊಸೂರು – ಒಮಲೂರು ಜೋಡಿಮಾರ್ಗ ಯೋಜನೆಗೆ ಅನುಮೋದನೆ ನೀಡಿದೆ.

ವೈಟ್‌ಫೀಲ್ಡ್–ಬಂಗಾರಪೇಟೆ ನಡುವೆ 47 ಕಿ.ಮೀ. ಉದ್ದದ 3ನೇ ಮತ್ತು 4ನೇ ರೈಲು ಮಾರ್ಗ ನಿರ್ಮಾಣವಾಗಲಿದೆ. ಈ ಕಾಮಗಾರಿಯಿಂದ ಬೆಂಗಳೂರು–ಚೆನ್ನೈ ರೈಲು ಕಾರಿಡಾರ್‌ನಲ್ಲಿ ಸಂಚಾರ ಸಾಮರ್ಥ್ಯ ಹೆಚ್ಚಲಿದ್ದು, ಪ್ರಯಾಣಿಕ ಮತ್ತು ಸರಕು ರೈಲುಗಳ ಸಂಚಾರವನ್ನು ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸಲು ಸಾಧ್ಯವಾಗಲಿದೆ. ಈ ಮಾರ್ಗವು ಕರ್ನಾಟಕ–ತಮಿಳುನಾಡು ನಡುವಿನ ಪ್ರಮುಖ ಅಂತರರಾಜ್ಯ ಸಂಪರ್ಕವಾಗಿದ್ದು, ಸರಕು ಸಾಗಣೆಯ ದೃಷ್ಟಿಯಿಂದಲೂ ಮಹತ್ವದ್ದಾಗಿದೆ.

ಹೊಸೂರು–ಒಮಲೂರು ಡಬ್ಲಿಂಗ್‌ನಿಂದ ಬೆಂಗಳೂರು–ಹೊಸೂರು ಭಾಗದಿಂದ ತಮಿಳುನಾಡಿನ ವಿವಿಧ ಪ್ರದೇಶಗಳತ್ತ ರೈಲು ಸಂಚಾರ ಸಾಮರ್ಥ್ಯ ಹೆಚ್ಚಲಿದೆ. ಪ್ರಯಾಣಿಕರ ಜತೆಗೆ ಕೈಗಾರಿಕಾ ಸರಕು ಸಾಗಣೆಯೂ ಮತ್ತಷ್ಟು ಸುಗಮವಾಗುವ ನಿರೀಕ್ಷೆಯಿದೆ.

### ಒಟ್ಟು 10021 ಕೋಟಿ ರೂ. ವೆಚ್ಚದ ಐದು ಬಹುಹಳಿ ಯೋಜನೆಗಳಿಗೆ ಅನುಮೋದನೆ



ಈ ಎರಡೂ ಯೋಜನೆಗಳು ಪೂರ್ಣಗೊಂಡರೆ ಕರ್ನಾಟಕದ ಪ್ರಮುಖ ಕೈಗಾರಿಕಾ ಹಾಗೂ ವಾಣಿಜ್ಯ ಪ್ರದೇಶಗಳಿಗೆ ರೈಲು ಸಂಪರ್ಕ ಬಲಗೊಳ್ಳಲಿದ್ದು, ರೈಲು ಸಂಚಾರದ ದಟ್ಟಣೆ ಕಡಿಮೆಯಾಗಲು ನೆರವಾಗಲಿದೆ.

ಕರ್ನಾಟಕದ ಎರಡು ಯೋಜನೆಗಳ ಜತೆಗೆ ಅರಕ್ಕೋಣಂ–ರೇಣಿಗುಂಟಾ 3ನೇ ಮತ್ತು 4ನೇ ಮಾರ್ಗ – 77 ಕಿ.ಮೀ, ಸೇಲಂ – ಕರೂರು – ದಿಂಡಿಗಲ್: ಡಬ್ಲಿಂಗ್ – 159 ಕಿ.ಮೀ, ಸಿಕಂದರಾಬಾದ್ (ಘಾಟ್ಕೇಸರ್)– ಖಾಜಿಪೇಟೆ: ಬಹುಹಳಿ ಯೋಜನೆ – 110 ಕಿ.ಮೀ ಯೋಜನೆಗೆ ಅನುಮೋದನೆ ಸಿಕ್ಕಿದೆ.

ಈ ಐದು ಯೋಜನೆಗಳನ್ನೂ 2029–30ರ ವೇಳೆಗೆ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ.

### 2121 ಗ್ರಾಮಗಳಿಗೆ ಸಂಪರ್ಕ 52 ಲಕ್ಷ ಜನರಿಗೆ ಅನುಕೂಲ

ನಾಲ್ಕು ರಾಜ್ಯಗಳಲ್ಲಿ ಅನುಷ್ಠಾನಗೊಳ್ಳುವ ಐದು ಯೋಜನೆಗಳಿಂದ 2,121 ಗ್ರಾಮಗಳಿಗೆ ರೈಲು ಸಂಪರ್ಕ ಸುಧಾರಣೆಯಾಗಲಿದ್ದು, 52 ಲಕ್ಷ ಜನರಿಗೆ ಪ್ರಯೋಜನ ದೊರೆಯಲಿದೆ. ಅಲ್ಲದೇ ತಿರುಪತಿ, ತಿರುತ್ತಣಿ, ತಿರುಚಾನೂರು, ಬಂಗಾರು ತಿರುಪತಿ, ಕೆಜಿಎಫ್, ಹೊಗೇನಕಲ್ ಜಲಪಾತ, ಹೊಸೂರು ಕೋಟೆ, ಮೆಟ್ಟೂರು ಅಣೆಕಟ್ಟು, ಕೊಡೈಕೆನಾಲ್ ಸೇರಿದಂತೆ ಹಲವು ಪ್ರಮುಖ ಪ್ರವಾಸಿ ಮತ್ತು ಧಾರ್ಮಿಕ ತಾಣಗಳಿಗೆ ರೈಲು ಸಂಪರ್ಕ ಸುಧಾರಿಸಲಿದೆ. ಕಲ್ಲಿದ್ದಲು, ಸಿಮೆಂಟ್, ಕಬ್ಬಿಣ–ಉಕ್ಕು, ಕಂಟೇನರ್‌ಗಳು, ವಾಹನಗಳು, ಆಹಾರ ಧಾನ್ಯಗಳು, ಪೆಟ್ರೋಲಿಯಂ ಉತ್ಪನ್ನಗಳು ಮತ್ತು ರಸಗೊಬ್ಬರಗಳ ಸಾಗಣೆಗೆ ಈ ಮಾರ್ಗಗಳು ಪ್ರಮುಖವಾಗಲಿವೆ. ಈ ಯೋಜನೆಗಳಿಂದ ವರ್ಷಕ್ಕೆ ಸುಮಾರು 47 ದಶಲಕ್ಷ ಟನ್ ಹೆಚ್ಚುವರಿ ಸರಕು ಸಾಗಣೆ ಸಾಮರ್ಥ್ಯ ಸೃಷ್ಟಿಯಾಗುವ ನಿರೀಕ್ಷೆಯಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

# ಏರೋಸ್ಪೇಸ್ ನೀತಿ – ಕಾರ್ಮಿಕರಿಗೆ ಉದ್ಯೋಗ ನಿಧಿ ಯೋಜನೆ ಜಾರಿಗೆ ರಾಜ್ಯ ಸಂಪುಟ ತೀರ್ಮಾನ



**ಬೆಂಗಳೂರು, ಸೆ.9:** ಬಾಹ್ಯಾಕಾಶ ಕ್ಷೇತ್ರದ ಬೆಳವಣಿಗೆಗೆ ಕರ್ನಾಟಕ ಏರೋಸ್ಪೇಸ್ ನೀತಿ 2026–31 ಹಾಗೂ ಹಿಂದುಳಿದ ಕಲ್ಯಾಣ ಮತ್ತು ಕಿತ್ತೂರು ಕರ್ನಾಟಕ ಭಾಗದ 10 ಜಿಲ್ಲೆಗಳಲ್ಲಿ ಹೊಸದಾಗಿ ನೇಮಕಗೊಳ್ಳುವ ಕಾರ್ಮಿಕರಿಗೆ ಎರಡು ವರ್ಷಗಳ ಕಾಲ ಮಾಸಿಕ 2500 ರೂ. ಪ್ರೋತ್ಸಾಹಧನ ನೀಡುವ 300 ಕೋಟಿ ರೂ. ವೆಚ್ಚದ "ಉದ್ಯೋಗ ನಿಧಿ" ಯೋಜನೆ ಜಾರಿ, ಪ್ರತಿ ಜಿಲ್ಲೆಯಲ್ಲಿ 50 ಸಾವಿರ ಉಚಿತ ನಿವೇಶನ ಹಂಚಿಕೆ ಹಾಗೂ ಪ್ರಸಕ್ತ ವರ್ಷದಿಂದಲೇ ಕಾಲೇಜುಗಳು, ವಿವಿಗಳಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆ ನಡೆಸಲು ರಾಜ್ಯ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ, ಬಾಹ್ಯಾಕಾಶ ಕ್ಷೇತ್ರದ ಬೆಳವಣಿಗೆ ದೃಷ್ಟಿಯಿಂದ ಕರ್ನಾಟಕ ಏರೋಸ್ಪೇಸ್ ನೀತಿ 2026–31ಕ್ಕೆ ರಾಜ್ಯ ಸಚಿವ ಸಂಪುಟ ಅನುಮೋದನೆ ನೀಡಿದೆ. ಏರೋಸ್ಪೇಸ್, ಡಿಫೆನ್ಸ್, ಏವಿಯೇಷನ್ ಉತ್ಪಾದನೆ, ನಾವೀನ್ಯತಾ ಕ್ಷೇತ್ರಗಳಲ್ಲಿ ಕರ್ನಾಟಕವನ್ನು ಕೇಂದ್ರವನ್ನಾಗಿ ರೂಪಿಸುವ ಗುರಿ ಹೊಂದಿದ್ದು, ಒಟ್ಟಾರೆ 60 ಸಾವಿರ ಕೋಟಿ ರೂ ಹೂಡಿಕೆ ಮಾಡಿ, 60 ಸಾವಿರ ಉದ್ಯೋಗ ಸೃಷ್ಟಿಸುವ ಗುರಿ ಹೊಂದಲಾಗಿದೆ ಎಂದರು.

**ಪ್ರತಿ ಜಿಲ್ಲೆಯಲ್ಲಿ 50 ಸಾವಿರ ಉಚಿತ ನಿವೇಶನ:** ಪ್ರತಿಯೊಂದು ಜಿಲ್ಲೆಗಳಲ್ಲಿ ಬಡವರಿಗೆ 50 ಸಾವಿರ ಉಚಿತ ನಿವೇಶನ ಹಂಚಿಕೆ ಮಾಡುವ ಕಾರ್ಯಕ್ರಮ ಜಾರಿಗೆ ಸಚಿವ ಸಂಪುಟ ಸಭೆ ಅನುಮತಿ ನೀಡಿದೆ. ರಾಜ್ಯದಲ್ಲಿ ಒಟ್ಟು 15 ಲಕ್ಷ ನಿವೇಶಗಳನ್ನು ಒದಗಿಸಲಾಗುವುದು. ಇತಿಹಾಸದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಉಚಿತ ನಿವೇಶಗಳನ್ನು ಒದಗಿಸಿರಲಿಲ್ಲ. ಬಡವರು, ವಸತಿ ಇಲ್ಲದವರಿಗೆ ಸೂರು ಒದಗಿಸುವ ಗುರಿ ಹೊಂದಲಾಗಿದೆ. ಸೆಪ್ಟೆಂಬರ್ ಮುಗಿಯುತ್ತಿದ್ದು, ಮೊದಲ ಹಂತದಲ್ಲಿ ಅಕ್ಟೋಬರ್‌ನಲ್ಲಿ ಐದು ಲಕ್ಷ, ನಂತರ ಎರಡು ಹಂತಗಳಲ್ಲಿ ತಲಾ ಐದು ಲಕ್ಷ ನಿವೇಶಗಳನ್ನು ವಿತರಿಸಲಾಗುವುದು ಎಂದು ಡಾ.ಜಿ. ಪರಮೇಶ್ವರ್ ತಿಳಿಸಿದರು. ಎಸ್.ಸಿ, ಎಸ್.ಟಿ ಕಾಲೋನಿಗಳನ್ನು ಅಭಿವೃದ್ಧಿಪಡಿಸಲು ತೀರ್ಮಾನಿಸಿದ್ದು, ಹಣ ಮತ್ತಿತರ ಕ್ರಿಯಾ ಯೋಜನೆಗಳನ್ನು ಸಂಬಂಧಪಟ್ಟ ಇಲಾಖೆಗಳು ರೂಪಿಸಲಿವೆ. ಅತ್ಯಾಧುನಿಕ ರೀತಿಯಲ್ಲಿ ಕಾಲೋನಿಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದರು.

**ವಿದ್ಯಾರ್ಥಿ ಸಂಘಗಳ ಚುನಾವಣೆ:** ಕಾಲೇಜುಗಳು ಮತ್ತು ವಿಶ್ವ ವಿದ್ಯಾಲಯಗಳಲ್ಲಿ ಪ್ರಸಕ್ತ ವರ್ಷದಿಂದಲೇ ಜಾರಿಗೆ ಬರುವಂತೆ ವಿದ್ಯಾರ್ಥಿ ಚುನಾವಣೆ ನಡೆಸಲು ರಾಜ್ಯ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ. ವಿದ್ಯಾರ್ಥಿಗಳಲ್ಲಿ ನಾಯಕತ್ವ ಬೆಳೆಸುವ, ಪ್ರಜಾತಂತ್ರದ ಮೌಲ್ಯಗಳನ್ನು ಉತ್ತೇಜಿಸಲು ಬಜೆಟ್‌ನಲ್ಲಿ ಘೋಷಿಸಿರುವ ಕಾರ್ಯಕ್ರಮದಂತೆ ಕಾಲೇಜುಗಳಲ್ಲಿ ಪ್ರಸಕ್ತ ವರ್ಷದಿಂದ ವಿದ್ಯಾರ್ಥಿ ಚುನಾವಣೆ ನಡೆಸಲಾಗುವುದು. ಈ ಹಿಂದೆ ವಿದ್ಯಾರ್ಥಿಗಳ ಚುನಾವಣೆಯನ್ನು ನಿಷೇಧಿಸಲಾಗಿದ್ದು, ಇದೀಗ ಮತ್ತೆ ವಿ.ವಿ.ಗಳು, ಕಾಲೇಜುಗಳಲ್ಲಿ ಚುನಾವಣೆ ನಡೆಸಲು ತೀರ್ಮಾನಿಸಲಾಗಿದೆ. ಒಂದು ಕಾಲೇಜಿನಲ್ಲಿ ಒಬ್ಬರು ಅಧ್ಯಕ್ಷರು, ಎರಡು ಉಪಾಧ್ಯಕ್ಷರಿಗೆ ಚುನಾವಣೆ ನಡೆಯಲಿದ್ದು, ಇದರಲ್ಲಿ ಒಂದು ಉಪಾಧ್ಯಕ್ಷ ಸ್ಥಾನ ಮಹಿಳೆಗೆ ಮೀಸಲಾಗಿದೆ. ಒಂದು ಪ್ರಧಾನ ಕಾರ್ಯದರ್ಶಿ, ಎರಡು ಜಂಟಿ ಕಾರ್ಯದರ್ಶಿಗಳಲ್ಲಿ ಒಂದು ಸ್ಥಾನ ಮಹಿಳೆಗೆ ದೊರೆಯಲಿದೆ. ಆರು ಮಂದಿ ಕಾರ್ಯಕಾರಿ ಸಮಿತಿಯಲ್ಲಿ ಎರಡು ಮಹಿಳೆಯರಿಗೆ ಮೀಸಲಿರಿಸಲಾಗಿದೆ. ಈ ಚುನಾವಣೆಯಲ್ಲಿ ಜಾತಿ ಆಧಾರಿತ ಮೀಸಲಾತಿ ಇರುವುದಿಲ್ಲ. ವಿದ್ಯಾರ್ಥಿಗಳಲ್ಲಿ ಜಾತಿ ತರಬಾರದೆಂದು ಮೀಸಲಾತಿಗೆ ಅವಕಾಶ ಕಲ್ಪಿಸಿಲ್ಲ ಎಂದರು.

ಯಾವುದೋ ಒಂದು ಕಾಲೇಜಿನ ವಿದ್ಯಾರ್ಥಿಗಳು ಚುನಾವಣೆ ನಡೆಸಲು ಆಸಕ್ತಿ ತೋರದಿದ್ದರೆ ಬಲವಂತ ಮಾಡುವುದಿಲ್ಲ. ಆದರೆ ಆಡಳಿತ ಮಂಡಳಿ ಚುನಾವಣೆ ನಡೆಸುವುದಿಲ್ಲ ಎಂದು ನಿರ್ಧರಿಸಲು ಸಾಧ್ಯವಿಲ್ಲ. ಸಚಿವ ಡಾ. ಶರಣ್ ಪ್ರಕಾಶ್ ಪಾಟೀಲ್ ಅಧ್ಯಕ್ಷತೆಯ ಸಮಿತಿ ರಾಜ್ಯದಲ್ಲಿ ಅಧ್ಯಯನ ನಡೆಸಿ ನೀಡಿದ ವರದಿಯನ್ನು ಸರ್ಕಾರ ಅಂಗೀಕರಿಸಿದೆ. ವಿದ್ಯಾರ್ಥಿ ಸಂಘಟನೆಗಳು, ರಾಜಕೀಯ ಪಕ್ಷಗಳಿಗೆ ವಿದ್ಯಾರ್ಥಿ ಸಂಘದ ಚುನಾವಣೆಗಳಲ್ಲಿ ಭಾಗವಹಿಸಲು ಅವಕಾಶ ನೀಡುವುದಿಲ್ಲ. ರಾಜಕೀಯ ಪಕ್ಷಗಳು, ಸಂಘಟನೆಗಳನ್ನು ಕರೆಸಿಕೊಂಡು ಭಾಷಣ ಮಾಡಿಸಲು ಅನುಮತಿಸುವುದಿಲ್ಲ. ಚುನಾವಣೆಗೆ ಸ್ಪರ್ಧಿಸುವವರು, ಭಾಗವಹಿಸುವವರು ಸಂಘಟನೆಗಳಲ್ಲಿ ಇರಬಹುದು. ಇದನ್ನು ನಿಯಂತ್ರಿಸಲು ಸಾಧ್ಯವಿಲ್ಲ. ರಾಜಕೀಯ ಚಟುವಟಿಕೆ, ಹಣಬಲ, ತೋಳ್ಬಲವನ್ನು ಸೂಕ್ತ ರೀತಿಯಲ್ಲಿ ನಿಯಂತ್ರಿಸಲಾಗುವುದು ಎಂದರು.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com

Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20

Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

||ಶ್ರೀ ಗುರುಬಸವಲಿಂಗಾಯ ನಮಃ||



## ಬಸವ ಸಮಿತಿ(ರಿ), ಬೆಂಗಳೂರು



ಬಸವ ಸಮಿತಿಯ ಸಂಸ್ಥಾಪಕರೂ ಹಾಗೂ ಏಕೈಕ ಕನ್ನಡಿಗ ರಾಷ್ಟ್ರಪತಿಗಳಾದ ಸನ್ಮಾನ್ಯಶ್ರೀ

# ಡಾ. ಬಿ.ಡಿ. ಜತ್ತಿಯವರ 114ನೇ ಜಯಂತ್ಯೋತ್ಸವ

## ಬಸವ ಸಮಿತಿಯ 62ನೇ ಸಂಸ್ಥಾಪನಾ ದಿನಾಚರಣೆ

ದಿನಾಂಕ : 10ನೇ ಸೆಪ್ಟೆಂಬರ್ 2026, ಗುರುವಾರ ಬೆಳಗ್ಗೆ : 10.00 ಗಂಟೆಗೆ
ಸ್ಥಳ: ಅನುಭವ ಮಂಟಪ, ಬಸವ ಸಮಿತಿ, ಬೆಂಗಳೂರು: 560 001



**ದಿವ್ಯ ಸಾನಿಧ್ಯ**

ಪರಮ ಪೂಜ್ಯ ಜಗದ್ಗುರುಗಳಾದ ಶ್ರೀ ಶ್ರೀ ಶಿವರಾತ್ರಿದೇಶಿಕೇಂದ್ರ ಮಹಾಸ್ವಾಮಿಗಳವರು
ಶ್ರೀ ಸುತ್ತೂರು ವೀರಸಿಂಹಾಸನ ಸಂಸ್ಥಾನ ಮಠ. ಸುತ್ತೂರು ಮಠ, ಮೈಸೂರು



**ದಿವ್ಯ ಸಾನಿಧ್ಯ**

ಪರಮಪೂಜ್ಯಶ್ರೀ ಶಿವರುದ್ರ ಮಹಾಸ್ವಾಮಿಗಳು
ಅಧ್ಯಕ್ಷರು, ಬೇಲಿಮಠ ಮಹಾ ಸಂಸ್ಥಾನ, ಬೆಂಗಳೂರು



**ಸನ್ಮಾನ**

ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳಾಗಿ ಪ್ರಥಮ ಬಾರಿಗೆ ಬಸವ ಸಮಿತಿಗೆ ಆಗಮಿಸುತ್ತಿರುವ
ಸನ್ಮಾನ್ಯಶ್ರೀ ಡಿ.ಕೆ.ಶಿವಕುಮಾರ್
ಅವರಿಗೆ ಗೌರವಪೂರ್ವಕ ಸನ್ಮಾನ



**ಪ್ರಶಸ್ತಿ ಪ್ರದಾನ**

'ದಾಸೋಹ ರತ್ನ'
ಸದ್ಗುರು ಶ್ರೀ ಮಧುಸೂಧನ ಸಾಯಿ ಅವರಿಗೆ ಸಂಸ್ಥಾಪಕರು, ಶ್ರೀ ಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯ, ಶ್ರೀ ಮಧುಸೂಧನ ಸಾಯಿ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಕೇಂದ್ರ



**ದತ್ತಿ ದಾಸೋಹಿಗಳು**

ಶ್ರೀ ಶಂಕರ ಮಹದೇವ ಬಿದರಿ
ಕರ್ನಾಟಕ ರಾಜ್ಯ ಡೈರೆಕ್ಟರ್ ಜನರಲ್ ಮತ್ತು ಪೊಲೀಸ್ ಮಹಾನಿರ್ದೇಶಕರು (ನಿ.)

ತಮಗೆ ಆದರದ ಸುಸ್ವಾಗತ
ಡಾ.ಅರವಿಂದ ಜತ್ತಿ, ಅಧ್ಯಕ್ಷರು, ಬಸವ ಸಮಿತಿ, ಬೆಂಗಳೂರು



**ಅಧ್ಯಕ್ಷತೆ**

ಡಾ. ಅರವಿಂದ ಜತ್ತಿ
ಅಧ್ಯಕ್ಷರು, ಬಸವ ಸಮಿತಿ ಬೆಂಗಳೂರು

ಬೆಳಗ್ಗೆ: 10 ಗಂಟೆಯಿಂದ ವಚನ ಸಂಗೀತ: ಶ್ರೀ ಸತ್ಯಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯದ ವಿದ್ಯಾರ್ಥಿ ವೃಂದದವರಿಂದ

## ನಿತ್ಯ ಪಂಚಾಂಗ 10.09.2026 ಗುರುವಾರ



ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ದಕ್ಷಿಣಾಯಣ ಗ್ರೀಷ್ಮ ಋತು, ಚಾಂದ್ರಮಾನ ಶ್ರಾವಣ-ಬಾದ್ರಪದ ಮಾಸ

ಶ್ರಾವಣ ಬಹುಳ, ಚತುರ್ದಶಿ,
ಮಖ ನಕ್ಷತ್ರ, ಹುಬ್ಬಳ್ಳಿ ಗುರುಸಿದ್ಧೇಶ್ವರ ರಥ,
ಕೊಡಿಪ್ಪಾಡಿ ಜನಾರ್ದನತೀರ್ಥ ಪುಣ್ಯದಿನ,
ಜಾಗವೇಲು ಆಂಜನೇಯ ಉತ್ಸವ, ಒಂಟಿಯಂಗಡಿ ಜಾತ್ರೆ

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | ಸ. 5.04– 6.33 | 12.00– 1.30 | 3.00– 4.00 |
| ಸೋಮ | ಬೆ. 7.20– 9.04 | 10.30–12.00 | 1.30– 3.00 |
| ಮಂಗಳ | ಮ. 3.25– 4.59 | 9.00–10.30 | 12.00– 1.30 |
| ಬುಧ | ಮ.12.16– 1.50 | 7.30– 9.00 | 10.30– 12.00 |
| ಗುರು | ಮ. 1.50– 3.29 | 6.00– 7.30 | 9.00– 10.30 |
| ಶುಕ್ರ | ಬೆ.10.42–12.16 | 3.00– 4.30 | 7.30– 9.00 |
| ಶನಿ | ಬೆ. 9.07–10.41 | 1.30– 3.00 | 6.00– 7.30 |

# ದೃಢ ಕರ್ನಾಟಕದ ಸಂಕಲ್ಪ: ಸರ್ಕಾರದ 100 ದಿನಗಳ ಯಶಸ್ವಿ ಆಡಳಿತ

## ವಿಧಾಸೌಧದಲ್ಲಿ "ಶತಕದ ಪಥ, ಪ್ರಗತಿಯ ರಥ" ವಿಶೇಷ ಕಾರ್ಯಕ್ರಮ ಇಂದು

**ಬೆಂಗಳೂರು, ಸೆ.9:** ಕರ್ನಾಟಕ ಸರ್ಕಾರದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದ ಆಡಳಿತವು 100 ದಿನಗಳನ್ನು ಯಶಸ್ವಿಯಾಗಿ ಪೂರೈಸಿದ ಹಿನ್ನೆಲೆಯಲ್ಲಿ, "ದೃಢ ಕರ್ನಾಟಕದ ಸಂಕಲ್ಪ – ಶತಕದ ಪಥ, ಪ್ರಗತಿಯ ರಥ" ಎಂಬ ವಿಶೇಷ ಕಾರ್ಯಕ್ರಮವನ್ನು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ 2026ನೇ ಸೆಪ್ಟೆಂಬರ್ 10 ರ ಗುರುವಾರ ಬೆಳಿಗ್ಗೆ 10.00 ಗಂಟೆಗೆ ಆಯೋಜಿಸಲಾಗಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯ ನೆರವೇರಿಸಲಿದ್ದು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಹಾಗೂ ಕಂದಾಯ ಮತ್ತು ಕ್ರೀಡಾ ಇಲಾಖೆ ಸಚಿವ ಡಾ.ಜಿ.ಪರಮೇಶ್ವರ್, ರಾಜ್ಯ ಸಂಪುಟದ ಎಲ್ಲಾ ಸಚಿವರು, ಶಾಸಕರು ಮತ್ತು ರಾಜ್ಯಸಭಾ ಸದಸ್ಯರು, ಲೋಕಸಭಾ ಸದಸ್ಯರು ಹಾಗೂ ವಿಧಾನಪರಿಷತ್ತಿನ ಸದಸ್ಯರು, ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಸೇರಿದಂತೆ ಸರ್ಕಾರದ ಎಲ್ಲಾ ಇಲಾಖೆಗಳ ಹಿರಿಯ ಅಧಿಕಾರಿಗಳು ಭಾಗವಹಿಸಲಿದ್ದಾರೆ.

### ಫಲಾನುಭವಿಗಳೊಂದಿಗೆ ಸಿಎಂ ಸಂವಾದ

ಸರ್ಕಾರದ ಪ್ರಮುಖ ಐದು ಗ್ಯಾರಂಟಿ ಯೋಜನೆಗಳಾದ ಅನ್ನಭಾಗ್ಯ ಯೋಜನೆ, ಗೃಹಲಕ್ಷ್ಮಿ ಯೋಜನೆ, ಶಕ್ತಿ ಯೋಜನೆ, ಯುವನಿಧಿ ಯೋಜನೆ, ಗೃಹಜ್ಯೋತಿ ಯೋಜನೆ ಹಾಗೂ ವಿವಿಧ ಕ್ಷೇತ್ರದ ಕಾರ್ಮಿಕರನ್ನು ಒಳಗೊಂಡಂತೆ, ಸಮಾಜದ ವಿವಿಧ ವರ್ಗಗಳ ಫಲಾನುಭವಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, ಅವರೊಂದಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನೇರವಾಗಿ ಸಂವಾದ ನಡೆಸಲಿದ್ದಾರೆ.



ಸಿಎಂ ಡಿ.ಕೆ.ಶಿವಕುಮಾರ್ ಅಧ್ಯಕ್ಷತೆಯಲ್ಲಿ ಅಪೆಕ್ಸ್ ಬ್ಯಾಂಕ್ ಚುನಾವಣೆಗೆ ಸಂಬಂಧಿಸಿದಂತೆ ಗೃಹ ಕಚೇರಿ ಕೃಷ್ಣಾದಲ್ಲಿ ಬುಧವಾರ ಸಭೆ ನಡೆಯಿತು. ಸಚಿವರಾದ ಲಕ್ಷ್ಮಣ್ ಸವದಿ, ನರೇಂದ್ರಸ್ವಾಮಿ, ಶಾಸಕರಾದ ಶಿವಾನಂದ ಪಾಟೀಲ್, ಕೆ.ಎನ್. ರಾಜಣ್ಣ, ಶಿವರಾಮ್ ಹೆಬ್ಬಾರ್, ಎಸ್.ಟಿ ಸೋಮಶೇಖರ್ ಹಾಗೂ ವಿಧಾನ ಪರಿಷತ್ ಸದಸ್ಯ ಎಸ್. ರವಿ, ಮಾಜಿ ಶಾಸಕ ಹಾಗೂ ಅಪೆಕ್ಸ್ ಬ್ಯಾಂಕ್ ಮಾಜಿ ಅಧ್ಯಕ್ಷ ಬೆಳ್ಳಿ ಪ್ರಕಾಶ್ ಉಪಸ್ಥಿತರಿದ್ದರು.

# ನೂರು ದಿನ, ನೂರಾರು ಅಕ್ರಮ ಆರ್. ಅಶೋಕ್ ಆರೋಪ



**ಬೆಂಗಳೂರು, ಸೆ.9:** ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ 100 ದಿನ ಪೂರೈಸಿದ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ಗುರುವಾರ ಆಯೋಜಿಸಿರುವ ಕಾರ್ಯಕ್ರಮಕ್ಕೆ ವಿರೋಧ ಪಕ್ಷ ನಾಯಕ ಆರ್. ಅಶೋಕ್ ಆಕ್ಷೇಪ ವ್ಯಕ್ತಪಡಿಸಿದ್ದು, ನೂರು ವೈಫಲ್ಯಗಳನ್ನು ಮುಂದಿಟ್ಟುಕೊಂಡು ಯಾವ ರೀತಿ ಸಾಧನೆ ಎಂದು ಬಿಂಬಿಸಿಕೊಳ್ಳುತ್ತಿದ್ದೀರಾ ಎಂದು ಪ್ರಶ್ನಿಸಿದ್ದಾರೆ.

ಈ ಬಗ್ಗೆ ಎಕ್ಸ್ ಖಾತೆಯಲ್ಲಿ ಸಂದೇಶ ಹಂಚಿಕೊಂಡಿರುವ ಅವರು, ಇದು ಸಾಧನೆಯ ಪಟ್ಟಿಯಲ್ಲ ಸರ್ಕಾರದ ಚಾರ್ಜ್‌ಶೀಟ್ ಎಂದಿದ್ದಾರೆ. ವೈಫಲ್ಯಗಳ ಸಂಭ್ರಮಾಚರಣೆ ಎಂದಿಗೂ ವೈಫಲ್ಯವೇ ಹೊರತು ಸಾಧನೆಯಾಗಲು ಸಾಧ್ಯವಿಲ್ಲ ಎಂದಿದ್ದಾರೆ.

ಸಂಪುಟದಲ್ಲಿ ಮಹಿಳೆಯರಿಗಿಲ್ಲ ಪ್ರಾತಿನಿಧ್ಯ, ವಾಲ್ಮೀಕಿ ಹಗರಣ ಮತ್ತು ಪಾರ್ಕ್ ಜಾಗ ಮಾರಾಟದ ಯತ್ನ, ಸಂಕಟದಲ್ಲಿ ರೈತರು, ಸರ್ಕಾರಿ ಹುದ್ದೆಗಳಿಗೆ ಲಂಚದ ದರಪಟ್ಟಿ, ಯೋಜನೆಗಳ ಎಡವಟ್ಟುಗಳು ಮತ್ತು ಕಾಗದಕ್ಕೆ ಸೀಮಿತವಾದ ಪಿಂಚಣಿ, ಮೂಲಸೌಕರ್ಯಗಳ ಕೊರತೆ ಮತ್ತು ಬ್ರಾಂಡ್ ಬೆಂಗಳೂರು ಬಿಕ್ಕಟ್ಟು ಹೀಗೆ ಸರ್ಕಾರದ 100 ದಿನಗಳ ಆಡಳಿತವನ್ನು ಪ್ರಶ್ನಿಸಿ ಪ್ರಮುಖ ಅಂಶಗಳ 'ಚಾರ್ಜ್‌ಶೀಟ್' ಒಂದನ್ನು ಬಿಡುಗಡೆ ಅಶೋಕ್ ಬಿಡುಗಡೆ ಮಾಡಿದ್ದಾರೆ.

# ಚಾರುಕೀರ್ತಿ ಭಟ್ಟಾರಕರ ವಿದೇಶ ಪ್ರವಾಸ'




**ಮುಂಬಯಿ, ಸೆ.09:** ಜಗದ್ಗುರು ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯ ಪಂಡಿತಚಾರ್ಯವರ್ಯ ಮಹಾಸ್ವಾಮೀಜಿ ವಿವಿಧ ಧಾರ್ಮಿಕ ಸಮ್ಮೇಳನಗಳಲ್ಲಿ ಪಾಲ್ಗೊಳ್ಳಲು ವಿದೇಶ ಯಾತ್ರೆ ದಿನಾಂಕ 10–9–26 ಯೋರೋಪ್‌ನ ಸ್ವೀಡನ್ ದೇಶದ ಗೊಥೆನ್ ಬರ್ಗ್, ಧ್ಯಾನ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಸೆ.15 ರಿಂದ ಕೆನಡಾ ದೇಶದ ಒಟ್ಟಾವ ಹತ್ತು ದಿನ ಜೈನರ ಪರ್ವಗಳ ರಾಜ ಎಂದು ಪ್ರಸಿದ್ದವಾದ ದಶಲಕ್ಷಣ ಪರ್ವ ಪ್ರವಚನ ನಡೆಸಿ ಕೊಡಲಿರುವರು, 27 ಸಾಮೂಹಿಕ ಕ್ಷಮಾವಳಿ 28 ರಿಂದ ಮೂರು ದಿನ ಟೋರಾಂಟೊ ಮಹಾನಗರ ಹಾಗೂ ಅಕ್ಟೋಬರ್ 1 ರಿಂದ ಮೂರು ದಿನ ಲಂಡನ್, ದಿನಾಂಕ 4 ರಂದು ದುಬೈ ಜಯ ಶ್ರೀಕೃಷ್ಣ ಸಮಿತಿ ತುಳುನಾಡ ಸಂಸ್ಕೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿ, ಕ್ಷೇತ್ರಕ್ಕೆ 5–10–26ಕ್ಕೆ ವಾಪಾಸಾಗಲಿರುವರು ಎಂದು ಮಠದ ವ್ಯವಸ್ಥಾಪಕ ಸಂಜಯಂತ ಕುಮಾರ್ ಶೆಟ್ಟಿ ತಿಳಿಸಿದ್ದಾರೆ.

# ಕರ್ನಾಟಕಕ್ಕೆ ಚತುಷ್ಪಥ ರೈಲು ಯೋಜನೆ ನೀಡಿಲ್ಲ ಎಂಬುದು ತಪ್ಪು

**52 ಸಾವಿರ ಕೋಟಿಗೂ ಅಧಿಕ ಯೋಜನೆಗಳಿಗೆ ಮಂಜೂರಾತಿ**

**ಎಂ.ಬಿ.ಪಾಟೀಲ್ ಆರೋಪಕ್ಕೆ ವಿ. ಸೋಮಣ್ಣ ತಿರುಗೇಟು**

**ನವದೆಹಲಿ, ಸೆ.9:** ಕರ್ನಾಟಕಕ್ಕೆ ಕೇಂದ್ರ ಸರ್ಕಾರ ರೈಲ್ವೆ ಕ್ಷೇತ್ರದಲ್ಲಿ ಯಾವುದೇ ಆದ್ಯತೆ ನೀಡುತ್ತಿಲ್ಲ ಎಂಬ ಕೈಗಾರಿಕಾ ಸಚಿವ ಎಂಬಿ ಪಾಟೀಲ್ ಅವರ ಆರೋಪಕ್ಕೆ ಕೇಂದ್ರ ರೈಲ್ವೆ ರಾಜ್ಯ ಖಾತೆ ಸಚಿವ ವಿ. ಸೋಮಣ್ಣ ತಿರುಗೇಟು ನೀಡಿದ್ದಾರೆ. ಹೈಡೆನ್ಸಿಟಿ ನೆಟ್‌ವರ್ಕ್ ಆಧಾರದಲ್ಲಿ ರೈಲ್ವೆ ಮಾರ್ಗಗಳ ಚತುಷ್ಪಥ ವರ್ಗೀಕರಣಕ್ಕೆ ಕೇಂದ್ರ ಸರ್ಕಾರ ತಾಂತ್ರಿಕ ಮಾನದಂಡದಂತೆ ಆದ್ಯತೆ ನೀಡುತ್ತದೆ. ಇದನ್ನು ರಾಜ್ಯವಾರು ಅಥವಾ ರಾಜಕೀಯ ಪರಿಗಣನೆಯ ಆಧಾರದಲ್ಲಿ ನಿರ್ಧರಿಸಲಾಗುವುದಿಲ್ಲ ಎಂದು ಅವರು ಹೇಳಿದ್ದಾರೆ.

ದೆಹಲಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ದೇಶದಲ್ಲಿ ತಾಂತ್ರಿಕ ಮಾನದಂಡದ ಆಧಾರದಲ್ಲಿ ಏಳು ಪ್ರಮುಖ ಹೈ ಡೆನ್ಸಿಟಿ ರೈಲ್ವೆ ಮಾರ್ಗಗಳನ್ನು ಗುರುತಿಸಲಾಗಿದ್ದು, ಅವುಗಳ ಒಟ್ಟು ಉದ್ದ ಸುಮಾರು 11 ಸಾವಿರ ಕಿ.ಮೀ. ಈ ಮಾರ್ಗಗಳು ದೇಶದ ರೈಲ್ವೆ ಜಾಲದ ಸುಮಾರು ಶೇ.16ರಷ್ಟಿದ್ದರೂ, ಒಟ್ಟು ರೈಲು ಸಂಚಾರದ ಸುಮಾರು ಶೇ.41ರಷ್ಟು ಹೊರೆ ನಿರ್ವಹಿಸುತ್ತವೆ. ದೆಹಲಿ–ಹೌರಾ, ಹೌರಾ–ಚೆನ್ನೈ, ಚೆನ್ನೈ–ಮುಂಬೈ, ಮುಂಬೈ–ದೆಹಲಿ, ದೆಹಲಿ–ಚೆನ್ನೈ, ಮುಂಬೈ–ಹೌರಾ ಹಾಗೂ ದೆಹಲಿ–ಗುವಾಹಟಿ ಮಾರ್ಗಗಳು ಈ ವರ್ಗದಲ್ಲಿವೆ ಎಂದು ಅವರು ವಿವರಿಸಿದರು.

ಕರ್ನಾಟಕಕ್ಕೆ ಹೈಡೆನ್ಸಿಟಿ ನೆಟ್‌ವರ್ಕ್ ಮಾರ್ಗದ ಚತುಷ್ಪಥ ಯೋಜನೆ ನೀಡಿಲ್ಲ ಎಂಬ ಆರೋಪವನ್ನು ತಳ್ಳಿಹಾಕಿದ ಸೋಮಣ್ಣ, ಚೆನ್ನೈ–ಮುಂಬೈ ಹೈ ಡೆನ್ಸಿಟಿ ನೆಟ್ವರ್ಕ್ ಮಾರ್ಗ ಕರ್ನಾಟಕದ ರಾಯಚೂರು ಮತ್ತು ಕಲಬುರಗಿ ಜಿಲ್ಲೆಗಳ ಮೂಲಕವೇ ಹಾದುಹೋಗುತ್ತದೆ ಎಂದು ಹೇಳಿದ್ದಾರೆ. ವಾಡಿ–ರಾಯಚೂರು ವಿಭಾಗದಲ್ಲಿ ವಿದ್ಯುತ್ ಟ್ರ್ಯಾಕ್ಷನ್ ವ್ಯವಸ್ಥೆಯನ್ನು 1X25 ಕೆ.ವಿ.ಯಿಂದ 2X25 ಕೆ.ವಿ.ಗೆ ಮೇಲ್ದರ್ಜೆಗೇರಿಸಲು 220 ಕೋಟಿ ವೆಚ್ಚದ ಯೋಜನೆಗೆ ಅನುಮೋದನೆ ನೀಡಲಾಗಿದೆ. ಇದು ಹೈ ಡೆನ್ಸಿಟಿ ನೆಟ್‌ವರ್ಕ್ ಮಾರ್ಗದ ಭಾಗವಾಗಿದ್ದು, ಕರ್ನಾಟಕಕ್ಕೂ ಇದರ ಪ್ರಯೋಜನ ದೊರೆಯಲಿದೆ ಎಂದು ಹೇಳಿದ್ದಾರೆ.

ಹೈಡೆನ್ಸಿಟಿ ನೆಟ್‌ವರ್ಕ್ ಮಾರ್ಗದ ಆಯ್ಕೆ ವಾರ್ಷಿಕ ಸರಕು ಸಾಗಣೆ ಪ್ರಮಾಣ ಸೇರಿದಂತೆ ತಾಂತ್ರಿಕ ಮಾನದಂಡಗಳ ಆಧಾರದಲ್ಲಿ ನಡೆಯುತ್ತದೆ. ಹೀಗಾಗಿ ಇದನ್ನು ಯಾವುದೇ ರಾಜ್ಯದ ವಿರುದ್ಧದ ತಾರತಮ್ಯ ಎಂದು ಬಿಂಬಿಸುವುದು ಸರಿಯಲ್ಲ ಎಂದು ತಿರುಗೇಟು ನೀಡಿದರು.

### 52 ಸಾವಿರ ಕೋಟಿಗೂ ಅಧಿಕ ಯೋಜನೆಗಳಿಗೆ ಮಂಜೂರಾತಿ



ಕರ್ನಾಟಕದಲ್ಲಿ ರೈಲ್ವೆ ಅಭಿವೃದ್ಧಿಗೆ ಮೋದಿ ಸರ್ಕಾರದ ಅವಧಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಹಣ ನೀಡಲಾಗಿದೆ ಎಂದು ಸೋಮಣ್ಣ ಹೇಳಿದ್ದಾರೆ. ಹಿಂದಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಕರ್ನಾಟಕಕ್ಕೆ ವಾರ್ಷಿಕ ಸರಾಸರಿ ಸುಮಾರು 830–882 ಕೋಟಿ ರೈಲ್ವೆ ಅನುದಾನ ದೊರೆಯುತ್ತಿದ್ದರೆ, ಮೋದಿ ಸರ್ಕಾರದ ಅವಧಿಯಲ್ಲಿ ಇದು ವರ್ಷಕ್ಕೆ 7,500 ಕೋಟಿಗೂ ಅಧಿಕವಾಗಿದೆ. 2026ರಲ್ಲಿಯೂ ರಾಜ್ಯದ ರೈಲ್ವೆ ಮೂಲಸೌಕರ್ಯಕ್ಕೆ 7,748 ಕೋಟಿ ಹಂಚಿಕೆ ಮಾಡಲಾಗಿದೆ.

ಕಳೆದ 12 ವರ್ಷಗಳಲ್ಲಿ ಕರ್ನಾಟಕದಲ್ಲಿ 52 ಸಾವಿರ ಕೋಟಿಗೂ ಅಧಿಕ ಮೌಲ್ಯದ ರೈಲ್ವೆಯೋಜನೆಗಳಿಗೆ ಮಂಜೂರಾತಿ ನೀಡಲಾಗಿದೆ ಎಂಬುದು ಸೋಮಣ್ಣ ಅವರ ಪ್ರಮುಖ ಅಂಶವಾಗಿದೆ. ರಾಜ್ಯದಲ್ಲಿ 52 ಸಾವಿರ ಕೋಟಿಗೂ ಅಧಿಕ ಮೊತ್ತದ ರೈಲ್ವೆ ಕಾಮಗಾರಿಗಳು ಪ್ರಗತಿಯಲ್ಲಿವೆ.

ಕಲ್ಯಾಣ ಕರ್ನಾಟಕಕ್ಕೂ ಹಲವು ಯೋಜನೆ

ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಮಾತ್ರ 12,900 ಕೋಟಿ ಮೌಲ್ಯದ ರೈಲ್ವೆ ಯೋಜನೆಗಳಿಗೆ ಮಂಜೂರಾತಿ ನೀಡಲಾಗಿದೆ. ಬಳ್ಳಾರಿ–ಚಿಕ್ಕಜಾಜೂರು ಡಬ್ಲಿಂಗ್ ಯೋಜನೆಗೆ 3,400 ಕೋಟಿ ಮಂಜೂರಾಗಿದ್ದು, ಹಗರಿಬೊಮ್ಮನಹಳ್ಳಿ ಸೇರಿದಂತೆ ವಿವಿಧ ಭಾಗಗಳಲ್ಲಿ ರಸ್ತೆ ಮೇಲ್ಸೇತುವೆ ಹಾಗೂ ಇತರ ಮೂಲಸೌಕರ್ಯ ಕಾಮಗಾರಿಗಳೂ ಕೈಗೆತ್ತಿಕೊಳ್ಳಲಾಗಿದೆ. ರಾಜ್ಯದ ಪ್ರಮುಖ ಮಾರ್ಗಗಳಿಗೆ ಹೈ ಡೆನ್ಸಿಟಿ ನೆಟ್ವರ್ಕ್ ಸ್ಥಾನಮಾನ ಇಲ್ಲದಿದ್ದರೂ ಅವುಗಳ ಸಾಮರ್ಥ್ಯ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಸೋಮಣ್ಣ ಹೇಳಿದ್ದಾರೆ.

ಬಳ್ಳಾರಿ–ಹೊಸಪೇಟೆ 3ನೇ ಮತ್ತು 4ನೇ ಮಾರ್ಗಕ್ಕೆ 2,380 ಕೋಟಿ, ಬಳ್ಳಾರಿ–ಚಿಕ್ಕಜಾಜೂರು ಡಬ್ಲಿಂಗ್‌ಗೆ 3,400 ಕೋಟಿ, ತುಮಕೂರು–ಬೆಂಗಳೂರು 3ನೇ ಮತ್ತು 4ನೇ ಮಾರ್ಗ DPR ಪೂರ್ಣಗೊಂಡಿದ್ದು, ಮುಂದಿನ ಹಂತದ ಕ್ರಮಕ್ಕೆ ಸಿದ್ಧತೆ ಮಾಡಿಕೊಂಡಿದೆ. ತುಮಕೂರು ವಸಂತನರಸಾಪುರ ದಕ್ಷಿಣ ಏಷ್ಯಾದ ಪ್ರಮುಖ ಬಹುಹಂತದ ಸಾಗಣೆ ಪಾರ್ಕ್ ಅಭಿವೃದ್ಧಿ ಪಡಿಸಲಾಗುವುದು.

ಭೂಸ್ವಾಧೀನ ವಿಳಂಬದ ಆರೋಪ

ರೈಲ್ವೆ ಯೋಜನೆಗಳ ಅನುಷ್ಠಾನದಲ್ಲಿ ರಾಜ್ಯ ಸರ್ಕಾರದಿಂದ ಭೂಸ್ವಾಧೀನ ವಿಳಂಬ ವಾಗುತ್ತಿದೆ ಎಂಬ ಆರೋಪವನ್ನೂ ಸೋಮಣ್ಣ ಮಾಡಿದ್ದಾರೆ. 3,000 ಎಕರೆಗೂ ಹೆಚ್ಚು ಭೂಮಿ ಇನ್ನೂ ರೈಲ್ವೆಗೆ ಹಸ್ತಾಂತರವಾಗಬೇಕಿದೆ ಎಂದು ಅವರು ಹೇಳಿದ್ದಾರೆ. ಬೆಳಗಾವಿ–ಧಾರವಾಡ ಹೊಸ ರೈಲುಮಾರ್ಗಕ್ಕೆ 2019–20ರಲ್ಲೇ ಅನುಮೋದನೆ ದೊರೆತಿದ್ದರೂ, ಭೂಮಿ ಹಸ್ತಾಂತರದಲ್ಲಿ ವಿಳಂಬವಾಗಿದೆ. ಇದೇ ರೀತಿ ಹೆಜ್ಜಾಲ–ಚಾಮರಾಜನಗರ 141 ಕಿ.ಮೀ. ಯೋಜನೆಯನ್ನು ಪುನಶ್ಚೇತನ ಗೊಳಿಸುವ ಪ್ರಯತ್ನ ನಡೆದಿದ್ದರೂ, 2024ರ ಡಿಸೆಂಬರ್‌ನಲ್ಲಿ ರಾಜ್ಯ ಹಣಕಾಸು ಇಲಾಖೆಯಿಂದ ಒಪ್ಪಿಗೆ ನೀಡಲು ಸಾಧ್ಯವಿಲ್ಲ ಎಂಬ ಪತ್ರ ಬಂದಿತ್ತು ಎಂದು ಸೋಮಣ್ಣ ಆರೋಪಿಸಿದ್ದಾರೆ.

ಮಂಗಳೂರಿನ ರೈಲ್ವೆ ವ್ಯಾಪ್ತಿಯಲ್ಲೂ ಮಹತ್ವದ ಬದಲಾವಣೆ

ಮಂಗಳೂರು ಪ್ರದೇಶವನ್ನು ದಕ್ಷಿಣ ರೈಲ್ವೆಯ ಪಾಲಕ್ಕಾಡ್ ವಿಭಾಗದಿಂದ ನೈಋತ್ಯ ರೈಲ್ವೆಯ ಮೈಸೂರು ವಿಭಾಗದ ವ್ಯಾಪ್ತಿಗೆ ತರಲಾಗಿದೆ ಇದರಿಂದ ಮಂಗಳೂರು ರೈಲ್ವೆ ಪ್ರದೇಶದ ಸುಮಾರು 55 ಕಿ.ಮೀ. ವ್ಯಾಪ್ತಿಯು ಮೈಸೂರು ವಿಭಾಗದ ಅಡಿಗೆ ಬರಲಿದೆ. ಇದರಿಂದ ಮೈಸೂರು ವಿಭಾಗಕ್ಕೆ ವಾರ್ಷಿಕ 600–700 ಕೋಟಿ ಹೆಚ್ಚುವರಿ ಆದಾಯ ಬರಬಹುದು. ಪಡೀಲ್ ಬದಲಿಗೆ ಉಳ್ಳಾಲವು ಮೈಸೂರು–ಪಾಲಕ್ಕಾಡ್ ವಿಭಾಗಗಳ ಹೊಸ ಇಂಟರ್‌ಚೇಂಜ್ ಆಗಲಿದೆ. ಈ ಬಗ್ಗೆ ರಾಜ್ಯ ಕಾಂಗ್ರೆಸ್ ನಾಯಕರು ಮಾತನಾಡುತ್ತಿಲ್ಲ. ಕೇರಳ ಲಾಬಿಗೆ ಮಣಿದು ಅವರು ಮಾತನಾಡುತ್ತಿಲ್ಲ ಎಂದು ಅವರು ಕಿಡಿಕಾರಿದರು.

# ಬರ ನಿರ್ವಹಣೆ ಕೈಪಿಡಿಯ ನಿಯಮಾವಳಿಯೇ ಅಸಮರ್ಪಕ

**ಬದಲಾಯಿಸುವಂತೆ ಒತ್ತಾಯಿಸಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯುವಂತೆ ಸಚಿವ ಈಶ್ವರ ಖಂಡ್ರೆ ಸಲಹೆ**

**ಬೆಂಗಳೂರು, ಸೆ.9:** ಬರಪೀಡಿತ ಪ್ರದೇಶ ಘೋಷಣೆಗಾಗಿ ಕೇಂದ್ರ ಸರ್ಕಾರ ರೂಪಿಸಿರುವ ಬರ ನಿರ್ವಹಣೆ ಕೈಪಿಡಿಯ ನಿಯಮಾವಳಿಯೇ ಅಸಮರ್ಪಕವಾಗಿದ್ದು, ಇದನ್ನು ಬದಲಾಯಿಸುವಂತೆ ಒತ್ತಾಯಿಸಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ಸಲಹೆ ನೀಡಿದ್ದಾರೆ.

ರಾಜ್ಯದಲ್ಲಿ 2026ರ ಮುಂಗಾರು ಮತ್ತು ಬರ ಪರಿಸ್ಥಿತಿ ಹಾಗೂ ಇತರ ನೈಸರ್ಗಿಕ ವಿಕೋಪ ಪರಿಸ್ಥಿತಿಗಳ ಪರಾಮರ್ಶೆ ಮತ್ತು ಸಮರ್ಥವಾಗಿ ನಿಭಾಯಿಲು ನೀತಿ ನಿರೂಪಣೆ ಹಾಗೂ ಕ್ರಮಗಳ ಬಗ್ಗೆ ನಿರ್ಣಯಿಸುವ ಕುರಿತಂತೆ ಕಂದಾಯ ಸಚಿವ ಡಾ.ಜಿ.ಪರಮೇಶ್ವರ್ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟದ ಉಪಸಮಿತಿ ಸಭೆಯಲ್ಲಿ ಅವರು ಈ ಸಲಹೆ ನೀಡಿದರು.




ರಾಹುಲ್ ಗಾಂಧಿ ನೇತೃತ್ವದಲ್ಲಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ದೇಶವನ್ನು ಒಗ್ಗೂಡಿಸುವ ಐತಿಹಾಸಿಕ ಉದ್ದೇಶದೊಂದಿಗೆ ಬೆಂಗಳೂರಿನ ಕೆಪಿಸಿಸಿ ಭಾರತ್ ಜೋಡೋ ಭವನದಲ್ಲಿ ಬುಧವಾರ ನಡೆದ ಭಾರತ್ ಜೋಡೋಯಾತ್ರೆಯ 5ನೇ ವಾರ್ಷಿಕೋತ್ಸವದ ಸಮಾರಂಭದಲ್ಲಿ ಎಚ್.ಎಂ.ರೇವಣ್ಣ ಭಾಗವಹಿಸಿದ್ದರು. ಹಾಸನ ಲೋಕಸಭಾ ಸದಸ್ಯ ಶ್ರೇಯಸ್ ಪಟೇಲ್, ಮಾಜಿ ಸಂಸದರಾದ ಉಗ್ರಪ್ಪ, ಸಿ.ನಾರಾಯಣಸ್ವಾಮಿ ಇನ್ನಿತರ ಪ್ರಮುಖರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಗುಜರಾತ್‌ನ ಬರೋಡದಲ್ಲಿ ಸಂಭ್ರಮಿಸಲ್ಪಟ್ಟ ಬ್ರಹ್ಮಶ್ರೀ ನಾರಾಯಣಗುರು 172ನೇ ಜಯಂತಿ



**ಮುಂಬಯಿ (ಆರ್‌ಬಿಐ), ಸೆ.10:** ಗುಜರಾತ್ ಬಿಲ್ಲವರ ಸಂಘವು ಕಳೆದ ಭಾನುವಾರ ಗುಜರಾತ್ ರಾಜ್ಯದ ಬರೋಡಾ ಅಲ್ಕಾಪುರಾ ಇಲ್ಲಿನ ಸಂಘದ ಶ್ರೀ ಬೈದ್ಯಶ್ರೀ ಸಾಂಸ್ಕೃತಿಕ ಸಭಾ ಭವನದಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಗಳ 172ನೇ ಜಯಂತಿಯನ್ನು ಭಜನಾ ಸಂಕೀರ್ತನೆ ಇತ್ಯಾದಿ ಧಾರ್ಮಿಕ, ಸಭಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಶ್ರದ್ಧಾಪೂರ್ವಕವಾಗಿ ಸಂಭ್ರಮಿಸಿತು.

ನಾರಾಯಣ ಗುರುಗಳ ಜಯಂತ್ಯೋತ್ಸವ ನಿಮಿತ್ತ ವೇದಮೂರ್ತಿ ಧನಂಜಯ ಶಾಂತಿ ಮುಂಬಯಿ ನೇತೃತ್ವದಲ್ಲಿ ಗುರುವಿನ ಮೂರ್ತಿಗೆ ಅಭಿಷೇಕ, ಗಾಯತ್ರೀ ಪರಿವಾರದವರಿಂದ ಗುರುಪೂಜೆ, ಮಾತ –ಪಿತೃ ಗಳ ಪಾದ ಪೂಜೆ, ಮಹಾಮಂಗಳಾರತಿ ನೆರವೇರಿತು.

ಸಂಘದ ಗೌರವಾಧ್ಯಕ್ಷ ದಯಾನಂದ ಬೊಂಟ್ರ (ಬೆಳ್ಮಣ್ಣು) ಬರೋಡಾ ಇವರ ದಕ್ಷ ಮಾರ್ಗದರ್ಶನದೊಂದಿಗೆ ಜಿಬಿಎಸ್ ಅಧ್ಯಕ್ಷ ಹರೀಶ್ ವಿ.ಪೂಜಾರಿ ಮಡ್ಯಾರ್ (ದೇರಳಕಟ್ಟೆ) ಅಧ್ಯಕ್ಷತೆಯಲ್ಲಿ ಜರುಗಿಸಲ್ಪಟ್ಟ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಕರ್ನಾಟಕ ಸಮಾಜ ಅಹ್ಮದಾಬಾದ್ ಅಧ್ಯಕ್ಷ ಎಚ್ ವಿ. ಬೆನ್ನೂರ್, ಶ್ರೀ ಕ್ಷೇತ್ರ ಗೆಜ್ಜೆಗಿರಿ ಅಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಸಂಜೀವ ಪೂಜಾರಿ ಬಿರ್ವ, ಬಿಲ್ಲವರ ಅಸೋಸಿಯೇಶನ್ ಮುಂಬಯಿ ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಶ್ರೀಮತಿ ಶಕುಂತಲಾ ಕೋಟ್ಯಾನ್, ಶ್ರೀಕ್ಷೇತ್ರ ಗೆಜ್ಜೆಗಿರಿ ಗೌರವಾಧ್ಯಕ್ಷರುಗಳಾದ ಜಯಂತ್ ನಡುಬೈಲ್ ಮತ್ತು ಪೀತಾಂಬರ ಹೆರಾಜೆ, ಅಧ್ಯಕ್ಷ ರವಿ ಚಿಲಿಂಬಿ, ತುಳು ಸಂಘ ಬರೋಡ ಶ್ರೀಮತಿ ಪ್ರಮೀಳಾ ಶಶಿಧರ್ ಶೆಟ್ಟಿ , ಕರ್ನಾಟಕ ಸಮಾಜ, ಅಹ್ಮದಾಬಾದ್ ಉಪಾಧ್ಯಕ್ಷ ರಾಜೇಂದ್ರ ನಾಯ್ಕ್, ತುಳು ಐಸಿರಿ ವಾಪಿ ಗೌರವಾಧ್ಯಕ್ಷ ಬಾಲಕೃಷ್ಣ ಶೆಟ್ಟಿ, ಪಟ್ಲ ಫೌಂಡೇಶನ್ ಗುಜರಾತ್ ಅಧ್ಯಕ್ಷ ಅಜಿತ್ ಶೆಟ್ಟಿ, ಜಿಬಿಎಸ್ ಮುಖ್ಯ ಸಂಯೋಜಕ ವಾಸು ವಿ.ಸುವರ್ಣ, ಮಾಜಿ ಅಧ್ಯಕ್ಷರುಗಳಾದ ಮನೋಜ್ ಸಿ.ಪೂಜಾರಿ, ವಿಶ್ವನಾಥ್ ಜಿ.ಪೂಜಾರಿ ಬಾರ್ಡೋಲಿ (ಸೂರತ್), ಮನೋಜ್ ಎಂ ಪೂಜಾರಿ ಅಹ್ಮದಾಬಾದ್, ಜಿಬಿಎಸ್ ವಾಪಿ ಶಾಖೆಯ ಗೌರವಾಧ್ಯಕ್ಷ ಸದಾಶಿವ ಪೂಜಾರಿ, ಸಂಯೋಜಕ ರಮೇಶ್ ಪೂಜಾರಿ, ಜಿಎಸ್‌ಬಿ ಸೂರತ್ ಶಾಖೆಯ ಸಂಯೋಜಕ ಪ್ರಭಾಕರ್ ಎಸ್ ಪೂಜಾರಿ ಮಹಿಳಾಧ್ಯಕ್ಷೆ ಚಂದ್ರಿಕಾ ಅಶೋಕ್ ಕೋಟಿಯನ್, ಕಾರ್ಯದರ್ಶಿ ಸಂತೋಷ್ ಸಾಲಿಯನ್ ವೇದಿಕೆಯಲ್ಲಿ ಉಪಸ್ಥಿತರಿದ್ದು, ಅತಿಥಿಗಳು ಮಕ್ಕಳಿಗೆ ಶಿಕ್ಷಣ ನಿಧಿ, ವಿದ್ಯಾರ್ಥಿವೇತನ ವಿತರಿಸಿ ಶುಭಕೋರಿದರು.

ಆರಂಭದಲ್ಲಿ ಗಣ್ಯರು ಸಂಘದ ಮಂದಿರದಲ್ಲಿನ ಮಾತೆ ಗಾಯತ್ರಿದೇವಿ, ಕೋಟಿ–ಚೆನ್ನಯರು ಮತ್ತು ಬ್ರಹ್ಮಶ್ರೀ ನಾರಾಯಣ ಗುರುಗಳ ಪ್ರತಿಮೆಗಳಿಗೆ ಆರತಿಗೈದರು. ವೇದ ಮೂರ್ತಿ ಧನಂಜಯ ಶಾಂತಿ ಮತ್ತು ಸಂಗಡಿಗರಿಂದ ಹರಿಕಥೆ, ಭಕ್ತ ಪ್ರಹ್ಲಾದ. ಕಾರ್ಯಕಾರಿ ಸಮಿತಿಯ ಅನೇಕ ಸದಸ್ಯರು ಉಪಸ್ಥಿತರಿದ್ದು ಸಂಘದ ಸದಸ್ಯರು, ಮಹಿಳೆಯರು, ಮಕ್ಕಳು ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ ಪ್ರಸ್ತುತ ಪಡಿಸಿದರು. ಕಿರಿಯರೆಲ್ಲಾ ಮಾತಾಪಿತರ ಪಾದಪೂಜೆ ನಡೆಸಿ ಆಶೀರ್ವಾದ ಪಡೆದು ಕೊಂಡರು.

ಕು|ಶಮಿತಾ ಸೋಮನಾಥ್ ಪೂಜಾರಿ ಕು| ನಿಶ್ಮಿತಾ ನಾಗೇಶ್ ಪೂಜಾರಿ ಕು| ಭವ್ಯ ರಘು ಪೂಜಾರಿ ಬಳಗವು ಪ್ರಾರ್ಥನೆಯನ್ನಾಡಿತು. ಸೌಮ್ಯ ಪ್ರಭಾಕರ್ ಪೂಜಾರಿ ಸ್ವಾಗತಿಸಿದರು. ಸೌಮ್ಯ ಪಿ ಪೂಜಾರಿ ಪ್ರಾಸ್ತಾವಿಕ ಭಾಷಣಗೈದರು. ರೇವತಿ ರೋಹಿದಾಸ್ ಪೂಜಾರಿಯ ವಿದ್ಯಾರ್ಥಿಗಳ ಪಟ್ಟಿ ವಾಚಿಸಿದರು. ಸರಿತಾ ಸೋಮನಾಥ್ ಪೂಜಾರಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಾಗೂ ಅರುಣಾ ಸಾಲ್ಯಾನ್ ಸಭಾ ಕಾರ್ಯಕ್ರಮ ನಿರೂಪಿಸಿದರು. ಸಂತೋಷ್ ಸಾಲಿಯನ್ ಅಭಾರ ಮನ್ನಿಸಿದರು.

# ಯಾವುದೇ ಕಾರಣಕ್ಕೂ ಕಸ್ತೂರಿರಂಗನ್ ವರದಿ ಜಾರಿಗೆ ಅವಕಾಶ ನೀಡಲ್ಲ: ಸಚಿವ ಮಧು ಬಂಗಾರಪ್ಪ ಸ್ಪಷ್ಟನೆ

**ಮಲೆನಾಡಿನ ರೈತರು, ಕೃಷಿ, ಪರಿಸರ ಹಾಗೂ ಜನರ ಬದುಕನ್ನು ರಕ್ಷಿಸುವುದೇ ಕಾಂಗ್ರೆಸ್ ಸರ್ಕಾರದ ಗುರಿ**



**ಶಿವಮೊಗ್ಗ, ಸೆ.9:** ಕಸ್ತೂರಿರಂಗನ್ ವರದಿಯನ್ನು ಯಾವುದೇ ಕಾರಣಕ್ಕೂ ಜಾರಿಗೆ ಅವಕಾಶ ನೀಡುವುದಿಲ್ಲ. ಮಲೆನಾಡಿನ ರೈತರು, ಕೃಷಿ, ಪರಿಸರ ಹಾಗೂ ಜನರ ಬದುಕನ್ನು ರಕ್ಷಿಸುವುದು ನಮ್ಮ ಕಾಂಗ್ರೆಸ್ ಸರ್ಕಾರದ ಪ್ರಮುಖ ಗುರಿಯಾಗಿದೆ ಎಂದು ಶಿವಮೊಗ್ಗ ಜಿಲ್ಲೆಯ ಉಸ್ತುವಾರಿ ಸಚಿವ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ.

ಕಸ್ತೂರಿ ರಂಗನ್ ವರದಿ ವಿರೋಧಿಸಿ ಸೆಪ್ಟೆಂಬರ್ 11ರಂದು ಶಿಕಾರಿಪುರದಲ್ಲಿ ಹಮ್ಮಿಕೊಂಡಿರುವ ಬೃಹತ್ ಪಾದಯಾತ್ರೆ ಕುರಿತು ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿ, ಈ ಪಾದಯಾತ್ರೆಯ ಕುರಿತು ಮಾಹಿತಿ ನೀಡಿದ್ದಾರೆ. ಭಾರತದ ಮೊದಲ ಸ್ವಾತಂತ್ರ್ಯ ಗ್ರಾಮ ಎಂದು ಘೋಷಿಸಲ್ಪಟ್ಟಿರುವ ಈಸೂರಿನಿಂದ ಸೆಪ್ಟೆಂಬರ್ 11ರಂದು ಬೆಳಗ್ಗೆ 9 ಗಂಟೆಗೆ ಪಾದಯಾತ್ರೆ ಆರಂಭವಾಗಲಿದ್ದು, ಶಿಕಾರಿಪುರದವರೆಗೆ ಸಾಗಲಿದೆ. ನಾನೂ ಸಹ ಈ ಪಾದಯಾತ್ರೆಯಲ್ಲಿ ಭಾಗವಹಿಸಲಿದ್ದೇನೆ. ಕಾಂಗ್ರೆಸ್ ಕಾರ್ಯಕರ್ತರು ಮಾತ್ರವಲ್ಲದೆ, ಕಸ್ತೂರಿ ರಂಗನ್ ವರದಿ ವಿರುದ್ಧ ಹೋರಾಡುವ ಮನಸ್ಥಿತಿ ಹೊಂದಿರುವ ಎಲ್ಲರೂ ಪಕ್ಷಾತೀತವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ನೀಡಬೇಕು ಎಂದು ಸಚಿವರು ಕರೆ ನೀಡಿದರು.

ನಮ್ಮ ನಾಯಕರಾದ ಸಿದ್ದರಾಮಯ್ಯ 2013ರಿಂದ 2018ರವರೆಗೆ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಕಸ್ತೂರಿ ರಂಗನ್ ವರದಿಯನ್ನು ತಿರಸ್ಕರಿಸಿದ್ದರು. ಆದರೂ ಕೇಂದ್ರ ಸರ್ಕಾರ ಪದೇಪದೇ ಕರಡು ಅಧಿಸೂಚನೆಗಳನ್ನು ಹೊರಡಿಸುತ್ತಿದ್ದು, ಇದೀಗ ಏಳನೇ ಬಾರಿಗೆ ಕರಡು ಅಧಿಸೂಚನೆ ಹೊರಡಿಸಿರುವುದನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ ಎಂದರು.

ಕಸ್ತೂರಿರಂಗನ್ ವರದಿ ಜಾರಿಯಾದರೆ ಪಶ್ಚಿಮ ಘಟ್ಟ ವ್ಯಾಪ್ತಿಯ 1,576 ಗ್ರಾಮಗಳ ರೈತರ ಬದುಕು ಅತಂತ್ರವಾಗಲಿದೆ. ಶಿವಮೊಗ್ಗ ಜಿಲ್ಲೆಯೊಂದರಲ್ಲೇ 484 ಗ್ರಾಮಗಳ ಜನರ ಬದುಕಿನ ಮೇಲೆ ತೀವ್ರ ಪರಿಣಾಮ ಬೀರಲಿದ್ದು, ಕೃಷಿ ಚಟುವಟಿಕೆಗಳ ಮೇಲೂ ದೊಡ್ಡ ಹೊಡೆತ ಬೀಳಲಿದೆ ಎಂದು ಸಚಿವರು ಆತಂಕ ವ್ಯಕ್ತಪಡಿಸಿದರು.

ಮಲೆನಾಡಿನ ರೈತರು ಪರಿಸರದೊಂದಿಗೆ ಬೆರೆತು ಬದುಕುತ್ತಿದ್ದಾರೆ. ತಲೆತಲಾಂತರಗಳಿಂದ ಕೃಷಿ ಮಾಡಿಕೊಂಡು ಬಂದಿದ್ದಾರೆ. ದೆಹಲಿಯಲ್ಲಿ ಕುಳಿತುಕೊಂಡು ಅಡಕೆ ಮರಗಳನ್ನು ಕಾಡು ಎಂದು ಪರಿಗಣಿಸುವವರಿಗೆ ಮಲೆನಾಡಿನ ವಾಸ್ತವ ಪರಿಸ್ಥಿತಿಯ ಅರಿವಿದೆಯೇ. ರೈತರ ಬದುಕಿನ ಬಗ್ಗೆ ಕೇಂದ್ರ ಸರ್ಕಾರ ಮಾನವೀಯತೆಯನ್ನೇ ಮರೆತಿರುವುದು ದುರದೃಷ್ಟಕರ ಎಂದರು.ಹೋರಾಟದ ಪರಂಪರೆಯಲ್ಲಿ ಇಂದು ಮಲೆನಾಡಿನ ಜನರ ಬದುಕು, ರೈತರ ಹಕ್ಕು ಮತ್ತು ಪರಿಸರದ ರಕ್ಷಣೆಗಾಗಿ ನಾವು ಹೋರಾಟ ಮಾಡುತ್ತಿದ್ದೇವೆ ಎಂದು ಮಧು ಬಂಗಾರಪ್ಪ ಹೇಳಿದರು.

ಕಸ್ತೂರಿರಂಗನ್ ವರದಿ ಕುರಿತು ಚರ್ಚಿಸಲು ಮೂರು ದಿನಗಳ ವಿಶೇಷ ಅಧಿವೇಶನ ಕರೆದಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ವಿಶೇಷ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ರಾಜ್ಯದ ಹಿತದ ವಿಚಾರದಲ್ಲಿ ಸರ್ಕಾರ ಗಂಭೀರವಾಗಿ ಸ್ಪಂದಿಸುತ್ತಿರುವುದು ಸ್ವಾಗತಾರ್ಹ ಎಂದರು.ಕಸ್ತೂರಿ ರಂಗನ್ ವರದಿ ವಿಚಾರದಲ್ಲಿ ಬಿಜೆಪಿಯವರು ತಮ್ಮ ನಿಲುವನ್ನು ಮೊದಲು ಸ್ಪಷ್ಟಪಡಿಸಲಿ. ತಲೆಬುಡವಿಲ್ಲದೆ ಪಾದಯಾತ್ರೆ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲ. ಮಲೆನಾಡಿನ ಜನರು ಎಲ್ಲವನ್ನೂ ಗಮನಿಸುತ್ತಿದ್ದಾರೆ. ರೈತರ ಬದುಕಿನ ಪರವಾಗಿ ನಿಜವಾದ ಕಾಳಜಿ ಇದ್ದರೆ ಕೇಂದ್ರ ಸರ್ಕಾರದ ಮುಂದೆ ತಮ್ಮ ನಿಲುವನ್ನು ಸ್ಪಷ್ಟಪಡಿಸಲಿ ಎಂದು ಸಚಿವರು ಸವಾಲು ಹಾಕಿದರು.

ಕಾಂಗ್ರೆಸ್ ಪಕ್ಷದ ವತಿಯಿಂದ ಹೋರಾಟವನ್ನು ಹಂತ ಹಂತವಾಗಿ ರೂಪಿಸಲಾಗುತ್ತಿದೆ. ಇತ್ತೀಚೆಗೆ ಮಾಜಿ ಸಚಿವ ಕಿಮ್ಮನೆ ರತ್ನಾಕರ್ ನೇತೃತ್ವದಲ್ಲಿ ತೀರ್ಥಹಳ್ಳಿಯಲ್ಲಿ ಬೃಹತ್ ಪಾದಯಾತ್ರೆ ಹಾಗೂ ಪ್ರತಿಭಟನೆ ನಡೆಸಲಾಗಿದೆ. ಇದೀಗ ಸೆಪ್ಟೆಂಬರ್ 11ರಂದು ಶಿಕಾರಿಪುರದಲ್ಲಿ ಬೃಹತ್ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.ಕಾಡು ಉಳಿಯಬೇಕು, ರೈತರು ಉಳಿಯಬೇಕು, ಪರಿಸರವೂ ಉಳಿಯಬೇಕು ಹಾಗೂ ಮಲೆನಾಡಿನ ಜನರ ಬದುಕೂ ಉಳಿಯಬೇಕು. ಇದೇ ನಮ್ಮ ಕಾಂಗ್ರೆಸ್ ಪಕ್ಷದ ಗುರಿ. ಪರಿಸರ ಸಂರಕ್ಷಣೆಯ ಹೆಸರಿನಲ್ಲಿ ಮಲೆನಾಡಿನ ರೈತರ ಬದುಕನ್ನು ಅತಂತ್ರಗೊಳಿಸಲು ಯಾವುದೇ ಕಾರಣಕ್ಕೂ ಅವಕಾಶ ನೀಡುವುದಿಲ್ಲ ಎಂದು ಸಚಿವರು ಸ್ಪಷ್ಟಪಡಿಸಿದರು. ಶಿಕಾರಿಪುರದಲ್ಲಿ ನಡೆಯಲಿರುವ ಹೋರಾಟವನ್ನು ಯಶಸ್ವಿಗೊಳಿಸಲು ಸಾವಿರಾರು ಸಂಖ್ಯೆಯಲ್ಲಿ ಜನರು ಭಾಗವಹಿಸಬೇಕು. ಮಲೆನಾಡಿನ ನೆಲ, ಜಲ, ಕೃಷಿ, ಪರಿಸರ ಮತ್ತು ರೈತರ ಬದುಕಿನ ರಕ್ಷಣೆಗಾಗಿ ಎಲ್ಲರೂ ಒಗ್ಗಟ್ಟಾಗಿ ಧ್ವನಿ ಎತ್ತುವ ಮೂಲಕ ಕೇಂದ್ರ ಸರ್ಕಾರಕ್ಕೆ ಸ್ಪಷ್ಟ ಸಂದೇಶ ನೀಡಬೇಕು ಎಂದು ಸಚಿವ ಮಧು ಬಂಗಾರಪ್ಪ ಹೇಳಿದರು.

# ನಿರ್ಲಕ್ಷ್ಯ-ವಿಳಂಬಕ್ಕೆ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಲು ಕರೆ



**ವಿಜಯಪುರ, ಸೆ.9**–ಸಾರ್ವಜನಿಕರ ಕಾನೂನುಬದ್ಧ ಕೆಲಸ-ಕಾರ್ಯಗಳಿಗೆ ಜಿಲ್ಲೆಯಲ್ಲಿ ಸರ್ಕಾರಿ ಅಧಿಕಾರಿಗಳು ನಿರ್ಲಕ್ಷ್ಯ, ವಿಳಂಬಕ್ಕೆ, ಧೋರಣೆಗೆ ಸಾರ್ವಜನಿಕರು ಲಿಖಿತವಾಗಿ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಬಹುದು ಎಂದು ಲೋಕಾಯುಕ್ತ ಅಧೀಕ್ಷಕ ಎಂ.ಬಿ. ನಂದಗಾಂವಿ ತಿಳಿಸಿದ್ದಾರೆ.

ಸರ್ಕಾರಿ ಸವಲತ್ತುಗಳನ್ನು ನೀಡಲು ಕಿರುಕುಳ ನೀಡುವುದು, ಭ್ರಷ್ಟಾಚಾರದ ಮೂಲಕ ಅಕ್ರಮ ಆಸ್ತಿ ಸಂಪಾದನೆ, ಸರ್ಕಾರಿ ಅನುದಾನ ದುರ್ಬಳಕೆ ಅಧಿಕಾರಿಗಳ ವಿರುದ್ಧ ದೂರು ಸಲ್ಲಿಸಲು ಅವಕಾಶವಿದ್ದು, ದೂರುದಾರರ ಹೆಸರು ಮತ್ತು ವಿವರಗಳನ್ನು ಸಂಪೂರ್ಣ ಗೌಪ್ಯವಾಗಿಡಲಾಗುವುದು ತಿಳಿಸಿದ್ದಾರೆ.

ದೂರು ಸಲ್ಲಿಸಲು ಈ ಕೆಳಗಿನ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ. ಎಂ. ಬಿ. ನಂದಗಾಂವಿ, ಪೊಲೀಸ್ ಅಧೀಕ್ಷಕರು, ಮೊ: 9364062528, ಮಲ್ಲಿಕಾರ್ಜುನ ತುಳಸಿಗೇರಿ, ಡಿಎಸ್‌ಪಿ, ಮೊ: 9364062557, ಆನಂದ ಟಕ್ಕಣ್ಣವರ, ಸಿಪಿಐ, ಮೊ: 9364062539, ಆನಂದ ಡೋಣಿ, ಸಿಪಿಐ, ಮೊ: 9364062540, ನಿಂಗಪ್ಪ ಪೂಜೇರಿ, ಸಿಪಿಐ, ಮೊ: 9364062702 ಹಾಗೂ ಲೋಕಾಯುಕ್ತ ಕಚೇರಿ ದೂರವಾಣಿ ಸಂಖ್ಯೆ: 08352–295074/255333.

**ಕಚೇರಿ ವಿಳಾಸ:** ಕರ್ನಾಟಕ ಲೋಕಾಯುಕ್ತ ಕಚೇರಿ, ಸ್ಟೇಷನ್ ರೋಡ್, ಡಾ. ಬಿ.ಆರ್. ಅಂಬೇಡ್ಕರ್. ಒಳಾಂಗಣ ಕ್ರೀಡಾಂಗಣ ಕಟ್ಟಡದ ಹಿಂದುಗಡೆ, ವಿಜಯಪುರ – 586101. ಸಾರ್ವಜನಿಕರು ಈ ಮೇಲ್ಕಂಡ ದೂರವಾಣಿ ಸಂಖ್ಯೆಗಳಿಗೆ ಕರೆ ಮಾಡುವ ಮೂಲಕ ಅಥವಾ ನೇರವಾಗಿ ಕಚೇರಿಗೆ ಭೇಟಿ ನೀಡಿ ಲಿಖಿತ ದೂರು ಸಲ್ಲಿಸಿ, ಭ್ರಷ್ಟಾಚಾರ ಮುಕ್ತ ಸಮಾಜ ನಿರ್ಮಾಣಕ್ಕೆ ಸಹಕರಿಸಬೇಕು ಎಂದು ಲೋಕಾಯುಕ್ತ ಎಸ್‌ಪಿಯವರು ಮನವಿ ಮಾಡಿದ್ದಾರೆ.

# ಸ್ಯಾಟಲೈಟ್‌ನ ಹಸಿರು ಫೋಟೋ ನೋಡಿ, ಬರಪೀಡಿತ ಪ್ರದೇಶದಿಂದ ಕಲಬುರಗಿ ಕೈಬಿಟ್ಟರಾ..?

**ಕಲಬುರಗಿ, ಸೆ. 9:** ಕೇಂದ್ರದ ಡ್ರಾಟ್ ಮ್ಯಾನುವಲ್ (ಬರಗಾಲ ಸೂಚಿ ಮಾನದಂಡ) ಆಧರಿಸಿ ಬರಗಾಲ ಪಟ್ಟಿ ಸಿದ್ಧಪಡಿಸಲಾಗಿದೆ. ಸ್ಯಾಟಲೈಟ್ ಟೆಕ್ನಾಲಜಿಯಿಂದ ನಮ್ಮೂರ ಹೊಲ–ಗದ್ದಿ ಫೋಟೋ ತಗೊಂಡಾರ, ಸ್ಯಾಟಲೈಟ್ ಫೋಟೋದಲ್ಲಿ ಕಲಬುರಗಿ ಜಿಲ್ಲೆ ಹಚ್ಚಗ (ಹಚ್ಚ ಹಸಿರು) ಕಾಣಸಿದೆಯಂತೆ. ಅದಕ್ಕೆ ಇಲ್ಲಿನ ಯಾವ ತಾಲೂಕೂ ಬರಗಾಲ ಪಟ್ಟಿಗೆ ಸೇರ್ಪಡೆಯಾಗಿಲ್ಲವೆಂದು ಹೇಳಲಾಗಿದೆ.

ಇದು ಟೆಕ್ನಾಲಜಿ ಯುಗ, ಎಲ್ಲದಕ್ಕೂ ತಂತ್ರಜ್ಞಾನ ಬಳಸೋ ಕಾಲದಲ್ಲಿ ನಾವಿರೋವಾಗಲೇ ಬರಗಾಲದಲ್ಲಿ ಸಿಲುಕಿ ವಿಲವಿಲ ಒದ್ದಾಡುತ್ತಿರೋ ಕಲಬುರಗಿ ಜಿಲ್ಲೆಯ ರೈತರ ಪಾಲಿಗೆ ಈ ಟೆಕ್ನಾಲಜಿಯೇ ಈಗ ಕೈ ಕೊಟ್ಟಿದೆಯೇ...? ಇಂಥ ಅನುಮಾನ ಈಗ ಜಿಲ್ಲೆಯ ಜನರಲ್ಲಿ ಮೂಡುವಂತೆ ಮಾಡಿದೆ. ಮಳೆ ಕೊರತೆಯಾಗಿ ಭೀಕರ ಬರಗಾಲದ ದವಡೆಗೆ ಸಿಲುಕಿರುವಾಗ ರಾಜ್ಯ ಸರ್ಕಾರ ಘೋಷಿಸಿರೋ ಬರಗಾಲ ಪೀಡಿತ ತಾಲೂಕುಗಳ ಪಟ್ಟಿಯಲ್ಲಿ ಕಲಬುರಗಿ ಜಿಲ್ಲೆಯ 11 ತಾಲೂಕುಗಳಲ್ಲಿ ಒಂದೂ ಸೇರದೆ ಹೋಗಿರೋದು ಇಲ್ಲಿನ ಜನರನ್ನು, ರೈತರನ್ನು ಕೆರಳುವಂತೆ ಮಾಡಿದೆ.

ಅದರ ಪರಿಣಾಮ ಈಚೆಗಿನ ಯಾವುದೇ ಸಮಾರಂಭದ ವೇದಿಕೆ ಇರಲಿ, ಅಲ್ಲಿ ಬರಗಾಲದ್ದೇ ಮಾತು. ಎಲ್ಲೇ ಹೋರಾಟಗಳು ನಡೆಯಲಿ, ಬರಗಾಲ ಘೋಷಿಸದ ಸರ್ಕಾರ ವಿರುದ್ಧ ಧಿಕ್ಕಾರ ಕೂಗಲಾಗ್ತಿದೆ. ಮೊನ್ನೆ ಹೀಂಗೆ ಆಯ್ತು, ಹೆದ್ದಾರಿ ಪ್ರಾಧಿಕಾರದವರು 7 ಕೊಳವೆ ತುಂಡರಿಸಿದ್ದರಿಂದ ಬೋರಿಹಳ್ಳದಿಂದ ಅಫಜಲ್ಪುರ ಹಾಗೂ ಆಳಂದ ಕೆರೆ, ಕಟ್ಟೆ ತುಂಬಿಸೋ ಯೋಜನೆಗೆ ಆಘಾತವಾಗಿದೆ ಎಂದು ಬಡದಾಳ–ಅರ್ಜುಣಗಿ ಬಳಿ ಕಲಬುರಗಿ ಹಾಲು ಒಕ್ಕೂಟದ ಅಧ್ಯಕ್ಷ ಆರ್.ಕೆ.ಪಾಟೀಲ್ ನೇತೃತ್ವದ ಧರಣಿ ವೇಳೆ ಬರಗಾಲ ಪಟ್ಟಿಯಿಂದ ಕಲಬುರಗಿ ಔಟ್ ಆಗಿರೋ ವಿಷಯ, ಯಾಕೆ ಹಿಗಾಯ್ತೆಂದು ಸ್ವಾರಸ್ಯಕರ ಚರ್ಚೆಗೆ ವೇದಿಕೆಯಾಯ್ತು.



ಅಂಕಲಗಿ ಮಠದ ಗುರುಬಸವ ಶಿವಾಚಾರ್ಯರು, 'ಕಲಬುರಗಿಯಲ್ಲಿ ಶೇ.50 ಕ್ಕಿಂತ ಅಧಿಕ ಮಳೆ ಕೊರತೆ ಕಾಡಿದ್ರೂ ಉಪಗ್ರಹ ಫೋಟೋದಾಗ ಕಲಬುರಗಿ ಹೊಲಗದ್ದಿ ಎಲ್ಲಾ ಹಚ್ಚ ಹಸಿರು ಕಂಡಾವಂತ, ಅದ್ಕೇ ಇಲ್ಲೆಲ್ಲಿದೆ ಬರಗಾಲ ಎಂದು ಕೇಳ್ತಾ ಆಫೀಸರ್ ಮಂದಿ ಬರಗಾಲ ಪಟ್ಟಿಯಿಂದ ಕಲಬುರಗಿ ಜಿಲ್ಲಾ ದೂರ ಇಟ್ಟಾರಂತ ಹೇಳಾಕತ್ತಾರ್ ರೀ, ನಮಗ ಮನಷ್ಯಾರಷ್ಟೇ ಕೈ ಕೊಡ್ತಾರ ಅಂದ್ಕೊಂಡಿದ್ವಿ, ಈಗ ನೋಡಿದ್ರ ಕಲಬುರಗಿ ಪಾಲಿಗೆ ಟೆಕ್ನಾಲಜಿನೂ ಕೈ ಕೊಟ್ಟದ ನೋಡ್ರಿ' ಅಂದ್ರು.

ಕೇಂದ್ರದ ಬರ ಕೈಪಿಡಿ ಆಧರಿಸಿ ಬರಗಾಲ ಪಟ್ಟಿ ಸಿದ್ಧಪಡಸ್ಯಾರಂತ್ರಿ, ಸ್ಯಾಟಲೈಟ್ ಟೆಕ್ನಾಲಜಿಯಿಂದ್ಲೇ ನಮ್ಮೂರ ಹೊಲಗದ್ದಿ ಫೋಟೋ ತಗೊಂಡಾರ, ಸ್ಯಾಟಲೈಟ್ ಫೋಟೋದಾಗ ಕಲಬುರಗಿ ಹಚ್ಚಗ ಕಾಣಸ್ಯದಂತ, ಅದ್ಕೇ ಇಲ್ಲಿನ ಯಾವ ತಾಲೂಕೂ ಬರಗಾಲ ಪಟ್ಟಿ ಸೇರಿಲ್ಲ. ಟೆಕ್ನಾಲಜಿ ಕೂಡಾ ಹೀಂಗ ಕಲಬುರಗಿಗೆ ಮೋಸ ಮಾಡ್ಬೇಕಾ? ಎಂದಾಗ ಸೇರಿದ್ದ ರೈತರು ತಮ್ಮ ಹಣೆಬರಹ ಹಳಿಯುತ್ತ ಹಣೆಹಣೆ ಬಡ್ಕೊಳ್ಳುವಂತೆ ಮಾಡಿದೆ.

# ಎನ್‌ಡಿಎ ಸರ್ಕಾರ ಅಧಿಕಾರಕ್ಕೇರಿಸುವ ನಿಟ್ಟಿನಲ್ಲಿ ಭದ್ರ ಬುನಾದಿ ಈ ಪಾದಯಾತ್ರೆ: ವಿಜಯೇಂದ್ರ

**ಬಳ್ಳಾರಿ, ಸೆ.9:** ಸೆ.1ರಂದು ಪ್ರಾರಂಭವಾದ ನಮ್ಮ ಈ ಪಾದಯಾತ್ರೆ ಯಶಸ್ವಿಯಾಗಿ ಸಾಗುತ್ತಿದೆ. ಕಲ್ಯಾಣ ಕರ್ನಾಟಕ ಭಾಗದ ರೈತರು, ಯುವಕರು ಮತ್ತು ಜನಸಾಮಾನ್ಯರ ಸಹಕಾರದಿಂದ ಇದು ಅಂತಿಮ ಘಟ್ಟಕ್ಕೆ ಬಂದು ತಲುಪಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

ಮಾಧ್ಯಮಗಳ ಜೊತೆ ಬುಧವಾರ ಮಾತನಾಡಿದ ಅವರು, ಇಂದು ಸುಮಾರು 2 ಕಿ.ಮೀ ಸಾಗಿ ಬಳ್ಳಾರಿ ಪ್ರವೇಶಿಸಲಿದ್ದೇವೆ. ಇದು ಜನರಲ್ಲಿ ಹೊಸ ಆಶಾಭಾವನೆಯನ್ನು ಹುಟ್ಟುಹಾಕಿದೆ ಹಾಗೂ ಮುಂದಿನ ದಿನಗಳಲ್ಲಿ ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರವನ್ನು ತರುವ ನಿಟ್ಟಿನಲ್ಲಿ ಭದ್ರ ಬುನಾದಿ ಹಾಕಿದೆ ಎಂದು ವಿಶ್ವಾಸದಿಂದ ನುಡಿದರು.

ಗುರುವಾರ ಬೆಳಗ್ಗೆ ವಿವಿಧ ದೇವಾಲಯಗಳಿಗೆ ಭೇಟಿ ನೀಡಲಿದ್ದೇವೆ. ಸಂಜೆ ಉಳಿದಿರುವ 2.5 ರಿಂದ 3 ಕಿ.ಮೀ ಪಾದಯಾತ್ರೆ ಪ್ರಾರಂಭ ಆಗಲಿದೆ. ಸಂಜೆ 4:30 ಗಂಟೆಗೆ ಬಳ್ಳಾರಿ ನಗರದ ಮುನ್ಸಿಪಲ್ ಮೈದಾನದಲ್ಲಿ ಬೃಹತ್ ಸಮಾವೇಶ ಏರ್ಪಡಿಸಲಾಗುವುದು. ಈ ಬೃಹತ್ ಸಮಾವೇಶದಲ್ಲಿ ಕನಿಷ್ಠ 45,000 ದಿಂದ 50,000 ಕ್ಕೂ ಹೆಚ್ಚು ಜನರು ಸೇರುವ ನಿರೀಕ್ಷೆ ಇದೆ ಎಂದು ವಿವರ ನೀಡಿದರು. ಈ ಸಮಾವೇಶದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಜಗದೀಶ್ ಶೆಟ್ಟರ್, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ವಿಪಕ್ಷ ನಾಯಕರಾದ ಆರ್. ಅಶೋಕ್, ಛಲವಾದಿ ನಾರಾಯಣಸ್ವಾಮಿ, ರಾಜ್ಯದ ಉಸ್ತುವಾರಿ ರಾಧಾಮೋಹನ್ ದಾಸ್ ಅಗರ್ವಾಲ್, ಸಹ ಉಸ್ತುವಾರಿ ಸುಧಾಕರ್ ರೆಡ್ಡಿ, ರಾಜ್ಯದ ಸಂಸದರು, ಎಲ್ಲಾ ಶಾಸಕರು, ವಿಧಾನಪರಿಷತ್ ಸದಸ್ಯರು ಮತ್ತು ಮಾಜಿ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ನನ್ನ ರಾಜಕೀಯ ಜೀವನದಲ್ಲಿ ಇದೊಂದು ಮಹತ್ತರವಾದ ತಿರುವು ಹಾಗೂ ಮರೆಯಲಾಗದ ಹೋರಾಟ. ದಾರಿಯುದ್ದಕ್ಕೂ ರೈತರು, ಯುವಕರು, ಕುರಿಗಾಹಿಗಳು, ಅಲೆಮಾರಿ ಸಮುದಾಯದವರು ಹೀಗೆ ಎಲ್ಲರೊಂದಿಗೂ ಸಂವಾದ ನಡೆಸಿದ್ದು ನನಗೆ ತೃಪ್ತಿ ತಂದಿದೆ. 2028ರ ಚುನಾವಣೆಯನ್ನು ಯಾರ ನೇತೃತ್ವದಲ್ಲಿ ಎದುರಿಸುತ್ತೀರಿ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ರಾಜ್ಯದಲ್ಲಿರುವ ಎಲ್ಲಾ ಹಿರಿಯ ನಾಯಕರ ಒಗ್ಗಟ್ಟಿನ ನೇತೃತ್ವದಲ್ಲಿ ಹಾಗೂ ಕೇಂದ್ರದಲ್ಲಿ ನರೇಂದ್ರ ಮೋದೀ, ನಿತಿನ್ ನವೀನ್ ಮತ್ತು ಅಮಿತ್ ಶಾ ಅವರ ಮಾರ್ಗದರ್ಶನದಲ್ಲಿ ಭಾರತೀಯ ಜನತಾ ಪಾರ್ಟಿ ಮುಂಬರುವ ಚುನಾವಣೆಯನ್ನು ಎದುರಿಸಲಿದೆ ಎಂದರು.

ಕಾರ್ಯಕರ್ತರಲ್ಲಿ ರಣೋತ್ಸಾಹ ಇದೆ.



ಹೋರಾಟ ಅಂತ್ಯವಲ್ಲ; ಇದು ಆರಂಭ ಎಂದರು. ನವಲಿ ಜಲಾಶಯದ ವಿಚಾರದಲ್ಲಿ ನಿಮ್ಮ ನಿಲುವೇನು ಎಂದು ಕೇಳಿದರು. ಈ ಭಾಗದ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ನವಲಿ ಜಲಾಶಯ ನಿರ್ಮಾಣಕ್ಕೆ ನಮ್ಮ ಸಂಪೂರ್ಣ ಬದ್ಧತೆ ಇದೆ. ಈ ಬಗ್ಗೆ ಸದನದ ಒಳಗೂ ನಾವು ಧ್ವನಿ ಎತ್ತಿ ಹೋರಾಟ ಮಾಡುತ್ತೇವೆ ಎಂದು ನುಡಿದರು.

ಹೋರಾಟಕ್ಕೆ ಅಡಚಣೆ ಮಾಡದಿರಿ.. ಕಾನೂನಿನ ಕಥೆ ಹೇಳಿ ನಮ್ಮ ಹೋರಾಟಕ್ಕೆ ಸರಕಾರ ಅಡಚಣೆ ಮಾಡಬಾರದು ಎಂದು ಅವರು ಇನ್ನೊಂದು ಪ್ರಶ್ನೆಗೆ ಉತ್ತರಿಸಿದರು.ಸರಕಾರ ತೀವ್ರವಾಗಿ ವಿಚಲಿತವಾಗಿದೆ. ರಾತ್ರೋರಾತ್ರಿ ನಮ್ಮ ಬಾವುಟ, ಬ್ಯಾನರ್‌ಗಳನ್ನು ಹರಿದು ಹಾಕಿದ್ದಾರೆ ಎಂದು ಟೀಕಿಸಿದರು.

ಕಾಂಗ್ರೆಸ್ ನಾಯಕರ ವಿರುದ್ಧ ಜಾರಿ ನಿರ್ದೇಶನಾಲಯದ (ಇಡಿ) ವಿಚಾರ ಮುಂದಿಟ್ಟುಕೊಂಡು ಬಿಜೆಪಿ ಟಾರ್ಗೆಟ್ ಮಾಡುತ್ತಿದೆ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ವಿಜಯೇಂದ್ರ, ನಾವು ಬೂಟಾಟಿಕೆಗಾಗಿ ಪಾದಯಾತ್ರೆ ಮಾಡಿಲ್ಲ. ಜನರ ಸಮಸ್ಯೆಗಳಿಗೆ ಧ್ವನಿಯಾಗಲು, ಭ್ರಷ್ಟಾಚಾರದ ವಿರುದ್ಧ ಹೋರಾಡಲು ಮತ್ತು ರೈತರು, ಯುವಕರು ಹಾಗೂ ಸಾಮಾನ್ಯ ಜನರಿಗೆ ನ್ಯಾಯ ದೊರಕಿಸಲು ಈ ಹೋರಾಟ ನಡೆಸಿದ್ದೇವೆ' ಎಂದು ಹೇಳಿದರು.

ಮಾಜಿ ಸಚಿವ ನಾಗೇಂದ್ರ ಅವರ ವಿಚಾರದಲ್ಲೂ ಇದೇ ರೀತಿಯ ಆರೋಪಗಳನ್ನು ಮಾಡಲಾಗಿತ್ತು. ಕೆಲ ಸಚಿವರು ಬಿಜೆಪಿ ಹಿಟ್‌ಲಿಸ್ಟ್‌ನಲ್ಲಿ, ಕೆಲ ಸಚಿವರು ಕಾಂಗ್ರೆಸ್ ಹಿಟ್‌ಲಿಸ್ಟ್‌ನಲ್ಲಿ ಇದ್ದಾರೆ ಎಂಬ ಚರ್ಚೆಗಳು ನಡೆಯುತ್ತಿವೆ. ಆದರೆ ಬಿಜೆಪಿಯ ಹೋರಾಟ ಯಾವುದೇ ವ್ಯಕ್ತಿಯನ್ನು ಗುರಿಯಾಗಿಸಿಕೊಂಡದ್ದಲ್ಲ; ಜನರ ಪರವಾದ, ಭ್ರಷ್ಟಾಚಾರ ಮುಕ್ತ ಆಡಳಿತಕ್ಕಾಗಿ ನಡೆಯುತ್ತಿರುವ ಹೋರಾಟ ಎಂದು ವಿಜಯೇಂದ್ರ ಸ್ಪಷ್ಟಪಡಿಸಿದರು. ಬಳ್ಳಾರಿ ಚಲೋ ನಾಳೆಗೆ ಮುಕ್ತಾಯವಾದರೂ, ಜನರ ಧ್ವನಿಯಾಗಿ ನಮ್ಮ ಹೋರಾಟ ಮುಂದುವರಿಯಲಿದೆ. ರಾಜ್ಯದ ಜನರ ಆಶಾಭಾವನೆಗೆ ತಕ್ಕಂತೆ ಜನಪರ ಸರ್ಕಾರಕ್ಕಾಗಿ ಬಿಜೆಪಿ ನಿರಂತರವಾಗಿ ಹೋರಾಟ ನಡೆಸಲಿದೆ' ಎಂದು ಹೇಳಿದರು.

### ಜಾರಕಿಹೊಳಿ ಮನೆ ಮೇಲಿನ ದಾಳಿಗೆ ಸಚಿವ ರಿಜ್ವಾನ್ ಕಿಡಿ

# ಬಿಜೆಪಿಯ ಕಾರ್ಯಸೂಚಿಯಂತೆ ಇ.ಡಿ. ಸಿಬಿಐ ಕಾರ್ಯನಿರ್ವಹಣೆ

**ಉಡುಪಿ, ಸೆ.9:** ಸಚಿವ ಸತೀಶ್ ಜಾರಕಿಹೊಳಿ ಅವರ ನಿವಾಸದ ಮೇಲೆ ಜಾರಿ ನಿರ್ದೇಶನಾಲಯ (ಇಡಿ) ದಾಳಿ ನಡೆಸಿರುವುದನ್ನು ಖಂಡಿಸಿದ ಜಿಲ್ಲಾ ಉಸ್ತುವಾರಿ ಸಚಿವ ರಿಜ್ವಾನ್ ಅರ್ಷದ್, ಇಡಿ, ಆದಾಯ ತೆರಿಗೆ ಇಲಾಖೆ ಹಾಗೂ ಸಿಬಿಐ ಸಂಸ್ಥೆಗಳು ಬಿಜೆಪಿಯ ರಾಜಕೀಯ ಅಜೆಂಡಾದಂತೆ ಕಾರ್ಯನಿರ್ವಹಿಸುತ್ತಿವೆ ಎಂದು ಆರೋಪಿಸಿದರು.

ಬಿಜೆಪಿಯ ಯುವಮೋರ್ಚಾ ಹಾಗೂ ಎಬಿವಿಪಿ ಹೇಗೆ ಪಕ್ಷದ ಅಜೆಂಡಾವನ್ನು ಮುನ್ನಡೆಸುತ್ತವೆಯೋ, ಅದೇ ರೀತಿ ತನಿಖಾ ಸಂಸ್ಥೆಗಳನ್ನೂ ಬಳಸಿಕೊಳ್ಳಲಾಗುತ್ತಿದೆ. ರಾಜಕೀಯವಾಗಿ ಯಾರನ್ನು ದುರ್ಬಲಗೊಳಿಸಬೇಕು, ಯಾರನ್ನು ಸೋಲಿಸಬೇಕು ಎಂಬ ಗುರಿಯೊಂದಿಗೆ ದಾಳಿಗಳು ನಡೆಯುತ್ತಿವೆ. ರಾಜಕೀಯ ಎದುರಾಳಿಗಳನ್ನು ಗುರಿಯಾಗಿಸಿಕೊಂಡು ತನಿಖಾ ಸಂಸ್ಥೆಗಳನ್ನು ಬಳಸಿಕೊಳ್ಳುವ ಪ್ರವೃತ್ತಿ ಮುಂದುವರಿದಿದೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಒಳ್ಳೆಯ ಬೆಳವಣಿಗೆಯಲ್ಲ ಎಂದರು.

**ಬಿಜೆಪಿ ಪಾದಯಾತ್ರೆಗೆ ಸ್ಪಷ್ಟ ಉದ್ದೇಶವೇ ಇಲ್ಲ:** ಬಳ್ಳಾರಿಯಲ್ಲಿ ಬಿಜೆಪಿ ನಡೆಸುತ್ತಿರುವ ಪಾದಯಾತ್ರೆಯನ್ನೂ ಟೀಕಿಸಿದ ಅವರು, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಅಧ್ಯಕ್ಷ ಸ್ಥಾನ ತಪ್ಪಿಹೋಗುವ ಭೀತಿಯಿಂದಲೇ ಪಾದಯಾತ್ರೆ ನಡೆಸಲಾಗುತ್ತಿದೆ .ತಮ್ಮ ಕುರ್ಚಿಯನ್ನು ಭದ್ರಪಡಿಸಿ ಕೊಳ್ಳಲು ಪಾದಯಾತ್ರೆ ನಡೆಸುತ್ತಿದ್ದಾರೆ ಎಂದು ಬಿಜೆಪಿ ಮುಖಂಡ ಬಸನಗೌಡ ಪಾಟೀಲ ಯತ್ನಾಳ್ ಅವರೇ ಹೇಳಿದ್ದಾರೆ. ಯಾವ ವಿಚಾರಕ್ಕಾಗಿ ಪಾದಯಾತ್ರೆ ನಡೆಸುವುದಾಗಿ ಹೇಳಲಾಗಿತ್ತೋ, ಆ ವಿಚಾರವೇ ಈಗ ಇಲ್ಲ. ನಿರ್ದಿಷ್ಟ ವಿಚಾರವಿಲ್ಲದೆ ಪಾದಯಾತ್ರೆ ನಡೆಸುತ್ತಿರುವುದು ರಾಜ್ಯದ ಇತಿಹಾಸದಲ್ಲೇ ಅಪರೂಪ ಎಂದು ಟೀಕಿಸಿದರು.

ರಾಜ್ಯದಲ್ಲಿ ಬರಗಾಲದಂತಹ ಪರಿಸ್ಥಿತಿ ಎದುರಾಗಿದ್ದು, ಈ ಸಂದರ್ಭದಲ್ಲಿ ಜನರ ಸಮಸ್ಯೆಗಳತ್ತ ಗಮನ ಹರಿಸಬೇಕಾದ ಬಿಜೆಪಿ ರಾಜಕೀಯ ಉದ್ದೇಶದಿಂದ ಪಾದಯಾತ್ರೆ ನಡೆಸುತ್ತಿದೆ. ಜನರು ಕಾಂಗ್ರೆಸ್ ಸರ್ಕಾರಕ್ಕೆ ಐದು ವರ್ಷ ಆಡಳಿತ ನಡೆಸುವ ಅವಕಾಶ ನೀಡಿದ್ದಾರೆ. ಅವಧಿ ಪೂರ್ಣಗೊಂಡ ಬಳಿಕ ಮತ್ತೆ ಜನರ ಮುಂದೆ ಹೋಗಿ ಚುನಾವಣೆಯನ್ನು ಎದುರಿಸುತ್ತೇವೆ ಎಂದರು.

ಪ್ರತಿಪಕ್ಷ ನಾಯಕ ಆರ್. ಅಶೋಕ್ ಅವರ ಇಂದಿರಾ ಕಿಟ್ ಕುರಿತ ಆರೋಪಕ್ಕೆ ಪ್ರತಿಕ್ರಿಯಿಸಿದ ಸಚಿವರು,



ಯೋಜನೆಯನ್ನು ಸದ್ಯಕ್ಕೆ ಸ್ಥಗಿತಗೊಳಿಸಲಾಗಿದ್ದು, ಮತ್ತೆ ಆರಂಭಿಸುವ ಕುರಿತು ಸೂಚನೆ ನೀಡಲಾಗಿದೆ ಎಂದರು.

ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಯೋಜನೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಕಾಂಗ್ರೆಸ್ ಸರ್ಕಾರದ ವಿರುದ್ಧ ಆರೋಪ ಮಾಡುವ ಮೊದಲು ಪ್ರಧಾನಿ ನರೇಂದ್ರ ಮೋದಿ ಅವರ ಬಳಿ ಅಗತ್ಯ ವಸ್ತುಗಳ ಬೆಲೆ ಏರಿಕೆಗೆ ಕಾರಣವೇನು ಎಂಬುದನ್ನು ಬಿಜೆಪಿ ನಾಯಕರು ಪ್ರಶ್ನಿಸಬೇಕು ಎಂದು ತಿರುಗೇಟು ನೀಡಿದರು. ಕೇಂದ್ರ ಸರ್ಕಾರದ ನೀತಿಗಳಿಂದಾಗಿ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿದೆ. ಕೇಂದ್ರ ಸರ್ಕಾರದ ವಿರುದ್ಧ ಮಾತನಾಡಲು ಸಾಧ್ಯವಾಗದ ಬಿಜೆಪಿ ನಾಯಕರು ರಾಜ್ಯ ಸರ್ಕಾರದ ವಿರುದ್ಧ ಆರೋಪ ಮಾಡುತ್ತಿದ್ದಾರೆ ಎಂದು ಅವರು ದೂರಿದರು.

### ವೃಕ್ಷಥಾನ್ ಹೆರಿಟೇಜ್ ರನ್ ಯಶಸ್ಸಿಗೆ ವಿಜಯಪುರ

### ಸಿಇಒ ಸೂಚನೆ: ಅಧಿಕಾರಿಗಳೊಂದಿಗೆ ಸಭೆ



**ವಿಜಯಪುರ,ಸೆ.8**–ನಗರದಲ್ಲಿ ಡಿ. 13 ರಂದು ನಡೆಯಲಿರುವ ವೃಕ್ಷಥಾನ ಹೆರಿಟೇಜ್ ರನ್ ಬೃಹತ್ ಜಾಗೃತಿ ಕಾರ್ಯಕ್ರಮವಾಗಿ ರೂಪುಗೊಂಡಿದೆ. ಕಳೆದ ಆವೃತ್ತಿಯಲ್ಲಿ ಜಿಲ್ಲಾಡಳಿತದ ಸತತ ಸಭೆಗಳಿಂದಾಗಿ 23 ಸಾವಿರ ಸ್ಪರ್ಧಿಗಳು ಭಾಗವಹಿಸಿದ್ದರು. ಈ ಬಾರಿಯ ನೋಂದಾಯಿತ ಓಟಗಾರರ ಸಂಖ್ಯೆಯನ್ನು 30 ಸಾವಿರಕ್ಕೇರಿಸುವ ಗುರಿ ಹೊಂದಲಾಗಿದೆ. ಹಾಗಾಗಿ ಓಟಗಾರರೆಲ್ಲ ಈಗಲೇ ನೋಂದಾಯಿಸಿ ಭಾಗವಹಿಸುವ ಮೂಲಕ ಯಶಸ್ವಿಗೊಳಿಸಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ರಿಷಿ ಆನಂದ ಅವರು ಮನವಿ ಮಾಡಿದರು.

ಜಿಲ್ಲೆಯಲ್ಲಿ ಪರಿಸರ ಜಾಗೃತಿ ಮತ್ತು ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆಯನ್ನು ಉತ್ತೇಜಿಸುವ ಉದ್ದೇಶದಿಂದ ಆಯೋಜಿಸಲಾಗುತ್ತಿರುವ ಪ್ರತಿಷ್ಠಿತ ವೃಕ್ಷಥಾನ ಹೆರಿಟೇಜ್ ರನ್ ಕಾರ್ಯಕ್ರಮಕ್ಕೆ ಈಗಾಗಲೇ ನೋಂದಣಿ ಪ್ರಕ್ರಿಯೆ ಆರಂಭವಾಗಿದೆ. ಪ್ರತಿವರ್ಷ ಈ ಕಾರ್ಯಕ್ರಮ ಬಹಳ ಯಶಸ್ವಿಯಾಗಿ ನಡೆಯುತ್ತಿದೆ. ಜಿಲ್ಲೆಯ ಗ್ರಾಮ ಪಂಚಾಯಿತಿಗಳ ಅಧಿಕಾರಿ, ಸಿಬ್ಬಂದಿಯಿಂದ ನೋಂದಣಿ ಮಾಡಿಸಬೇಕು. ಎಲ್ಲರೂ ನೋಂದಣಿ ಮಾಡಿಕೊಳ್ಳುವ ಮೂಲಕ ಈ ಬಾರಿ 30 ಸಾವಿರಕ್ಕೇರಿಸಬೇಕು ಎಂದ ಅವರು, ಆ ಮೂಲಕ ವಿಜಯಪುರದ ವೃಕ್ಷಥಾನ ಜಗತ್ತಿನ ನಕ್ಷೆಯಲ್ಲಿ ಮಿಂಚಬೇಕು ಎಂದ ಅವರು, ಈ ಕುರಿತು ಕಾರ್ಯಕ್ರಮದ ಬಗ್ಗೆ ವ್ಯಾಪಕ ಪ್ರಚಾರ ಮಾಡಿ, ಗ್ರಾಮ ಪಂಚಾಯತಿ ಮಟ್ಟದಲ್ಲಿ ಪ್ರಚಾರ ಕೈಗೊಳ್ಳಬೇಕು ಎಂದರು.

# ಇ.ಡಿ. ದಾಳಿ ಹಿಂದೆ ರಾಜಕೀಯ ಷಡ್ಯಂತ್ರ, ದುರುದ್ದೇಶವಿಲ್ಲ: ಎಂಎಲ್‌ಸಿ ಲಖನ್ ಜಾರಕಿಹೊಳಿ

**ಗೋಕಾಕ್, ಸೆ.9:** ಸಚಿವ ಸತೀಶ್ ಜಾರಕಿಹೊಳಿ ಅವರ ನಿವಾಸ ಹಾಗೂ ಅವರ ನಿಕಟವರ್ತಿಗಳ ಮೇಲೆ ಜಾರಿ ನಿರ್ದೇಶನಾಲಯ (ಇಡಿ) ನಡೆಸುತ್ತಿರುವ ದಾಳಿ ಮತ್ತು ವಿಚಾರಣೆ ರಾಜ್ಯ ರಾಜಕಾರಣದಲ್ಲಿ ಭಾರಿ ಸಂಚಲನ ಮೂಡಿಸಿದೆ.

ಈ ಹಠಾತ್ ಬೆಳವಣಿಗೆಯ ಕುರಿತು ಗೋಕಾಕ್‌ನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಸಚಿವರ ಸಹೋದರ ಹಾಗೂ ವಿಧಾನ ಪರಿಷತ್ ಸದಸ್ಯ ಲಖನ್ ಜಾರಕಿಹೊಳಿ, ಕಾಂಗ್ರೆಸ್ ನಾಯಕರು ಈ ಇ.ಡಿ. ದಾಳಿಯನ್ನು ಪರಿಶಿಷ್ಟ ಪಂಗಡದ (ಎಸ್.ಟಿ) ನಾಯಕರನ್ನು ಗುರಿಯಾಗಿಸಿಕೊಂಡು ಮಾಡುತ್ತಿರುವ ರಾಜಕೀಯ ಷಡ್ಯಂತ್ರ ಎಂದು ಆರೋಪಿಸುತ್ತಿದ್ದಾರೆ. ಆದರೆ, ಈ ದಾಳಿಯ ಹಿಂದೆ ಯಾವುದೇ ರೀತಿಯ ರಾಜಕೀಯ ಷಡ್ಯಂತ್ರ ಅಥವಾ ದುರುದ್ದೇಶವಿಲ್ಲ. ಸಚಿವ ಸತೀಶ್ ಜಾರಕಿಹೊಳಿ ಅವರು ವಿವಿಧ ಉದ್ಯಮಗಳಲ್ಲಿ ಸಕ್ರಿಯರಾಗಿದ್ದು, ದೊಡ್ಡ ಮಟ್ಟದ ಹೂಡಿಕೆಗಳನ್ನು ಮಾಡಿದ್ದಾರೆ. ಉದ್ಯಮ ನಡೆಸುವವರ ಮೇಲೆ ಜಾರಿ ನಿರ್ದೇಶನಾಲಯ ತನಿಖೆ ನಡೆಸುವುದು ಮತ್ತು ಪರಿಶೀಲನೆ ಮಾಡುವುದು ಒಂದು ಸಹಜ ಹಾಗೂ ನಿರಂತರ ಪ್ರಕ್ರಿಯೆಯಾಗಿದೆ ತಿರುಗೇಟು ನೀಡಿದ್ದಾರೆ.

ವಿದೇಶದಲ್ಲಿ ಸಚಿವ ಸತೀಶ್ ಜಾರಕಿಹೊಳಿ ಅವರು ಹೂಡಿಕೆ ಮಾಡಿರುವ ಕುರಿತು ಎದ್ದಿರುವ ಪ್ರಶ್ನೆಗಳಿಗೆ ಉತ್ತರಿಸಿದ ಲಖನ್, "ವಿದೇಶಿ ಹೂಡಿಕೆಗಳ ಬಗ್ಗೆ ಮಾಹಿತಿ



ಇಲ್ಲ. ಆದರೆ, ತಮ್ಮ ಉದ್ಯಮ ಹಾಗೂ ಹೂಡಿಕೆಗೆ ಸಂಬಂಧಿಸಿದ ಎಲ್ಲ ದಾಖಲೆಗಳು ಸಚಿವ ಸತೀಶ್ ಜಾರಕಿಹೊಳಿ ಅವರ ಬಳಿ ಭದ್ರವಾಗಿವೆ. ಇ.ಡಿ. ಅಧಿಕಾರಿಗಳು ಕೇಳುವ ಎಲ್ಲಾ ಪ್ರಶ್ನೆಗಳಿಗೆ ಮತ್ತು ಆರೋಪಗಳಿಗೆ ಸಚಿವರೇ ದಾಖಲೆಗಳ ಸಹಿತ ಕಾನೂನಾತ್ಮಕವಾಗಿ ಸ್ಪಷ್ಟನೆ ನೀಡಲಿದ್ದಾರೆ" ಎಂದು ಸೋದರನ ಬೆಂಬಲಕ್ಕೆ ನಿಂತಿದ್ದಾರೆ.

# ಕಾರಣಗಳಿಲ್ಲದೇ ಬ್ಯಾನರ್‌ಗಳ ತೆರವು: ಮಾಜಿ ಶಾಸಕ ಗಾಲಿ ಸೋಮಶೇಖರರೆಡ್ಡಿ ಆಕ್ರೋಶ

**ಬಳ್ಳಾರಿ, ಸೆ.09:** ಬಳ್ಳಾರಿ ಜಿಲ್ಲಾಡಳಿತ ಹಾಗೂ ಮಹಾನಗರ ಪಾಲಿಕೆ ಅಧಿಕಾರಿಗಳನ್ನು ಕಾಂಗ್ರೆಸ್ ಸರ್ಕಾರದ ಕೈಗೊಂಬೆಗಳನ್ನಾಗಿ ಮಾಡಿಕೊಂಡು, ಬಳ್ಳಾರಿ ನಗರದ ಜನತಾ ಪಕ್ಷದ ವತಿಯಿಂದ ಅಳವಡಿಸಲಾಗಿದ್ದ ಹೊರವಲಯದ ಅಲ್ಲಿಪುರ ಬಳಿ ಭಾರತೀಯ ಬ್ಯಾನರ್‌ಗಳನ್ನು ಯಾವುದೇ ಸಮರ್ಪಕ ಕಾರಣವಿಲ್ಲದೆ ತೆರವುಗೊಳಿಸಿರುವುದು ಖಂಡನೀಯ ಎಂದು ಮಾಜಿ ಶಾಸಕ ಗಾಲಿ ಸೋಮಶೇಖರ ರೆಡ್ಡಿ ಆಕ್ರೋಶ ವ್ಯಕ್ತಡಿಸಿದರು.

ಭಾರತೀಯ ಜನತಾ ಪಕ್ಷದ ಬ್ಯಾನರ್ ಹಾಗೂ ಬಾವುಟಗಳನ್ನು ಅಳವಡಿಸಲು ಅನುಮತಿ ನಿರಾಕರಿಸಿರುವ ಜಿಲ್ಲಾಡಳಿತದ ಕ್ರಮವನ್ನು ವಿರೋಧಿಸಿ, ನಗರದ ಬಿಐಟಿಎಂ ಕಾಲೇಜು ಸಮೀಪ ರಾಜ್ಯ ಸರ್ಕಾರ ಹಾಗೂ ಜಿಲ್ಲಾಡಳಿತದ ವಿರುದ್ಧ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರೊಂದಿಗೆ ರಸ್ತೆಗೆ ಇಳಿದು ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಮಾತನಾಡಿದ ಮಾಜಿ ಶಾಸಕ ಸೋಮಶೇಖರ ರೆಡ್ಡಿಯವರು, ಪ್ರಜಾಪ್ರಭುತ್ವದಲ್ಲಿ ಪಕ್ಷಗಳಿಗೂ ಸಮಾನ ಹಕ್ಕು ಇರಬೇಕು. ಅಧಿಕಾರದ ದುರುಪಯೋಗವನ್ನು ಸಹಿಸುವ ಪ್ರಶ್ನೆಯೇ ಇಲ್ಲ. ನಮ್ಮ ಹಕ್ಕುಗಳಿಗಾಗಿ, ಪಕ್ಷದ ಗೌರವಕ್ಕಾಗಿ ಹಾಗೂ ಪ್ರಜಾಪ್ರಭುತ್ವದ ಉಳಿವಿಗಾಗಿ ಈ ಹೋರಾಟ ಮುಂದುವರಿಯಲಿದೆ. ಬಿಜೆಪಿ ಕಾರ್ಯಕರ್ತರ ಶಕ್ತಿ, ಒಗ್ಗಟ್ಟು ಮತ್ತು ಹೋರಾಟದ



ಧ್ವನಿ ಇನ್ನಷ್ಟು ಗಟ್ಟಿಯಾಗಲಿದೆ ಎಂದರು.

ಈ ವೇಳೆ ರಸ್ತೆಬಂದ್‌ನಿಂದ ಕೆಲಕಾಲ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿ, ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

ಪಾಲಿಕೆ ಅಧಿಕಾರಿಗಳು ಹಾಗೂ ಪೊಲೀಸರು ಸ್ಥಳಕ್ಕೆ ಆಗಮಿಸಿ ಪ್ರತಿಭಟನಾಕಾರರೊಂದಿಗೆ ಮಾತುಕತೆ ನಡೆಸಿ ಪರಿಸ್ಥಿತಿ ನಿಯಂತ್ರಿಸಲು ಮುಂದಾದರು.

ಬಿಜೆಪಿ ಕಾರ್ಯಕರ್ತರು ಪಾಲಿಕೆ ಅಧಿಕಾ–ರಿಗಳ ವಿರುದ್ಧ ಘೋಷಣೆಗಳನ್ನು ಕೂಗಿ, ಬ್ಯಾನರ್ ತೆರವು ವಿಚಾರದಲ್ಲಿ ನ್ಯಾಯಯುತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

# ಕೆಪಿಎಸ್‌ಸಿ ನೇಮಕಾತಿ ಹಗರಣ: ಬೆಳ್ಳಂಬೆಳಗ್ಗೆ ಅಭ್ಯರ್ಥಿಗಳ ಮನೆ ಮೇಲೆ ಸಿಐಡಿ ದಾಳಿ

**ಕಲಬುರಗಿ, ಸೆ. 9:** ಕರ್ನಾಟಕ ಲೋಕಸೇವಾ ಆಯೋಗ ನಡೆಸಿರುವ ಪಶುವೈದ್ಯಾಧಿಕಾರಿಗಳ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಸಿಐಡಿ ಅಧಿಕಾರಿಗಳು ತನಿಖೆ ಈಗ ಕಲಬುರಗಿಗೆ ವಿಸ್ತರಿಸಿದ್ದು, ಬುಧವಾರ ಕಲಬುರಗಿ ನಗರದಲ್ಲಿ ಬೆಳಂಬೆಳಗ್ಗೆ ನೇಮಕಗೊಂಡಿರುವ ಅಭ್ಯರ್ಥಿಗಳ ಮನೆಯ ಮೇಲೆ ದಾಳಿ ನಡೆಸಿದ್ದಾರೆ.

ನಗರದ ರಾಮ ಮಂದಿರ ಹತ್ತಿರದ ನ್ಯೂ ಓಜಾ ಲೇಔಟ್‌ನಲ್ಲಿರುವ ಪಶುವೈದ್ಯಕೀಯ ನೇಮಕಾತಿ ಅಭ್ಯರ್ಥಿ ಮಮಿತಾ ಅವರ ನಿವಾಸದ ಮೇಲೆ ಸಿಐಡಿ ಅಧಿಕಾರಿಗಳ ತಂಡ ದಾಳಿ ನಡೆಸಿ ಪರಿಶೀಲನೆ ನಡೆಸಿದೆ.

ಮಮಿತಾ ಅವರು ಕೆಪಿಎಸ್‌ಸಿ ಸದಸ್ಯೆ ಶಾಂತಾ ಹೊಸಮನಿ ಅವರ ಮೂಲಕ ಡೀಲ್ ಮಾಡಿಕೊಂಡು ನೇಮಕಾತಿ ಪಡೆದಿದ್ದಾರೆ ಎಂಬ ಆರೋಪ ಪ್ರಕರಣದ ತನಿಖೆಯಲ್ಲಿ ಕೇಳಿಬಂದಿದೆ. ಈ ಹಿನ್ನೆಲೆಯಲ್ಲಿ ಸಿಐಡಿ ಅಧಿಕಾರಿಗಳು ಮಮಿತಾ ಅವರ ಮನೆ ಸೇರಿದಂತೆ ಸಂಬಂಧಿತ ದಾಖಲೆಗಳು ಹಾಗೂ ಇತರ ಮಾಹಿತಿಗಳ ಪರಿಶೀಲನೆ ನಡೆಸಿದ್ದಾರೆ ಎನ್ನಲಾಗಿದೆ.



ಬೆಂಗಳೂರು ಸಿಐಡಿ ಡಿವೈಎಸ್‌ಪಿ ಹಾಗೂ ಕಲಬುರಗಿ ಡಿವೈಎಸ್‌ಪಿ ಅಸ್ಲಾಂ ಪಾಷಾ ನೇತೃತ್ವದಲ್ಲಿ ದಾಳಿ ನಡೆದಿದ್ದು, ಸುಮಾರು 20ಕ್ಕೂ ಅಧಿಕ ಅಧಿಕಾರಿಗಳು ಹಾಗೂ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದಾರೆ. ಅಧಿಕಾರಿಗಳು ಮಹತ್ವದ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆಂದು ಮೂಲಗಳು ತಿಳಿಸಿವೆ. ಪಶುವೈದ್ಯಾಧಿಕಾರಿಗಳ ನೇಮಕಾತಿಯಲ್ಲಿ ಅಕ್ರಮದ ಆರೋಪಕ್ಕೆ ಸಂಬಂಧಿಸಿದಂತೆ ಈಗಾಗಲೇ ಕಲಬುರಗಿ ಮೂಲದ ಕೆಪಿಎಸ್ಸಿ ಸದಸ್ಯೆ ಶಾಂತಾ ಹೊಸಮನಿ ನಾಪತ್ತೆಯಾಗಿ ಮೂರು ವಾರ ಕಳೆದರೂ ಇದುವರೆಗೂ ಅವರು ಪತ್ತೆಯಾಗಿಲ್ಲ. ಕಳೆದ ಎರಡು ವಾರದ ಹಿಂದೆ ಕೆಪಿಎಸ್ಸಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ ಅವರ ಕಲಬುರಗಿ ನಗರದ ಮನೆಯಲ್ಲೂ ಸಿಐಡಿ ಅಧಿಕಾರಿಗಳ ತಂಡವು ದಾಳಿ ನಡೆಸಲಾಗಿ, ದಾಖಲೆ ಹಾಗೂ ಕೆಲವು ಮಾಹಿತಿಯನ್ನು ಕಲೆ ಹಾಕಲಾಗಿತ್ತು. ಸಿಐಡಿ ತನಿಖೆ ತೀವ್ರಗೊಂಡಿರುವ ಹಿನ್ನೆಲೆ ಪ್ರಕರಣದಲ್ಲಿ ಇನ್ನಷ್ಟು ಹೆಸರುಗಳು ಹಾಗೂ ನೇಮಕಾತಿ ಅಕ್ರಮದ ವಿವರಗಳು ಹೊರಬರುವ ಸಾಧ್ಯತೆ ಇದೆ.

### ಮಹಾನಗರ ಪಾಲಿಕೆಯಲ್ಲಿ ರಾಜಕೀಯ ಪಕ್ಷಗಳ ಸಭೆ

# ಸೆ.23ರವರೆಗೆ ಹಕ್ಕು, ಆಕ್ಷೇಪಣೆ ಸಲ್ಲಿಕೆಗೆ ಗಡುವು

**ವಿಜಯಪುರ,ಸೆ.8**–ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಎಸ್‌ಐಆರ್‌ಗೆ ಸಂಬಂಧಿಸಿದಂತೆ ವಿಸ್ತರಿತ ವೇಳಾಪಟ್ಟಿಯಂತೆ ಆ. 24 ರಿಂದ ಸೆ.23 ರವರೆಗೆ ಸಾರ್ವಜನಿಕರು ತಮ್ಮ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ನಗರ ಮತಕ್ಷೇತ್ರದ ಸಹಾಯಕ ಮತದಾರರ ನೋಂದಣಾಧಿಕಾರಿ ತಿಳಿಸಿದರು. ಆನ್‌ಲೈನ್ ಸೌಲಭ್ಯ: ಉಳಿದ ದಿನಗಳಲ್ಲಿ ಸಾರ್ವಜನಿಕರು ಆನ್‌ಲೈನ್ ಮೂಲಕ https://voters.eci.gov.in/ವೆಬ್‌ಸೈಟ್‌ಗೆ ಭೇಟಿ ನೀಡಿ ಹೆಸರನ್ನು ನೋಂದಾಯಿಸಿಕೊಳ್ಳಬಹುದು.

# ಇಂದಿನಿಂದ ಅಗ್ನಿವೀರ ಸೇನಾ ಭರ್ತಿ ರ್‍ಯಾಲಿ

**ವಿಜಯಪುರ, ಸೆ.8**–ಮಂಗಳೂರಿನ ಸೇನಾ ಭರ್ತಿ ಕಚೇರಿ ಹಾಗೂ ಜಿಲ್ಲಾಡಳಿತದ ಜಂಟಿ ಸಹಯೋಗದಲ್ಲಿ ಸೆಪ್ಟೆಂಬರ್ 10 ರಿಂದ 22ರವರೆಗೆ ನಗರದ ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಬೃಹತ್ ಅಗ್ನಿವೀರ ಸೇನಾ ಭರ್ತಿ ರ್‍ಯಾಲಿ ಆಯೋಜಿಸಲಾಗಿದೆ.

ಜೂನ್ 1 ರಿಂದ 12ರವರೆಗೆ ನಡೆದ ಆನ್‌ಲೈನ್ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಇ)ಯಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳಿಗೆ ಈ ಭರ್ತಿ ರ್‍ಯಾಲಿ ನಡೆಯಲಿದೆ. ಕರ್ನಾಟಕದ ಬಾಗಲಕೋಟೆ, ವಿಜಯಪುರ, ಧಾರವಾಡ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ದಾವಣಗೆರೆ, ಗದಗ, ಹಾವೇರಿ, ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಸೇರಿದಂತೆ 11 ಜಿಲ್ಲೆಗಳ ಅರ್ಹ ಅಭ್ಯರ್ಥಿಗಳು ರ್‍ಯಾಲಿಯಲ್ಲಿ ಭಾಗವಹಿಸಲು ಅವಕಾಶ ಹೊಂದಿದ್ದಾರೆ.

ಭರ್ತಿಗೆ ಸಂಬಂಧಿಸಿದ ವಯೋಮಿತಿ, ಶೈಕ್ಷಣಿಕ ಅರ್ಹತೆ ಹಾಗೂ ಇತರ ನಿಯಮಗಳು ಮತ್ತು ಷರತ್ತುಗಳ ಕುರಿತು ಸಮಗ್ರ ಮಾಹಿತಿಯನ್ನು ಭಾರತೀಯ ಸೇನೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಆನ್‌ಲೈನ್ ಪರೀಕ್ಷೆಯಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳಿಗೆ ಈಗಾಗಲೇ ಪ್ರವೇಶ ಪತ್ರಗಳನ್ನು ನೀಡಲಾಗಿದ್ದು, ಅಭ್ಯರ್ಥಿಗಳು ತಮ್ಮ ಖಾತೆ ಅಥವಾ ನೋಂದಾಯಿತ ಇ–ಮೇಲ್ ಮೂಲಕವೂ ಪ್ರವೇಶ ಪತ್ರವನ್ನು ಪಡೆದುಕೊಳ್ಳಬಹುದಾಗಿದೆ.

ಸೇನಾ ಭರ್ತಿ ಪ್ರಕ್ರಿಯೆಯು ಸಂಪೂರ್ಣ ಪಾರದರ್ಶಕವಾಗಿದ್ದು, ಆನ್‌ಲೈನ್ ಪರೀಕ್ಷೆಯ ಫಲಿತಾಂಶ ಹಾಗೂ ಭರ್ತಿ ರ್‍ಯಾಲಿಯಲ್ಲಿ ಅಭ್ಯರ್ಥಿಗಳ ದೈಹಿಕ ಸಾಮರ್ಥ್ಯ ಪರೀಕ್ಷೆ ಆಧಾರದ ಮೇಲೆ ಅಂತಿಮ ಆಯ್ಕೆ ನಡೆಯಲಿದೆ. ಅಭ್ಯರ್ಥಿಗಳು ಯಾವುದೇ ಮಧ್ಯವರ್ತಿಗಳಿಂದ ಮೋಸ ಹೋಗಬಾರದು ಎಂದು ಸೇನಾ ಭರ್ತಿ ಕಚೇರಿ ಮನವಿ ಮಾಡಿದೆ.

# ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ಹರಾಜು ಹಾಕದೇ ಗುತ್ತಿಗೆ ಕೊಟ್ಟು ಪುನಶ್ಚೇತನಗೊಳಿಸಿ: ಶಕುಂತಲಾ ಬೆಲ್ದಾಳೆ ಆಗ್ರಹ

**ಬೀದರ್, ಸೆ.9:** ಬೀದರ್ ಸಹಕಾರ ಸಕ್ಕರೆ ಕಾರ್ಖಾನೆ (ಬಿಎಸ್‌ಎಸ್‌ಕೆ) ಹರಾಜು ಹಾಕದೇ, ಅದನ್ನು ಗುತ್ತಿಗೆ ಮೇಲೆ ಕೊಟ್ಟು ಪುನಶ್ಚೇತನಗೊಳಿಸಿ ರೈತರ, ಕಾರ್ಮಿಕರ ಹಿತ ಕಾಪಾಡಬೇಕು ಎಂದು ಬೀದರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿರ್ದೇಶಕಿ ಶಕುಂತಲಾ ಬೆಲ್ದಾಳೆ ಆಗ್ರಹಿಸಿದ್ದಾರೆ.

ಈ ಸಂಬಂಧ ಬೆಲ್ದಾಳೆ ಅವರು ಡಿಸಿಸಿ ಬ್ಯಾಂಕ್‌ನ ಅಧ್ಯಕ್ಷ ಅಮರ ಕುಮಾರ್ ಖಂಡ್ರೆ ಅವರಿಗೆ ಪತ್ರ ಬರೆದು ಒತ್ತಾಯಿಸಿದ್ದು, 1969ರಲ್ಲಿ ಸ್ಥಾಪನೆಗೊಂಡ ಈ ಕಾರ್ಖಾನೆ ಜಿಲ್ಲೆಯ ಹಳೆಯ ಸಹಕಾರ ಕ್ಷೇತ್ರದ ಸಕ್ಕರೆ ಕಾರ್ಖಾನೆಯಾಗಿದೆ. ಈ ಕಾರ್ಖಾನೆ ಡಿಸಿಸಿ ಬ್ಯಾಂಕ್‌ನ ಕಟ್ ಬಾಕಿ ಸಾಲ ಉಳಿಸಿಕೊಂಡಿದೆ. ಕಳೆದ ಕೆಲವು ವರ್ಷಗಳಿಂದ ಬಾಕಿ ವಸೂಲಿ ಆಗದಿರುವ ಕಾರಣ ಬ್ಯಾಂಕ್ ಆರ್ಥಿಕ ವ್ಯವಹಾರದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿರುವುದು ನಿಜ. ಸಾಲ ವಸೂಲಿ ಜೊತೆಗೆ ಕಾರ್ಖಾನೆಯನ್ನು ಪುನಶ್ಚೇತನ ಮಾಡುವುದು ಬಹಳ ಅಗತ್ಯವಿದೆ ಎಂದು ತಿಳಿಸಿದ್ದಾರೆ.

ಕಾರ್ಖಾನೆ ಸಾಲ ವಸೂಲಿ ಮಾಡುವುದು ಒಂದೆಡೆಯಾದರೆ,



ಕಾರ್ಖಾನೆ ಮತ್ತೆ ಆರಂಭವಾಗುವುದು ಸಹ ಇನ್ನೊಂದೆಡೆ ಬಹುಮುಖ್ಯ ವಿಷಯ. ಈ ಕಾರ್ಖಾನೆಯನ್ನು ಹರಾಜು ಹಾಕದೆ, ಖಾಸಗಿಯವರಿಗೆ ಗುತ್ತಿಗೆ ವಹಿಸಿ ಪುನಶ್ಚೇತನಗೊಳಿಸಬೇಕು ಎಂಬುದು ಜಿಲ್ಲೆಯ ರೈತರ, ಸಾರ್ವಜನಿಕರ ಬೇಡಿಕೆಯಾಗಿದೆ. ಈ ಬೇಡಿಕೆಗೆ ನಮ್ಮ ಸಹಮತ, ಬೆಂಬಲ ಸಹ ಇದೆ ಎಂದು ಹೇಳಿದ್ದಾರೆ.

ಎಲ್.ಆರ್.ಓ.ಟಿ. ಆಧಾರದ ಮೇಲೆ ಖಾಸಗಿ ಯವರಿಗೆ ಗುತ್ತಿಗೆ ವಹಿಸಿ ಕಾರ್ಖಾನೆಯನ್ನು ಪುನಶ್ಚೇತನಗೊಳಿಸುವುದಕ್ಕೆ ಸರ್ಕಾರ ಮುಂದಾಗಿರುವುದು ಉತ್ತಮ ಬೆಳವಣಿಗೆಯಾಗಿದೆ. ಸರ್ಕಾರದ ವಾಣಿಜ್ಯ ಇಲಾಖೆ ಕಾರ್ಯದರ್ಶಿಗಳು ಡಿಸಿಸಿ ಬ್ಯಾಂಕ್ ಸಿಇಓ ಅವರಿಗೆ ಬರೆದ ಪತ್ರದಲ್ಲಿಯೂ ಬಿಎಸ್‌ಎಸ್‌ಕೆ ಕಾರ್ಖಾನೆ ಖಾಸಗಿ ಯವರಿಗೆ ಎಲ್‌ಆರ್‌ಓಟಿ ಆಧಾರದ ಮೇಲೆ ಗುತ್ತಿಗೆ ವಹಿಸಿ ಪುನಶ್ಚೇತನ ಪ್ರಕ್ರಿಯೆ ಸರ್ಕಾರದ ಮಟ್ಟದಲ್ಲಿ ಅಂತಿಮ ಹಂತದಲ್ಲಿದೆ ಎಂಬ ಅಂಶ ಉಲ್ಲೇಖಿಸಿದ್ದಾರೆ.

ಹೀಗಾಗಿ ಕಾರ್ಖಾನೆಯನ್ನು ಗುತ್ತಿಗೆ ವಹಿಸುವ ಸರ್ಕಾರದ ಪ್ರಯತ್ನಕ್ಕೆ ಬ್ಯಾಂಕ್ ಕೈಜೋಡಿಸಬೇಕು ಎಂಬುದು ನಮ್ಮ ಸ್ಪಷ್ಟ ಅಭಿಪ್ರಾಯವಾಗಿದೆ ಎಂದಿದ್ದಾರೆ.

# ವಿಕಸಿತ ಭಾರತಕ್ಕೆ ಉದ್ಯಮಶೀಲತೆ ಮಹತ್ವದ್ದು: ಪ್ರೊ.ಬಿರಾದಾರ



**ಕಲಬುರಗಿ, ಸೆ. 9:** ವಿಕಸಿತ ಭಾರತಕ್ಕೆ ಉದ್ಯಮಶೀಲತೆ ಅತ್ಯಂತ ಮಹತ್ವದ್ದು. ಅದಕ್ಕಾಗಿ ಕಠಿಣ ಪರಿಶ್ರಮ, ಆತ್ಮವಿಶ್ವಾಸ, ಸಕಾರಾತ್ಮಕ ಚಿಂತನೆ, ಹೋಲಿಕೆ ತಪ್ಪಿಸುವುದು ಮತ್ತು ಸ್ವಯಂಶಿಸ್ತು ಯಶಸ್ಸಿನ ಐದು ಪ್ರಮುಖ ತತ್ವಗಳಾಗಿವೆ ಎಂದು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ಆರ್.ಆರ್. ಬಿರಾದಾರ್ ಹೇಳಿದರು.

ವಿಶ್ವವಿದ್ಯಾಲಯ ಮಟ್ಟದ ಆಂತರಿಕ ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್– 2026 ಸಮಾರೋಪ ದಲ್ಲಿ ಮಾತನಾಡಿದ ಅವರು, ಯಶಸ್ಸಿಗೆ ಯಾವುದೇ ಅಡ್ಡದಾರಿ ಇಲ್ಲ. ವಿವಿ ಸೌಲಭ್ಯ ಪರಿಣಾಮಕಾರಿ ಯಾಗಿ ಬಳಸಿಕೊಳ್ಳಬೇಕು. ವೈಫಲ್ಯ ಗಳಿಂದ ಕಲಿಯಬೇಕು ಮತ್ತು ಗುರಿಯತ್ತ ಗಮನಹರಿಸಬೇಕು ಎಂದು ವಿದ್ಯಾರ್ಥಿ ಗಳಿಗೆ ಕಿವಿಮಾತು ಹೇಳಿದರು.

ಯುವಶಕ್ತಿಯನ್ನೇ ನಾವೀನ್ಯದ ಶಕ್ತಿಯಾಗಿ ಪರಿವರ್ತಿಸಬೇಕು. ಯುವಜನರ ನೇತೃತ್ವದ ನಾವೀನ್ಯತೆ ಹೂಡಿಕೆ ಮತ್ತು ಉದ್ಯಮಶೀಲತೆಗೆ ಉತ್ತೇಜನ ನೀಡುವುದರ ಜತೆಗೆ 2047ರ ವಿಕಸಿತ ಭಾರತದ ಗುರಿ ಸಾಧನೆ ಸಾಕಾರಕ್ಕೆ ಪ್ರಮುಖ ಕೊಡುಗೆ ನೀಡಲಿದೆ ಎಂದರು.

ಆಂತರಿಕ ಹ್ಯಾಕಥಾನ್‌ಗೆ ವಿವಿಯ 55 ತಂಡಗಳು ನೋಂದಾಯಿಸಿವೆ. ಕಂಪ್ಯೂಟರ್ ವಿಜ್ಞಾನ, ಎಂಸಿಎ, ಗಣಿತ–ಕಂಪ್ಯೂಟಿಂಗ್, ಇಲೆಕ್ಟ್ರಾನಿಕ್ಸ್ ಆ್ಯಯಂಡ್ ಕಮ್ಯುನಿ ಕೇಷನ್ ಇಂಜಿನಿಯರಿಂಗ್, ಇಲೆಕ್ಟ್ರಿಕಲ್ ಇಂಜಿನಿಯರಿಂಗ್, ಜೆನೆಟಿಕ್ಸ್ ಮತ್ತು ಜೀನೋಮಿಕ್ಸ್, ಸ್ಟಟಿಸ್ಟಿಕ್ಸ್ ಮತ್ತು ಡೇಟಾ ಅನಾಲಿಟಿಕ್ಸ್ ವಿಭಾಗದ 246 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮೌಲ್ಯಮಾಪನದ ಬಳಿಕ ವಿವಿಧ ಸಮಸ್ಯೆ ಹೇಳಿಕೆ ಮತ್ತು ವಿಷಯಗಳ ಆಧಾರದ ಮೇಲೆ ರಾಷ್ಟ್ರೀಯ ಮಟ್ಟದ ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್‌ಗೆ ಅಂತಿಮವಾಗಿ 45 ತಂಡಗಳ ನಾಮನಿರ್ದೇಶನ ಮಾಡಲಾಯಿತು. ಆಯ್ಕೆಯಾದ ತಂಡಗಳು ಸೆ.22 ಮತ್ತು 23ರಂದು ಹೈದರಾಬಾದನಲ್ಲಿ ಐಇಇಇ ಐಇಎಸ್ ಸೊಸೈಟಿ ಆಯೋಜಿಸಿರುವ ಇಂಡಸ್ಟ್ರೀ ಇನ್ನೋವೇಷನ್ ಕಾನ್‌ಕ್ಲೇವ್‌ನಲ್ಲಿ ಸಿಯುಕೆಯ ನಾವೀನ್ಯತಾ ಕೋಶದ ನೋಡಲ್ ಅಧಿಕಾರಿ ಡಾ.ರೋಹಿತ್ ಕುಮಾರ್ ಮಾರ್ಗದರ್ಶನದಲ್ಲಿ ಮುಂದಿನ ಹಂತದ ಸ್ಪರ್ಧೆಯಲ್ಲಿ ಭಾಗವಹಿಸಲಿವೆ.

**ತಂತ್ರಜ್ಞಾನ ಮತ್ತು ನಾವೀನ್ಯತೆ ಮೂಲಕ ಬಹು ಟ್ರಿಲಿಯನ್ ಡಾಲರ್ ದೇಶದ ಆರ್ಥಿಕತೆಯ ನಿರ್ಮಾಣಕ್ಕೆ ವಿದ್ಯಾರ್ಥಿಗಳು ತಮ್ಮದೇ ಆದ ಕೊಡುಗೆ ನೀಡಬೇಕು.**
**–ಪ್ರೊ.ಆರ್.ಆರ್.ಬಿರಾದಾರ್, ಕುಲಸಚಿವ, ಸಿಯುಕೆ ಕಲಬುರಗಿ.**



ದಸರಾ ಆನೆ ಧನಂಜಯ ಮರಳಿನ ಚೀಲಗಳನ್ನು ಹಿಡಿದು ಬುಧವಾರ ಮೈಸೂರಿನಲ್ಲಿ ಇತರ ಆನೆಗಳೊಂದಿಗೆ ಜಂಬೂಸವಾರಿ ಮಾರ್ಗದಲ್ಲಿ ತನ್ನ ನಿರ್ಣಾಯಕ ತೂಕ ತರಬೇತಿ ಪೂರ್ವತಾಲೀಮು ಪ್ರಾರಂಭಿಸಿದೆ. ಈ ತರಬೇತಿಯು ಮೈಸೂರು ದಸರಾ ಉತ್ಸವದ ಎರಡನೇ ಹಂತದ ಸಿದ್ಧತೆಯ ಪ್ರಮುಖ ಹಂತವಾಗಿದೆ.

# ಹೆಸರಿಲ್ಲದ ರಸ್ತೆ, ವೃತ್ತಗಳಿಗೆ ಶರಣರು ಸೂಫಿ ಸಂತರ ನಾಮಕರಣಕ್ಕೆ ಒತ್ತಾಯ



**ಬೀದರ್, ಸೆ.9:** ನಗರದ ರಸ್ತೆಗಳು ಹಾಗೂ ಪ್ರಮುಖ ವೃತ್ತಗಳಿಗೆ 12ನೇ ಶತಮಾನದ ಶರಣರು ಮತ್ತು ಸೂಫಿ ಸಂತರ ಹೆಸರುಗಳನ್ನು ನಾಮಕರಣ ಮಾಡಬೇಕು ಎಂದು ಆಗ್ರಹಿಸಿ, ಅಖಂಡ ಕರ್ನಾಟಕ ಹೂಗಾರ ಮಹಾಸಭಾ ಜಿಲ್ಲಾ ಘಟಕದ ವತಿಯಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಐತಿಹಾಸಿಕ ಹಾಗೂ ಸಾಂಸ್ಕೃತಿಕ ಪರಂಪರೆ ಹೊಂದಿರುವ ಬೀದರ್ ನೆಲದಲ್ಲಿ ಸಮಾನತೆ ಸಾರಿದ ಬಸವಾದಿ ಶರಣರು ಪ್ರೀತಿ, ಸೌಹಾರ್ದತೆಯ ಸಂದೇಶ ಸಾರಿದ ಸೂಫಿ ಸಂತರ ಹೆಜ್ಜೆಗುರುತುಗಳಿವೆ. ಇಂತಹ ಮಹಾನ್ ಚೇತನರ ಸ್ಮರಣೆಯನ್ನು ಮುಂದಿನ ಪೀಳಿಗೆಗೂ ಉಳಿಸುವ ಉದ್ದೇಶದಿಂದ ರಸ್ತೆ ಮತ್ತು ವೃತ್ತಗಳಿಗೆ ಅವರ ಹೆಸರು ನಾಮಕರಣ ಮಾಡಬೇಕು ಎಂದು ಮಹಾಸಭಾ ಒತ್ತಾಯಿಸಿದೆ. ನಗರದಲ್ಲಿ ಹೊಸದಾಗಿ ನಿರ್ಮಾಣವಾಗುತ್ತಿರುವ ಹಾಗೂ ಹೆಸರಿಲ್ಲದ ರಸ್ತೆ, ಬೀದಿ ಮತ್ತು ವೃತ್ತಗಳಿಗೆ ಶರಣರು ಹಾಗೂ ಸೂಫಿ ಸಂತರ ಹೆಸರುಗಳನ್ನು ಇಡಬೇಕು. ಈ ಸಂಬಂಧ ಅಧಿಕಾರಿ ಗಳಿಗೆ ಸೂಕ್ತ ನಿರ್ದೇಶನ ನೀಡಿ ಹೆಸರುಗಳ ಪಟ್ಟಿಯನ್ನು ಸಿದ್ಧಪಡಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

ಅಲ್ಲದೆ, ಸಾರ್ವಜನಿಕರು ಹಾಗೂ ವಿವಿಧ ಸಂಘ–ಸಂಸ್ಥೆಗಳ ಅಭಿಪ್ರಾಯ ಪಡೆದು ನಾಮಕರಣ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಿ ಆದೇಶ ಹೊರಡಿಸಬೇಕು ಎಂದು ಮನವಿ ಮಾಡಲಾಗಿದೆ. ಈ ಕ್ರಮದಿಂದ ಗಡಿ ಜಿಲ್ಲೆ ಬೀದರ್‌ನ ಬಹುತ್ವ, ಶರಣ–ಸೂಫಿ ಪರಂಪರೆ ಹಾಗೂ ಸೌಹಾರ್ದತೆಯ ಸಂದೇಶ ಮತ್ತಷ್ಟು ಗಟ್ಟಿಯಾಗಲಿದೆ ಎಂದು ನಿಯೋಗ ತಿಳಿಸಿದೆ.

# 371(ಜೆ) ಇತಿಹಾಸ ಸಮಗ್ರ ಮಾಹಿತಿ ಅಗತ್ಯ: ಡಾ.ಲಕ್ಷ್ಮಣ ದಸ್ತಿ



**ಕಲಬುರಗಿ, ಸೆ. 9:** ಕಲ್ಯಾಣ ಕರ್ನಾಟಕ ಪ್ರದೇಶ ಶರಣ, ಸೂಫಿ ಮತ್ತು ದಾಸ ಸಾಹಿತ್ಯ ಸೇರಿ ವಿವಿಧ ಕ್ಷೇತ್ರಗಳಿಗೆ ಅಪಾರ ಕೊಡುಗೆ ನೀಡಿದೆ.

371(ಜೆ) ಅವಲೋಕಿಸುವಾಗ ಈ ಭಾಗದ ಇತಿಹಾಸವನ್ನು ಕೂಡ ಸಮಗ್ರವಾಗಿ ಅರ್ಥ ಮಾಡಿಕೊಳ್ಳುವ ಅಗತ್ಯವಿದೆ ಎಂದು ಕಲ್ಯಾಣ ಕರ್ನಾಟಕ ಹೋರಾಟ ಸಮಿತಿ ಸಂಸ್ಥಾಪಕ ಅಧ್ಯ ಡಾ.ಲಕ್ಷ್ಮಣ ದಸ್ತಿ ಹೇಳಿದರು.

ನಗರದ ಸರ್ಕಾರಿ ಮಹಾ ವಿದ್ಯಾಲಯ (ಸ್ವಾಯತ್ತ)ದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಹೋರಾಟ ಸಮಿತಿ ಹಾಗೂ ಪ್ರಾ ಕಾನೂನು ಸಲಹಾ ಸಮಿತಿ ಸಹಯೋಗದಡಿ ಆಯೋಜಿಸಿದ್ದ 371(ಜೆ) ದಶಮಾನದ ಅವಲೋಕನ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, 1998ರಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲ್ ಪ್ರತಿಮೆ ಲೋಕಾರ್ಪಣೆ ಕಾರ್ಯಕ್ರಮ ಸಂದರ್ಭದಲ್ಲಿ ಅಂದಿನ ಕೇಂದ್ರ ಸಚಿವ ಲಾಲ್‌ಕೃಷ್ಣ ಅಡ್ವಾಣಿ ಬಳಿ 371(ಜೆ) ವಿಶೇಷ ಸ್ಥಾನಮಾನದ ಬೇಡಿಕೆ ಮುಂದಿಟ್ಟಿದ್ದೆವು.

ಅಂದಿನ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದರು. ಆದರೆ ವಿಶೇಷ ಸ್ಥಾನಮಾನ ನೀಡಲು ಕೇಂದ್ರದಿಂದ ಒಪ್ಪಿಗೆ ದೊರೆಯಲಿಲ್ಲ ಎಂದು ವಿಷಾದಿಸಿದರು. ಚಿಂತಕ ಡಾ. ರಜಾಕ್ ಉಸ್ತಾದ್ ಮಾತನಾಡಿ, ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲಿ ಎಚ್.ಕೆ.ಪಾಟೀಲ್ ನೇತೃತ್ವದಲ್ಲಿ 371(ಜೆ) ನಿಯಮಾವಳಿ ರೂಪಿಸಲು ಸಮಿತಿ ರಚಿಸಲಾಗಿತ್ತು. ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿ, ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ ಮತ್ತು ಕಕ ಅಭಿವೃದ್ಧಿ ಸೇರಿ ಹಲವು ಪ್ರಮುಖ ಅಂಶಗಳನ್ನು ನಿಯಮಾವಳಿ ಒಳಗೊಂಡಿತ್ತು. ಕಲ್ಯಾಣ ಕರ್ನಾಟಕದಲ್ಲಿ ಶೇ.70 ಸೀಟು ಸ್ಥಳಿಯರಿಗೆ, ಉಳಿದದ್ದು ಮುಕ್ತ ವರ್ಗಕ್ಕೆ ಸೇರಿವೆ. ಇದರ ಸಂಪೂರ್ಣ ಪ್ರಯೋಜನ ಈ ಭಾಗದ ವಿದ್ಯಾರ್ಥಿಗಳು ಪಡೆದು ಕೊಳ್ಳಬೇಕು ಎಂದು ಸಲಹೆ ನೀಡಿದರು. ಹೋರಾಟಗಾರ್ತಿ ಕೆ.ನೀಲಾ ಪ್ರಾಸ್ತಾವಿಕ ಮಾತನಾಡಿ, ಕಲ್ಯಾಣ ಕರ್ನಾಟಕದ ಸಾವಿರಾರು ಶಾಲೆಗಳು ಶಿಥಿಲಾವಸ್ಥೆ ತಲುಪಿವೆ. ಹೆಣ್ಣು ಮಕ್ಕಳಿಗೆ ಶೌಚಗೃಹಗಳ ಕೊರತೆ ಇದೆ. ಅಪೌಷ್ಟಿಕತೆ ಹೆಚ್ಚುತ್ತಿದ್ದು, ಮಕ್ಕಳಿಗೆ ಅಗತ್ಯ ಪ್ರಮಾಣದ ಪೌಷ್ಟಿಕ ಆಹಾರ ದೊರೆಯುತ್ತಿಲ್ಲ. ಬರಗಾಲ ದಂತಹ ಗಂಭೀರ ಸಮಸ್ಯೆಗಳ ಸಂದರ್ಭದಲ್ಲೂ ಕೇಂದ್ರದ ಮಾನದಂಡ ಗಳು ಪರಿಹಾರಕ್ಕೆ ತೊಡಕಾಗುತ್ತಿವೆ ಎಂದು ಕಿಡಿಕಾರಿದರು.

**ಕಲಬುರಗಿಯನ್ನು ರಾಜ್ಯದ ಉಪ ರಾಜಧಾನಿಯಾಗಿ ಘೋಷಿಸಬೇಕು. ಕಲ್ಯಾಣ ಕರ್ನಾಟಕದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಸರ್ಕಾರ ಹಾಗೂ ಜನಪ್ರತಿನಿಧಿಗಳು ಹೆಚ್ಚಿನ ಆದ್ಯತೆ ನೀಡಬೇಕು.**
**–ಡಾ.ಲಕ್ಷ್ಮಣ ದಸ್ತಿ, ಸಂಸ್ಥಾಪಕ ಅಧ್ಯಕ್ಷ, ಕ.ಕ. ಹೋರಾಟ ಸಮಿತಿ.**

# ಪತ್ರಿಕಾ ವಿತರಕರ ಅಸಾಮಾನ್ಯ ಸೇವೆಗೆ ವಿಶೇಷ ಗೌರವ



**ರಾಯಚೂರು, ಸೆ. 9:** ಮಳೆ, ಚಳಿ, ಗಾಳಿ, ಬಿಸಿಲು ಏನೇ ಬಂದರೂ ತಮ್ಮ ಕಾಯಕವನ್ನು ನಿಲ್ಲಿಸದೆ, 'ಏನಾಗಲಿ ಮುಂದೆ ಸಾಗು ನೀ' ಎಂಬಂತೆ ಪ್ರತಿನಿತ್ಯ ನಸುಕಿನಲ್ಲೇ ಎದ್ದು ಓದುಗರ ಮನೆ ಬಾಗಿಲಿಗೆ ಪತ್ರಿಕೆ ತಲುಪಿಸುವ ಪತ್ರಿಕಾ ವಿತರಕರ ಸೇವೆ ನಿಜಕ್ಕೂ ಶ್ಲಾಘನೀಯ. ಜಗತ್ತು ಇನ್ನೂ ನಿದ್ರೆಯಲ್ಲಿರುವಾಗಲೇ ಎದ್ದು, ಸಾವಿರಾರು ಮನೆಗಳಿಗೆ ದಿನದ ಸುದ್ದಿಯನ್ನು ತಲುಪಿಸುವ ಈ ಕಾಯಕ ಜೀವಿಗಳು ಸಮಾಜದ ಸುದ್ದಿಯ ಸೇತುವೆಗಳಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಮೊಬೈಲ್ ಫೋನ್, ಸಾಮಾಜಿಕ ಜಾಲತಾಣಗಳು ಹಾಗೂ ಟಿ.ವಿ. ಮಾಧ್ಯಮಗಳ ಹಾವಳಿ ಹೆಚ್ಚಾಗಿರುವ ಡಿಜಿಟಲ್ ಯುಗದಲ್ಲಿಯೂ ಮುದ್ರಿತ ಪತ್ರಿಕೆ ತನ್ನದೇ ಆದ ಮಹತ್ವವನ್ನು ಉಳಿಸಿಕೊಂಡಿದೆ. ದೇಶ–ವಿದೇಶದ ಬೆಳವಣಿಗೆಗಳು, ರಾಜ್ಯ ಹಾಗೂ ಸ್ಥಳೀಯ ಸುದ್ದಿಗಳು, ಕೃಷಿ, ಶಿಕ್ಷಣ, ಉದ್ಯೋಗ, ಕ್ರೀಡೆ, ರಾಜಕೀಯ ಸೇರಿದಂತೆ ವಿವಿಧ ಕ್ಷೇತ್ರಗಳ ಮಾಹಿತಿಯನ್ನು ಓದುಗರ ಮನೆ ಬಾಗಿಲಿಗೆ ತಲುಪಿಸುವ ಜವಾಬ್ದಾರಿಯನ್ನು ಪತ್ರಿಕಾ ವಿತರಕರು ನಿತ್ಯವೂ ನಿರ್ವಹಿಸುತ್ತಿದ್ದಾರೆ.

ಇಂದು ಪತ್ರಿಕಾ ವಿತರಕರ ದಿನ ಆಚರಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರತಿದಿನ ಸುದ್ದಿಯನ್ನು ಮನೆ–ಮನಗಳಿಗೆ ತಲುಪಿಸುವ ಈ ಕಾಯಕ ಜೀವಿಗಳನ್ನು ಸ್ಮರಿಸಿ, ಅವರ ಸೇವೆಗೆ ಗೌರವ ಸಲ್ಲಿಸಲಾಗುತ್ತದೆ. ಪತ್ರಿಕೆ ಕೈಗೆ ಸಿಗುವ ಕ್ಷಣದಲ್ಲಿ ಅದರ ಹಿಂದೆ ಅಡಗಿರುವ ವಿತರಕರ ಪರಿಶ್ರಮವನ್ನು ಬಹುತೇಕರು ಗಮನಿಸುವುದಿಲ್ಲ. ಆದರೆ ಆ ಪತ್ರಿಕೆ ಸಮಯಕ್ಕೆ ಸರಿಯಾಗಿ ಮನೆ ಬಾಗಿಲಿಗೆ ತಲುಪಬೇಕಾದರೆ ಅದರ ಹಿಂದೆ ಹಲವು ಗಂಟೆಗಳ ಶ್ರಮ ಅಡಗಿರುತ್ತದೆ.

ಪತ್ರಿಕಾ ವಿತರಕರ ದಿನಚರಿ ಸಾಮಾನ್ಯ ಜನರಿಗಿಂತ ವಿಭಿನ್ನ.

**25 ವರ್ಷಗಳಿಂದ ಪತ್ರಿಕೆ ವಿತರಕ. ಸರ್ಕಾರ ನಮ್ಮ ಸೇವೆ ಪರಿಗಣಿಸಿ ಜೀವವಿಮೆ, ಬಸ್‌ಪಾಸ್ ಹಾಗೂ ನಿವೇಶನ ಸೌಲಭ್ಯ ಕಲ್ಪಿಸಬೇಕು. ಸರ್ಕಾರ ನಮ್ಮ ಸೇವೆ ಗುರುತಿಸಿ ಮೂಲಸೌಕರ್ಯ ಮತ್ತಿತರ ಸೌಲಭ್ಯ ಒದಗಿಸಬೇಕು.**
**–ಮುನ್ನಿರೆಡ್ಡಿ ರಾಯಚೂರು, ಕುಮಾರ ಕಂಠಿ ಸಿಂಧನೂರು.**

ಬಹುತೇಕರು ಗಾಢ ನಿದ್ರೆಯಲ್ಲಿರುವ ಸಮಯದಲ್ಲಿ, ಅಂದರೆ ನಸುಕಿನ 14 ಗಂಟೆ ವೇಳೆಗೆ ವಿತರಕರು ಎದ್ದು ತಮ್ಮ ಸೈಕಲ್, ದ್ವಿಚಕ್ರ ವಾಹನ, ಪತ್ರಿಕೆಗಳ ಬ್ಯಾಗ್ ಸೇರಿದಂತೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡು ಮನೆಯಿಂದ ಹೊರಡುತ್ತಾರೆ. ಕೆಲವೊಮ್ಮೆ ಕತ್ತಲೆಯಲ್ಲಿಯೇ ರಸ್ತೆ, ಚರಂಡಿ, ಹೊಂಡ–ಗುಂಡಿಗಳನ್ನು ದಾಟಿಕೊಂಡು ಸಾಗಬೇಕಾಗುತ್ತದೆ. ಮಳೆಗಾಲದಲ್ಲಿ ರಸ್ತೆಗಳು ಕೆಸರುಮಯವಾಗಿದ್ದರೂ, ಚಳಿಗಾಲದಲ್ಲಿ ಮೈ ಕೊರೆಯುವ ಚಳಿಯಿದ್ದರೂ ಅವರ ಕಾಯಕಕ್ಕೆ ಮಾತ್ರ ವಿರಾಮ ಇರುವುದಿಲ್ಲ.

ಪತ್ರಿಕಾ ವಿತರಣೆ ಹಲವು ಯುವಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಬದುಕು ಕಟ್ಟಿಕೊಳ್ಳಲು ನೆರವಾಗಿರುವ ಅರೆಕಾಲಿಕ ಉದ್ಯೋಗವಾಗಿದೆ. ಮತ್ತೊಂದೆಡೆ, ಹಲವು ಹಿರಿಯರು ದಶಕಗಳಿಂದಲೂ ಇದೇ ವೃತ್ತಿಯಲ್ಲಿ ಮುಂದುವರಿದಿದ್ದಾರೆ.

ಈ ವೃತ್ತಿ ಅವರಿಗೆ ಕೇವಲ ಆದಾಯದ ಮೂಲವಷ್ಟೇ ಅಲ್ಲದೆ, ಶಿಸ್ತು, ಸಮಯಪಾಲನೆ ಹಾಗೂ ದೈಹಿಕ ಚಟುವಟಿಕೆಯನ್ನು ಬೆಳೆಸುವ ಅವಕಾಶವನ್ನೂ ನೀಡಿದೆ. ನಿರಂತರ ಪರಿಶ್ರಮದ ನಡುವೆಯೂ ಅವರಿಗೆ ಸಿಗುವ ಆದಾಯ ಸೀಮಿತವಾಗಿದ್ದು, ಜೀವನ ನಿರ್ವಹಣೆ ಸವಾಲಾಗಿ ಪರಿಣಮಿಸುತ್ತಿದೆ.

**29 ವರ್ಷಗಳಿಂದ ಬೆಳಿಗ್ಗೆ ಪ್ರತಿಕೆಗಳನ್ನು ವಿತರಿಸುವ ಕೆಲಸದಲ್ಲಿ ನಿರತನಾಗಿದ್ದೇನೆ. ನಮ್ಮ ಮಕ್ಕಳಿಗೆ ರಾಜ್ಯ ಸರ್ಕಾರ ಉಚಿತ ಶಿಕ್ಷಣ ಆರೋಗ್ಯ ಸೌಲಭ್ಯ ಕಲ್ಪಿಸಬೇಕು. ಎಸ್. ನಾಗರಾಜ ಜಾಲಿಹಾಳ31 ವರ್ಷಗಳಿಂದ ಪತ್ರಿಕೆ ವಿತರಿಸುತ್ತಿದ್ದೇನೆ. ಸರ್ಕಾರ ಪತ್ರಿಕೆ ವಿತರಕರಿಗೆ ಆರೋಗ್ಯ ವಿಮೆ ಹಾಗೂ ಮೃತರ ಕುಟುಂಬಕ್ಕೆ ಪರಿಹಾರ ನೀಡಬೇಕು.**
**–ಬಸವನಗೌಡ ಮೇಟಿ ಮಾನ್ವಿ**

ಸಮಾಜದ ಆಗುಹೋಗುಗಳನ್ನು ಜನರಿಗೆ ತಲುಪಿಸುವ ಪತ್ರಿಕೆಯ ಕೊನೆಯ ಕೊಂಡಿಯಾಗಿರುವ ಇವರ ಪರಿಶ್ರಮಕ್ಕೆ ಸೂಕ್ತ ಗೌರವ ಮತ್ತು ಸಾಮಾಜಿಕ ಭದ್ರತೆ ದೊರೆಯಬೇಕಿದೆ.

# ತುಂಗಭದ್ರಾ ಕಾಲುವೆ ಕೊನೆ ಭಾಗಕ್ಕೆ ನೀರು ತಲುಪಿಸಲು ರೈತರ ಆಗ್ರಹ



**ರಾಯಚೂರು, ಸೆ. 9:** ತುಂಗಭದ್ರಾ ಎಡದಂಡೆ ಮುಖ್ಯ ನಾಲೆ ವ್ಯಾಪ್ತಿಯ 54ನೇ ವಿತರಣಾ ಕಾಲುವೆ ಕೆಳಭಾಗಕ್ಕೆ ನೀರು ತಲುಪುತ್ತಿಲ್ಲ. ಕೊನೆ ಭಾಗಕ್ಕೆ ನೀರು ತಲುಪಿಸಲು ಆಗ್ರಹಿಸಿ ರೈತರು ಮಾಜಿ ಸಚಿವ ವೆಂಕಟರಾವ್ ನಾಡಗೌಡ ಅವರ ನೇತೃತ್ವದಲ್ಲಿ ರಾಯಚೂರು–ಗಂಗಾವತಿ ಮುಖ್ಯ ರಸ್ತೆಯ ಜವಳಗೇರ ಬಳಿ ರಸ್ತೆ ಸಂಚಾರ ತಡೆದು ಪ್ರತಿಭಟನೆ ನಡೆಸಿದರು.

ಬೆಳಿಗ್ಗೆ 9.30ರಿಂದ ಆರಂಭವಾದ ರಸ್ತೆ ತಡೆ ಚಳವಳಿ ಮಧ್ಯಾಹ್ನ 12ರವರೆಗೆ ನಡೆಯಿತು. ನೂರಾರು ಸಂಖ್ಯೆಯಲ್ಲಿ ಸೇರಿದ್ದ ರೈತರು, ರಾಜ್ಯ ಸರ್ಕಾರ ಮತ್ತು ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ರೈತರ ಪ್ರತಿಭಟನೆಯಿಂದ ಸಾರ್ವಜನಿಕ ಸಂಚಾರಕ್ಕೆ ತೀವ್ರ ವ್ಯತ್ಯಯ ಉಂಟಾಯಿತು.

**ರಾಜೀನಾಮೆಗೆ ಆಗ್ರಹ:** ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ ರೈತರ ಹಿತ ಕಾಯುವ ಜವಾಬ್ದಾರಿ ಹೊತ್ತಿರುವ ಐಸಿಸಿ ಅಧ್ಯಕ್ಷ ಸಚಿವ ಶಿವರಾಜ ತಂಗಡಗಿ ಅವರು, ತಮ್ಮ ಮನೆಗೆ ಬಂದ ರೈತರನ್ನು 'ಶಾಸಕರ ಹತ್ತಿರ ಹೋಗಿ ನನ್ನ ಹತ್ತಿರ ಬರಬೇಡಿ' ಎಂದು ಹೇಳಿ ವಾಪಸ್ ಕಳುಹಿಸಿರುವುದು ಅವರ ಘನತೆಗೆ ಶೋಭೆ ತರುವುದಿಲ್ಲ. ಕರ್ತವ್ಯ ನಿರ್ವಹಿಸುವ ಇಚ್ಛೆಯಿದ್ದರೆ, ಜವಾಬ್ದಾರಿ ಸ್ಥಾನದಲ್ಲಿ ಇರಬೇಕು. ಇಲ್ಲದಿದ್ದರೆ ರಾಜೀನಾಮೆ ಕೊಡಬೇಕು ಎಂದು ಮಾಜಿ ಸಚಿವ ವೆಂಕಟರಾವ ನಾಡಗೌಡ ಆಗ್ರಹಿಸಿದರು.

54ನೇ ವಿತರಣಾ ಕಾಲುವೆ ಸುಮಾರು 89 ಸಾವಿರ ಎಕರೆ ಜಮೀನಿಗೆ ನೀರುಣಿಸುವ ಬಹುದೊಡ್ಡ ಕಾಲುವೆಯಾಗಿದೆ. ಮಸ್ಕಿ ವಿಭಾಗದಲ್ಲಿ 20 ಸಾವಿರ ಎಕರೆ, ಜವಳಗೇರಾ ವಿಭಾಗದಲ್ಲಿ 69 ಸಾವಿರ ಎಕರೆ ಪ್ರದೇಶ ಒಳಗೊಂಡಿದೆ. ಈ ಕಾಲುವೆಗೆ 389 ಕ್ಯುಸೆಕ್ ನೀರು ಬಿಡುಗಡೆ ಮಾಡುತ್ತಿದ್ದು, ಮಸ್ಕಿ ವಿಭಾಗಕ್ಕೆ 200 ಕ್ಯುಸೆಕ್, ಕೆಳಭಾಗಕ್ಕೆ 189 ಕ್ಯುಸೆಕ್ ನೀರು ಪೂರೈಕೆ ಮಾಡಲಾಗುತ್ತಿದೆ. ಇದರಿಂದ ಕೆಳಭಾಗದ ಜಮೀನುಗಳಿಗೆ ಸಮರ್ಪಕವಾಗಿ ನೀರು ತಲುಪುತ್ತಿಲ್ಲ. ರೈತರು ತೊಂದರೆ ಅನುಭವಿಸುವಂತಾಗಿದೆ' ಎಂದು ವೆಂಕಟರಾವ ನಾಡಗೌಡ ಅಸಮಾಧಾನ ವ್ಯಕ್ತಪಡಿಸಿದರು.

ಮೇಲ್ಭಾಗದಲ್ಲಿ ಅನಧಿಕೃತವಾಗಿ ನೀರು ಪಡೆಯುತ್ತಿರುವುದನ್ನು ನಿಯಂತ್ರಿಸುವುದರಲ್ಲಿ ನೀರಾವರಿ ಅಧಿಕಾರಿಗಳು ವಿಫಲವಾಗಿದ್ದಾರೆ' ಎಂದು ಆರೋಪಿಸಿದರು.

ಅಗಸ್ಟ್ 11ಕ್ಕೆ ತುಂಗಭದ್ರಾ ಎಡದಂಡೆ ನಾಲೆಗೆ ನೀರು ಬಿಡಲಾಗಿದೆ. ಇಲ್ಲಿಯವರೆಗೂ ಜವಳಗೇರಾದಿಂದ ಕೆಳಗೆ ಇರುವ ಜಮೀನುಗಳಿಗೆ ನೀರು ತಲುಪಿಲ್ಲ. ಇದರಿಂದ ತೀವ್ರ ತೊಂದರೆಯಾಗಿದೆ. ಅನಿವಾರ್ಯವಾಗಿ ರಸ್ತೆ ತಡೆ ಮಾಡುತ್ತಿರುವುದಾಗಿ ರೈತರು ಸಾರ್ವಜನಿಕರಿಗೆ ತಿಳಿಸಿದರು.

**54ನೇ ವಿತರಣಾ ಕಾಲುವೆಯ ಮೇಲ್ಭಾಗದಲ್ಲಿ ನಿಗದಿತ ವ್ಯಾಸಕ್ಕಿಂತ ಅಧಿಕ ವ್ಯಾಸದ ಪೈಪುಗಳನ್ನು ಹಾಕಿಕೊಂಡು ನೀರು ಪಡೆಯುತ್ತಿದ್ದಾರೆ. ಇದರಿಂದ ಕೆಳಭಾಗದ ರೈತರಿಗೆ ಅನ್ಯಾಯವಾಗುತ್ತಿದೆ. –ವೆಂಕಟರಾವ ನಾಡಗೌಡ, ಮಾಜಿ ಸಚಿವ**

## ಇಟಲಿಯಲ್ಲಿ ಬಿದ್ರಿಕಲೆ ಅರಳಿಸಿದ ಬೀದರ್‌ನ ಮೊಹಮ್ಮದ್ ಅಬ್ದುಲ್ ಬಾರಿ ಕಮಾಲ್



**ಬೀದರ್, ಸೆ. 9:** ಕರ್ನಾಟಕದ ಅಪರೂಪದ ಬಿದ್ರಿಕಲೆಗೆ ಮತ್ತೆ ಜಾಗತಿಕ ಮನ್ನಣೆ ದೊರಕಿದೆ. ಇಲ್ಲಿನ ಬಿದ್ರಿ ಕಲಾವಿದ ಮೊಹಮ್ಮದ್ ಅಬ್ದುಲ್ ಬಾರಿ ಅವರಿಗೆ ಇಟಲಿಯ ವೇನಿಸ್‌ನಲ್ಲಿ ನಡೆಯುತ್ತಿರುವ ಹೋಮೋ ಫ್ಯಾಬರ್ 2026 ಕಲಕುಶಲ ಪ್ರದರ್ಶನಲ್ಲಿ ಪಾಲ್ಗೊಳ್ಳುವ ಹಾಗೂ ಅಲ್ಲಿ ಬಿದ್ರಿಕಲೆ ಕುರಿತ ಪ್ರದರ್ಶನಕ್ಕೆ ಅವಕಾಶ ಸಿಕ್ಕಿದೆ.

ಜಗತ್ತಿನಾದ್ಯಂತ ನಾನಾ ಕಡೆಯಿಂದ ಆಗಮಿಸಿರುವ ಕಲಾಸಕ್ತರು ಬಿದ್ರಿ ಕಲೆಗೆ ಮಾರು ಹೋಗುತ್ತಿದ್ದಾರೆ. ಈ ಮೂಲಕ ಬಿದ್ರಿ ಕಲೆಗೆ ಜಾಗತಿಕವಾಗಿ ಮತ್ತಷ್ಟು ಬೇಡಿಕೆ ಹೆಚ್ಚುವ ಆಶಾಭಾವ ಮೂಡಿದೆ.ಇದರಲ್ಲಿ ಬೀದರ್‌ನ ಬಿದ್ರಿ ಕಲಾವಿದ ಮೊಹಮ್ಮದ್ ಅಬ್ದುಲ್ ಬಾರಿ ಭಾರತವನ್ನು ಪ್ರತಿನಿಧಿಸಿದ್ದಾರೆ. ಜಗತ್ತಿನ 70ಕ್ಕೂ ಅಧಿಕ ದೇಶಗಳನ್ನು ಪ್ರತಿನಿಧಿಸುವ 500ಕ್ಕೂ ಅಧಿಕ ಕುಶಲಕರ್ಮಿಗಳು ಹಾಗೂ ಅವರು ಸಿದ್ಧಪಡಿಸಿದ 700ಕ್ಕೂ ಹೆಚ್ಚು ಕರಕುಶಲ ವಸ್ತುಗಳನ್ನು ಒಂದೇ ವೇದಿಕೆಯಲ್ಲಿ ಇಲ್ಲಿ ವೀಕ್ಷಿಸಿ, ಮಾಹಿತಿ ಪಡೆಯಬಹುದು. ಬೀದರ್‌ನ ವಿಶಿಷ್ಟವಾದ ಬಿದ್ರಿ ಕಲಾಕೃತಿಗಳು ಜನರ ಮನಸೂರೆಗೊಳ್ಳುತ್ತಿದೆ ಎಂದು ವೇನಿಸ್‌ನಿಂದಲೇ ಕಲಾವಿದ ಅಬ್ದುಲ್ ಬಾರಿ ಮಾಹಿತಿ ಹಂಚಿಕೊಂಡರು.

ಭಾರತದಿಂದ ಮೂರಾಲ್ಕು ಜನ ಕಲಾವಿದರ ನೋಂದಣಿಯಾಗಿತ್ತು. ನಾಗಾಲ್ಯಾಂಡ್‌ನ ಚೈನಾ ಬಂಬೂ ಹ್ಯಾಂಡಿಕ್ರಾಫ್ಟ್ ಕಲಾವಿದ, ದಿಲ್ಲಿಯ ಲೆದರ್ ಕಲಾವಿದೆ ಹಾಗೂ ಇನ್ನೋರ್ವ ಉತ್ತರ ಭಾರತದ ಕಲಾವಿದರು ನೋಂದಣಿ ಮಾಡಿಕೊಂಡರೂ, ಕೊನೆ ಕ್ಷಣದ ವೀಸಾ ಸಮಸ್ಯೆಯಿಂದಾಗಿ ಅವರು ಇಟಲಿಗೆ ಬರಲಾಗಿಲ್ಲ, ಹೀಗಾಗಿ, ದೇಶವನ್ನು ಪ್ರತಿನಿಧಿಸಲು ನನಗೆ ಅವಕಾಶ ದೊರಕಿದೆ ಎಂದರು ಐದನೇ ತಲೆಮಾರಿನ ಬಿದ್ರಿಕಲಾವಿದ.

ಮೊಹಮ್ಮದ್ ಅಬ್ದುಲ್ ಬಾರಿ ಅವರ ತಂದೆ, ತಾತ ಹಾಗೂ ಅವರ ಹಿರಿಯರೂ ಸಹ ಬಿದ್ರಿ ಕಲಾಕೃತಿಗಳನ್ನು ತಯಾರಿಸುತ್ತಿದ್ದರು. ಐದು ತಲೆ ಮಾರುಗಳಿಂದ ಇವರ ಮನೆತನ ದವರು ಬಿದ್ರಿಕಲೆಯನ್ನೇ ನೆಚ್ಚಿ ಕೊಂಡಿದ್ದಾರೆ. ನಮ್ಮ ತಂದೆಯವರೂ ಖ್ಯಾತ ಬಿದ್ರಿ ಕರಕುಶಲ ಕಲಾವಿದ ರಾಗಿದ್ದರು, ನಾನೂ ಅದೇ ಕೆಲಸವನ್ನು ಮುಂದುವರಿಸಿ ಕೊಂಡು ಬರುತ್ತಿದ್ದೇನೆ. ನನ್ನ ತಂದೆ ದಿ. ಮೊಹಮ್ಮದ್ ಅಬ್ದುಲ್ ರೌಫ್ ಅವರು ಜರ್ಮನಿ, ಅಮೇರಿಕ, ದುಬೈ, ಚೀನಾ ಸೇರಿ ಹಲವು ದೇಶಗಳಲ್ಲಿ ನಡೆದಿದ್ದ ಪ್ರದರ್ಶನಗಳಲ್ಲಿ ಭಾಗವಹಿಸಿ ಕಲೆಯನ್ನು ವಿಸ್ತಾರಗೊಳಿಸುವ ಕೆಲಸ ಮಾಡಿದ್ದರು. ರಾಜ್ಯ, ರಾಷ್ಟ್ರಮಟ್ಟದ ಅನೇಕ ಪ್ರಶಸ್ತಿಗಳು ಲಭಿಸಿವೆ. ಇದೀಗ ನನಗೂ ಜಗತ್ತಿನ ನಾನಾ ದೇಶಗಳ ಕರಕುಶಲ ಪ್ರದರ್ಶನದ ವೇದಿಕೆಯಲ್ಲಿ ಬಿದ್ರಿ ಕುರಿತು ಪ್ರದರ್ಶನ ನೀಡಲು ಅವಕಾಶ ದೊರಕಿರುವುದು ಹೆಮ್ಮೆಯ ಹಾಗೂ ಸಾರ್ಥಕ ಕ್ಷಣವಾಗಿದೆ ಎಂದರು.

## ಪರಿಸರಸ್ನೇಹಿ ಮಣ್ಣಿನ ಗಣೇಶನನ್ನೇ ಬಳಸಿ: ಜಿಪಂ ಸಿಇಓ ಮಹಮ್ಮದ್ ಹ್ಯಾರಿಸ್ ಸುಮೇರ್ ಕರೆ

**ಬಳ್ಳಾರಿ,ಸೆ.09.**ಗಣೇಶ ಚತುರ್ಥಿ ಹಬ್ಬದ ಸಂದರ್ಭದಲ್ಲಿ ಪರಿಸರಕ್ಕೆ ಹಾನಿಯಾಗದಂತೆ ಕೇವಲ ಮಣ್ಣಿನ ಗಣಪತಿ ಮೂರ್ತಿಗಳನ್ನು ಮಾತ್ರ ಬಳಸಬೇಕು ಮತ್ತು ಮನೆಗಳಲ್ಲೇ ವಿಸರ್ಜನೆ ಮಾಡಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರಿಸ್ ಸುಮೇರ್ ಅವರು ಹೇಳಿದರು.

ಅರಣ್ಯ ಇಲಾಖೆ ವತಿಯಿಂದ ನಗರದ ಬೆಳಗಲ್ ಕ್ರಾಸ್‌ನ ಅರಣ್ಯ ಇಲಾಖೆಯ ನರ್ಸರಿ ಪ್ರಕೃತಿ ಭವನದಲ್ಲಿ ಬುಧವಾರ ಏರ್ಪಡಿಸಿದ್ದ ಪರಿಸರ ಸ್ನೇಹಿ ವೃಕ್ಷ ಗಣೇಶ ಮೂರ್ತಿ ಮಣ್ಣಿನಿಂದ ತಯಾರಿಸುವ ಕಾರ್ಯಾಗಾರ ವನ್ನು ಮಣ್ಣಿನ ಗಣೇಶನ ಮೂರ್ತಿ ಮಾಡುವುದರ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿಒಪಿ) ಹಾಗೂ ಹಾನಿಕಾರಕ ರಾಸಾಯನಿಕ ಬಣ್ಣಗಳಿಂದ ತಯಾರಿಸಿದ ಮೂರ್ತಿಗಳನ್ನು ಸಂಪೂರ್ಣವಾಗಿ ತ್ಯಜಿಸಿ, ಪರಿಸರ ಸ್ನೇಹಿ ಮಣ್ಣಿನ ಮೂರ್ತಿಗಳನ್ನೇ ಪೂಜಿಸಬೇಕು ಎಂದು ತಿಳಿಸಿದರು.

ಮೂರ್ತಿಗಳನ್ನು ಮನೆಗಳಲ್ಲಿಯೇ ವಿಸರ್ಜನೆ ಮಾಡುವುದರಿಂದ ನೈಸರ್ಗಿಕ ಜಲಮೂಲಗಳು ಕಲುಷಿತಗೊಳ್ಳುವುದನ್ನು ತಪ್ಪಿಸಬಹುದು. ಪಿಒಪಿ ಮತ್ತು ಕೃತಕ ರಾಸಾಯನಿಕಗಳನ್ನು ಕೆರೆ, ನದಿಗಳಲ್ಲಿ ವಿಸರ್ಜಿಸುವುದರಿಂದ ನೀರಿನಲ್ಲಿ ಅಪಾಯಕಾರಿ ರಾಸಾಯನಿಕ ಮಾಲಿನ್ಯಕಾರಕಗಳು ಸೇರುತ್ತವೆ. ಇದು ನೀರಿನ ಪಿಎಚ್ ಮಟ್ಟ ಹಾಗೂ ಜೈವಿಕ–ರಾಸಾಯನಿಕ ಆಕ್ಸಿಜನ್ ಬೇಡಿಕೆ ಮೇಲೆ ಗಂಭೀರ ಪರಿಣಾಮ ಬೀರಿ ಮೀನುಗಳು ಸೇರಿದಂತೆ ಜಲಚರಗಳಿಗೆ ಮಾರಕವಾಗುತ್ತದೆ ಎಂದು ಹೇಳಿದರು.

ಯುವಕರು ತಮ್ಮ ಕುಟುಂಬ, ಸ್ನೇಹಿತರು ಮತ್ತು ಬಂಧುಗಳಿಗೆ ಪರಿಸರ ಸ್ನೇಹಿ ಆಚರಣೆಯ ಮಹತ್ವ ತಿಳಿಸುವುದರ ಜೊತೆಗೆ ಸಾಮಾಜಿಕ ಜಾಲತಾಣಗಳ ಮೂಲಕ ಮಣ್ಣಿನ ಗಣಪತಿ ಬಳಕೆಯ ಬಗ್ಗೆ ವ್ಯಾಪಕ ಪ್ರಚಾರ ಕೈಗೊಳ್ಳಬೇಕು. ಪ್ರಕೃತಿಯನ್ನು ಮುಂದಿನ ಪೀಳಿಗೆಗೆ ಸಂರಕ್ಷಿಸಿ ಉಳಿಸುವುದು ಪ್ರತಿಯೊಬ್ಬರ ಹೊಣೆ. ಸಂಸ್ಕೃತಿಯನ್ನು ಆಚರಿಸುವಾಗ ಪರಿಸರಕ್ಕೆ ಹಾನಿಯಾಗದಂತೆ ನೋಡಿಕೊಳ್ಳುವುದೇ ನೈಜ ಆಚರಣೆ ಎಂದು ಕರೆ ನೀಡಿದರು.

ಬಳ್ಳಾರಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಬಸವರಾಜ ಕೆ.ಎನ್ ಅವರು ಮಾತನಾಡಿ, ಮಣ್ಣಿನ ಗಣಪತಿ ತಯಾರಿಕೆಯಲ್ಲಿ ನೈಸರ್ಗಿಕ ಮಣ್ಣಿನ ಜೊತೆಗೆ ವಿವಿಧ ಕಾಡು ಜಾತಿಯ ಗಿಡ–ಮರಗಳ ಬೀಜಗಳನ್ನು ಸೇರಿಸಲಾಗಿದೆ. ಗಣೇಶ ಹಬ್ಬದ ನಂತರ ಮೂರು ದಿನಗಳ ಕಾಲ ಪೂಜಿಸಿ, ಬಕೆಟ್‌ನಲ್ಲಿ ನೀರು ಹಾಕಿ ವಿಸರ್ಜನೆ ಮಾಡಿದಾಗ, ಆ ನೀರಿನಲ್ಲಿ ಕರಗಿದ ಮಣ್ಣು ಮತ್ತು ಬೀಜಗಳು ನೆಲಕ್ಕೆ ಸೇರುತ್ತವೆ. ಆ ಬೀಜಗಳು ಮೊಳಕೆಯೊಡೆದು ಗಿಡಗಳಾಗಿ ಬೆಳೆಯುತ್ತವೆ. ಹೀಗೆ ಬೆಳೆದ ಸಸಿಗಳನ್ನು ಪೋಷಿಸಿ ಮರಗಳನ್ನಾಗಿ ಬೆಳೆಸುವ ಮೂಲಕ ಪರಿಸರವನ್ನು ರಕ್ಷಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶ ವಾಗಿದೆ ಎಂದು ತಿಳಿಸಿದರು.



ಯಾವುದೇ ಬಣ್ಣವಿಲ್ಲದ ನೈಸರ್ಗಿಕ ಮಣ್ಣಿನ ಗಣಪತಿಯನ್ನೇ ಬಳಸಬೇಕು. ಬಣ್ಣದ ಲೇಪನ ಬಯಸುವವರು ಅರಿಶಿನ ಮತ್ತು ಕುಂಕುಮದಂತಹ ನೈಸರ್ಗಿಕ ವಸ್ತುಗಳನ್ನೇ ಬಳಸಬೇಕು. ಇದು ಕೇವಲ ಒಂದು ದಿನದ ಹೊರಾಂಗಣ ಚಟುವಟಿಕೆಯಾಗದೆ, ಮಕ್ಕಳು ತಮ್ಮ ಜೀವನಪರ್ಯಂತ ಪರಿಸರ ಕಾಳಜಿಯನ್ನು ಸಂಸ್ಕೃತಿಯ ಭಾಗವಾಗಿ ಅಳವಡಿಸಿಕೊಳ್ಳಬೇಕು ಎಂದು ಪ್ರೇರೇಪಿಸಿದರು.

ವಿದ್ಯಾರ್ಥಿಗಳು ಕಾರ್ಯಾಗಾರದಲ್ಲಿ ತಾವೇ ಸ್ವತಃ ತಯಾರಿಸಿದ ಮಣ್ಣಿನ ಗಣಪತಿಯನ್ನು ಮನೆಗೆ ಕೊಂಡೊಯ್ದು ಪ್ರತಿಷ್ಠಾಪಿಸಿ, ಪೂಜಿಸುವಂತೆ ಕರೆ ನೀಡಿದ ಅವರು, ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ನಮಗೆ ನಾವೇ ಮಾಡಿಕೊಳ್ಳುವ ಸೇವೆ. ಮಣ್ಣಿನ ಗಣಪತಿ ಮೂರ್ತಿ ತಯಾರಿಕೆಯ ಪ್ರಾತ್ಯಕ್ಷಿಕೆ ಕಾರ್ಯಾಗಾರದಲ್ಲಿ ಸುಮಾರು 80 ರಿಂದ 90 ವಿದ್ಯಾರ್ಥಿಗಳು ಪಾಲ್ಗೊಂಡು ಸ್ವತಃ ತಮ್ಮ ಕೈಗಳಿಂದಲೇ ಪರಿಸರಸ್ನೇಹಿ ಗಣಪತಿ ಮೂರ್ತಿಗಳನ್ನು ತಯಾರಿಸುವ ವಿಧಾನವನ್ನು ಕಲಿತರು.

## ಬಳ್ಳಾರಿಯಲ್ಲಿ ಸೆ.10ರಂದು ಸಮಾವೇಶ: ಬಿಗಿ ಪೊಲೀಸ್ ಬಂದೋಬಸ್ತ್, ವಾಹನ ಸಂಚಾರ ಮಾರ್ಗ ಬದಲು

**ಬಳ್ಳಾರಿ,ಸೆ.09.**ನಗರದ ಮುನ್ಸಿಪಲ್ ಹೈಸ್ಕೂಲ್ ಮೈದಾನದಲ್ಲಿ ಸೆಪ್ಟೆಂಬರ್ 10 ರಂದು ಬಿಜೆಪಿ ಪಕ್ಷ ವತಿಯಿಂದ ಹಮ್ಮಿಕೊಳ್ಳಲಾಗಿರುವ ಸಾರ್ವಜನಿಕ ಸಮಾವೇಶದ ಹಿನ್ನೆಲೆಯಲ್ಲಿ ಜಿಲ್ಲಾ ಪೊಲೀಸ್ ಇಲಾಖೆ ವ್ಯಾಪಕ ಬಂದೋಬಸ್ತ್ ಕೈಗೊಂಡಿದೆ. ನಗರದಲ್ಲಿ ಸುಗಮ ಸಂಚಾರ ಕಾಪಾಡುವ ನಿಟ್ಟಿನಲ್ಲಿ ಸಂಚಾರ ಮಾರ್ಗ ಬದಲಾವಣೆ ಹಾಗೂ ವಾಹನ ನಿಲುಗಡೆಗೆ ಸಂಬಂಧಿಸಿದಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಸುಮನ್ ಡಿ. ಪೆನ್ನೇಕರ್ ಸೂಚನೆಗಳನ್ನು ಹೊರಡಿಸಿದ್ದಾರೆ.

***ಭದ್ರತೆಗೆ ಬೃಹತ್ ಪೊಲೀಸ್ ಪಡೆ ನಿಯೋಜನೆ:***

ಸಮಾವೇಶವು ಯಾವುದೇ ಅಹಿತಕರ ಘಟನೆಗಳಿಗೆ ಆಸ್ಪದವಿಲ್ಲದೆ ಶಾಂತಿಯುತವಾಗಿ ನಡೆಯುವಂತೆ ಮಾಡಲು, ಕಾನೂನು ಸುವ್ಯವಸ್ಥೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲು ಭಾರಿ ಭದ್ರತೆ ಒದಗಿಸಲಾಗಿದೆ. ಬಂದೋಬಸ್ತ್ ಕರ್ತವ್ಯಕ್ಕಾಗಿ 03 ಜನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, 04 ಜನ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ, 12 ಜನ ಡಿವೈಎಸ್ಪಿ, 40 ಜನ ಸಿಪಿಐ/ಪಿಐ, 63 ಜನ ಪಿಎಸ್‌ಐ, 120 ಜನ ಎಎಸ್‌ಐ, 960 ಜನ ಹೆಡ್ ಕಾನ್‌ಸ್ಟೆಬಲ್ / ಕಾನ್‌ಸ್ಟೆಬಲ್, 200 ಜನ ಹೋಂಗಾರ್ಡ್ಸ್, 12 ಐಆರ್‌ಬಿ/ಕೆಎಸ್‌ಆರ್‌ಪಿ ತುಕಡಿಗಳು, 06 ಡಿಎಆರ್ ತುಕಡಿಗಳು ಹಾಗೂ 01 ಕ್ಯೂಆರ್‌ಟಿ ತುಕಡಿಯನ್ನು ನಿಯೋಜಿಸಲಾಗಿದೆ.

***ನಿರ್ಬಂಧಿತ/ಬದಲಾದ ಮಾರ್ಗಗಳು:*** ಸಾರ್ವಜನಿಕರು ಗಡಿಗಿ ಚೆನ್ನಪ್ಪ ವೃತ್ತ, ಇಂದಿರಾ ವೃತ್ತ, ದುರ್ಗಮ್ಮ ದೇವಸ್ಥಾನ ಸರ್ಕಲ್, ಎಸ್.ಪಿ. ವೃತ್ತ ಹಾಗೂ ಹೆಚ್. ಆರ್.ಗವಿಯಪ್ಪ ವೃತ್ತದ ರಸ್ತೆಗಳನ್ನು ಬಳಸದೆ ಪರ್ಯಾಯ ರಸ್ತೆಗಳಲ್ಲಿ ಸಂಚರಿಸ ಬಹುದಾಗಿದೆ. ಬೆಂಗಳೂರು ರಸ್ತೆಯಿಂದ ಬರುವ ವಾಹನಗಳು ಅನಂತಪುರ ಬೈಪಾಸ್ ರಸ್ತೆಯನ್ನು ಬಳಸಲು ತಿಳಿಸಲಾಗಿದೆ.

***ಕಾರ್ಯಕರ್ತರ ವಾಹನಗಳ ನಿಲುಗಡೆಗೆ ವ್ಯವಸ್ಥೆ:***

ಸಮಾವೇಶದಲ್ಲಿ ಭಾಗವಹಿಸಲು ಆಗಮಿಸುವವರ ವಾಹನಗಳಿಗೆ ಪ್ರತ್ಯೇಕ ಪಾರ್ಕಿಂಗ್ ಸ್ಥಳಗಳನ್ನು ನಿಗದಿಪಡಿಸಲಾಗಿದೆ. ಬಸ್ಸುಗಳು: ಬಸ್ಸುಗಳಲ್ಲಿ ಬರುವ ಕಾರ್ಯಕರ್ತರನ್ನು ಸಂಗಮ್ ಸರ್ಕಲ್‌ನಲ್ಲಿ ಇಳಿಸಿ, ಬಸ್ಸುಗಳನ್ನು ಅನಂತಪುರ ರಸ್ತೆಯ ಬೈಪಾಸ್ ರಸ್ತೆ ಹಾಗೂ ಮೋಕಾ ರಸ್ತೆಯಲ್ಲಿ ನಿಲುಗಡೆ ಮಾಡಬೇಕು.



**ಕಾರುಗಳು:** ಕಾರುಗಳಲ್ಲಿ ಬರುವವರು ಸಂಗಮ್ ಸರ್ಕಲ್‌ನಿಂದ ಅನಂತಪುರ ರಸ್ತೆಯ ಬೈಪಾಸ್‌ವರೆಗಿನ ರಸ್ತೆಯ ಎರಡೂ ಬದಿಗಳಲ್ಲಿ ನಿಲುಗಡೆ ಮಾಡಬೇಕು.

**ದ್ವಿಚಕ್ರ ವಾಹನಗಳು:** ಸಂಗಮ್ ಸರ್ಕಲ್‌ನಿಂದ ಕೂಲ್ ಕಾರ್ನರ್‌ವರೆಗೆ ರಸ್ತೆಯ ಒಂದು ಬದಿಯಲ್ಲಿ ದ್ವಿಚಕ್ರ ವಾಹನಗಳನ್ನು ಹಾಗೂ ಮತ್ತೊಂದು ಬದಿಯಲ್ಲಿ ಕಾರುಗಳನ್ನು ಪಾರ್ಕ್ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಸಾರ್ವಜನಿಕರು ಸಂಚಾರ ದಟ್ಟಣೆ ನಿಯಂತ್ರಿಸಲು ಪೊಲೀಸ್ ಇಲಾಖೆಯೊಂದಿಗೆ ಸಹಕರಿಸಬೇಕೆಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸುಮನ್ ಡಿ.ಪೆನ್ನೇಕರ್ ಅವರು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಬಸವ ಸಮಿತಿಯಿಂದ 'ದಾಸೋಹ ರತ್ನ'

ಪ್ರಶಸ್ತಿ ಪ್ರದಾನ

ಶ್ರೀ ಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯ, ಶ್ರೀ ಮಧುಸೂಧನ ಸಾಯಿ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಸಂಸ್ಥಾಪಕರಾದ

ಸದ್ಗುರು ಶ್ರೀ ಮಧುಸೂಧನ ಸಾಯಿ ಅವರಿಗೆ

'ದಾಸೋಹ ರತ್ನ'

ಪ್ರಶಸ್ತಿ ಪ್ರದಾನ ಸಮಾರಂಭ



ದಿನಾಂಕ : 10ನೇ ಸೆಪ್ಟೆಂಬರ್ 2026, ಗುರುವಾರ ಬೆಳಗ್ಗೆ : 10.00 ಗಂಟೆಗೆ
ಸ್ಥಳ: ಅನುಭವ ಮಂಟಪ, ಬಸವ ಸಮಿತಿ, ಬೆಂಗಳೂರು: 560 001


# ಕೆಐಐಟಿ, ಕೆಐಎಸ್‌ಎಸ್‌ಗೆ ಭೇಟಿ ನೀಡಿದ ಆಧ್ಯಾತ್ಮಿಕ ಗುರು ಸಾಧ್ವಿ ಋತಂಬರಾ

ಭುವನೇಶ್ವರ, ಸೆ.8: ಖ್ಯಾತ ಆಧ್ಯಾತ್ಮಿಕ ಸಾಧಕಿ ಸಾಧ್ವಿ ಋತಂಬರಾ ಅವರು ಕಳಿಂಗ ಇನ್ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಟೆಕ್ನಾಲಜಿ (ಕೆಐಐಟಿ) ಮತ್ತು ಕಳಿಂಗ ಇನ್ಸ್ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸಸ್ (ಕೆಐಎಸ್‌ಎಸ್) ಕ್ಯಾಂಪಸ್‌ಗಳಿಗೆ ಮಂಗಳವಾರ ಭೇಟಿ ನೀಡಿದ್ದರು. "ಶಿಕ್ಷಣ ಕ್ಷೇತ್ರದಲ್ಲಿ ಹಲವು ವರ್ಷಗಳಿಂದ ತೊಡಗಿಸಿಕೊಂಡಿದ್ದೇನೆ. ಶಿಕ್ಷಣ ತಜ್ಞ ಮತ್ತು ಸಮಾಜ ಸೇವಕ ಡಾ. ಅಚ್ಯುತ ಸಮಂತ ಅವರು ಸ್ಥಾಪಿಸಿದ 'ಕೆಐಎಸ್‌ಎಸ್' ದೇಶದಲ್ಲೇ ಒಂದು ಅಪೂರ್ವವಾದ ಸಂಸ್ಥೆಯಾಗಿ ಹೊರಹೊಮ್ಮಿದೆ. ಈ ಸಂಸ್ಥೆಯು ಎಲ್ಲಾ ತೀರ್ಥಕ್ಷೇತ್ರಗಳ ಪಾವಿತ್ರ್ಯವನ್ನು ಮೈಗೂಡಿಸಿಕೊಂಡು 'ಅಸಾಧಾರಣ' ತಾಣ ಹಾಗೂ ಎಲ್ಲಾ ದೇವತೆಗಳ ದೈವತ್ವದ ಸಾಕಾರರೂಪ" ಎಂದು ಬಣ್ಣಿಸಿದರು.

"ಇಂತಹ ವಿಶಿಷ್ಟವಾದ ಸಂಸ್ಥೆಗೆ ಬಂದಿರುವುದು ನನಗೆ ಎಲ್ಲಿಲ್ಲದ ಸಂತೋಷ ತಂದಿದೆ. ಇದನ್ನು ವರ್ಣಿಸಲು ಪದಗಳೇ ಇಲ್ಲ," ಎಂದು ಅವರು ಹೇಳಿದರು.



ಸಮರ್ಪಣಾ ಭಾವ, ತಪಸ್ಸಿನ ಪ್ರತಿಬಿಂಬ: "ಕೆಐಎಸ್‌ಎಸ್ ಸಂಸ್ಥೆ ಒಬ್ಬ ವ್ಯಕ್ತಿಯ ಸಮರ್ಪಣಾ ಭಾವ ಮತ್ತು ಅದಮ್ಯ ತಪಸ್ಸನ್ನು ಪ್ರತಿಬಿಂಬಿಸುತ್ತದೆ. ಕಠಿಣ ಪರಿಶ್ರಮ ಮತ್ತು ಸಮರ್ಪಣಾ ಭಾವದ ನಿಜವಾದ ಅರ್ಥ ಏನು ಎಂಬುದನ್ನು ನಾನು ಇಂದು ಇಲ್ಲಿ ಕಂಡೆ," ಎಂದು ಕೆಐಐಟಿ ಮತ್ತು ಕಿಸ್ ಸಂಸ್ಥಾಪಕರಾದ ಡಾ. ಅಚ್ಯುತ ಸಮಂತ ಅವರ ಅನನ್ಯ ಕಾರ್ಯವನ್ನು ಶ್ಲಾಘಿಸಿದರು.

ಇದೇ ನಿಜವಾದ ಭಾರತ:

ಇಲ್ಲಿನ ಮಕ್ಕಳ ಶಿಸ್ತು ಮತ್ತು ಮೌಲ್ಯಗಳನ್ನು ಗಮನಿಸಿದರೆ "ಇದೇ ನಿಜವಾದ ಭಾರತ" ಎಂದು ಅನಿಸುತ್ತದೆ. ಡಾ. ಸಮಂತ ಅವರ ಮಾರ್ಗದರ್ಶನದಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳು ಹೆಮ್ಮೆಪಡ ಬೇಕು. ಇವರೆಲ್ಲರ ಮೇಲೆ ನನ್ನ ಆಶೀರ್ವಾದ ಸದಾ ಇರುತ್ತದೆ ಎಂದರು.

ಕೇವಲ ಸಲಹೆಗಳನ್ನು ನೀಡಬೇಡಿ ಅದರ ಬದಲಿಗೆ ಜನರು ಇತರರಿಗೆ ಸಹಾಯ ಹಸ್ತ ಚಾಚಬೇಕು. ಈ ಸಂಸ್ಥೆ ಮಕ್ಕಳಲ್ಲಿ ಸ್ವಾಭಿಮಾನ ಕಲಿಸುತ್ತದೆ ಹಾಗೂ ಸ್ವಾವಲಂಬಿಗಳಾಗುವುದನ್ನೂ ತಿಳಿಸುತ್ತದೆ. ಒಬ್ಬ ವ್ಯಕ್ತಿ ಸ್ವಾವಲಂಬಿಯಾಗಿದ್ದಾಗ ಮಾತ್ರ ಸ್ವಾಭಿಮಾನಿಯಾಗಲು ಸಾಧ್ಯ ಎಂದು ಅವರು ನುಡಿದರು. ಕೆಐಎಸ್‌ಎಸ್ ಉಪಕುಲಪತಿ ಪ್ರೊ. ಸರಬ್ಜಿತ್ ಸಿಂಗ್, ಖ್ಯಾತ ಶಿಕ್ಷಣತಜ್ಞ ಅಶೋಕ್ ಪಾಂಡೆ ಈ ವೇಳೆ ಉಪಸ್ಥಿತರಿದ್ದರು.



## ಮಾತುಗಳು ಹೆಚ್ಚಿನ ಶಕ್ತಿ ನೀಡಿವೆ

ಮಕ್ಕಳು, ಮಹಿಳೆಯರು ಮತ್ತು ಸಮಾಜದ ಸೇವೆಗಾಗಿ ತಮ್ಮ ಜೀವನವನ್ನು ಮೀಸಲಿಟ್ಟಿರುವ ಪದ್ಮಭೂಷಣ ಪರಮಪೂಜ್ಯ ದೀದಿ ಸಾಧ್ವಿ ರಿತಂಬರಾ ಅವರು ನಮ್ಮ ಸಂಸ್ಥೆಗಳ ಕುರಿತು ಮಾತನಾಡಿರುವುದು ಕೇಳಿ ಅತೀವ ಖುಷಿಯಾಯಿತು. ಇವರ ಮೆಚ್ಚುಗೆ ಮಹತ್ವದಾಗಿದೆ. ಕೆಐಎಸ್‌ಎಸ್ ಬಗ್ಗೆ ಕೇಳಿದ್ದ ಅವರು ಇಲ್ಲಿಗೆ ಖುದ್ದು ಆಗಮಿಸಿ ಮಕ್ಕಳನ್ನು ಭೇಟಿ ಮಾಡಿ ನಮ್ಮ ಕೆಲಸಗಳನ್ನು ಕಂಡಿದ್ದಾರೆ. ಅವರ ಮಾತುಗಳು ಹೃದಯಾಂತರಾಳದಿಂದ ಬಂದಿವೆ. ದೀದಿ ಅವರ ಆಶೀರ್ವಾದ, ವಾತ್ಸಲ್ಯ ಮತ್ತು ಪ್ರೋತ್ಸಾಹಕ್ಕಾಗಿ ನಾನು ಅವರಿಗೆ ಸದಾ ಆಭಾರಿಯಾಗಿದ್ದೇನೆ. ಇನ್ನೂ ಹೆಚ್ಚು ಪ್ರಾಮಾಣಿಕತೆ ಹಾಗೂ ಬದ್ಧತೆಯಿಂದ ಸೇವೆಯನ್ನು ಮುಂದುವರಿಸಲು ಇವರ ಮಾತುಗಳು ನನಗೆ ಹೆಚ್ಚಿನ ಶಕ್ತಿಯನ್ನು ನೀಡಿವೆ.

– ಡಾ. ಅಚ್ಯುತ ಸಮಂತ: ಸಂಸ್ಥಾಪಕರು, ಕೆಐಐಟಿ, ಕೆಐಎಂಎಸ್ ಹಾಗೂ ಕೆಐಎಸ್‌ಎಸ್, ಲೋಕಸಭಾ ಮತ್ತು ರಾಜ್ಯಸಭಾ ಮಾಜಿ ಸದಸ್ಯರು.

# 109ನೇ ಮಹಾಸಭೆ ಪೂರೈಸಿದ ಮಾಡೆಲ್ ಕೋ-ಆಪರೇಟಿವ್ (ಶೆಡ್ಯೂಲ್ಡ್) ಬ್ಯಾಂಕ್

## ವ್ಯಾಪ್ತಿ ವಿಸ್ತರಣೆ-ಆರ್ಥಿಕ ಸಾಧನೆ ಬ್ಯಾಂಕ್ ಅಭಿವೃದ್ಧಿಗೆ ಪೂರಕ: ಆಲ್ಬರ್ಟ್ ಡಬ್ಲ್ಯೂ.ಡಿ'ಸೋಜಾ

(ಚಿತ್ರ / ವರದಿ : ರೋನ್ಸ್ ಬಂಟ್ವಾಳ್)

ಮುಂಬಯಿ, ಸೆ.9: ಗತ ಸಾಲಿನಲ್ಲಿ ಅಂತ್ಯಗೊಂಡ ಆರ್ಥಿಕ ವರ್ಷದಲ್ಲಿ ಠೇವಣಿಗಳು ರೂಪಾಯಿ1,304.63 ಕೋಟಿ, ಮುಂಗಡ ಸಾಲಗಳು ರೂ.669.05 ಕೋಟಿ ಆಗಿದ್ದು ರೂ.116.30 ಕೋಟಿ ಒಟ್ಟು ಆದಾಯ ಕಂಡಿದೆ. ಬ್ಯಾಂಕ್‌ನ ಕಾರ್ಯಾಚರಣಾ ವ್ಯಾಪ್ತಿ ವಿಸ್ತರಣೆ ಹಾಗೂ ಆರ್ಥಿಕ ಸಾಧನೆ ಬ್ಯಾಂಕ್‌ನ ಅಭಿವೃದ್ಧಿಗೆ ಪೂರಕವಾಗಿದೆ. ಗತಮಹಾ ಸಭೆಯಲ್ಲಿ ಸದಸ್ಯರ ಅನುಮೋದನೆ ಪಡೆದ ಬಳಿಕ, ಬ್ಯಾಂಕ್‌ನ ಕಾರ್ಯಾಚರಣಾ ವ್ಯಾಪ್ತಿಯನ್ನು ಮಹಾರಾಷ್ಟ್ರ, ಕರ್ನಾಟಕ, ಗುಜರಾತ್ ಹಾಗೂ ಗೋವಾ ರಾಜ್ಯಗಳಾದ್ಯಂತ ವಿಸ್ತರಿಸಲು ಭಾರತೀಯ ರಿಸರ್ವ್ ಬ್ಯಾಂಕ್‌ಗೆ ಅರ್ಜಿ ಸಲ್ಲಿಸಿದ್ದು, ಫಲಿತಾಂಶವಾಗಿ ಆರ್‌ಬಿಐ ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯದಾದ್ಯಂತ ಬ್ಯಾಂಕ್‌ನ ಕಾರ್ಯಾಚರಣಾ ವ್ಯಾಪ್ತಿಯನ್ನು ವಿಸ್ತರಿಸಲು ಎನ್‌ಒಸಿ ನೀಡಿದೆ ಎಂದು ಮಾಡೆಲ್ ಬ್ಯಾಂಕ್‌ನ ಕಾರ್ಯಾಧ್ಯಕ್ಷ ಆಲ್ಬರ್ಟ್ ಡಬ್ಲ್ಯೂ. ಡಿ'ಸೋಜಾ ತಿಳಿಸಿದರು.

ಬುಧವಾರ ಬಾಂದ್ರಾ ಪಶ್ಚಿಮದಲ್ಲಿನ ಸೈಂಟ್ ಆ್ಯಂಡ್ರೂ'ಸ್ ಸಭಾಗೃಹದಲ್ಲಿ ಮಾಡೆಲ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ (ಶೆಡ್ಯೂಲ್ಡ್ ಬ್ಯಾಂಕ್) ತನ್ನ109ನೇ ವಾರ್ಷಿಕ ಮಹಾಸಭೆ ನಡೆಸಿದ್ದು ಅಧ್ಯಕ್ಷೀಯ ಭಾಷಣವನ್ನುದ್ದೇಶಿಸಿ ಮಾತನಾಡಿದ ಆಲ್ಬರ್ಟ್ ಡಿ'ಸೋಜಾ, 2025-26ನೇ ಸಾಲಿನಲ್ಲಿ ಬ್ಯಾಂಕ್ ವಿವಿಧ ಕಾರ್ಯತಂತ್ರಾತ್ಮಕ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಮೂಲಕ ವ್ಯವಹಾರ ವೃದ್ಧಿಗೆ ಆದ್ಯತೆ ನೀಡಿದ್ದು, ಗ್ರಾಹಕರ ತೃಪ್ತಿಗಾಗಿ ಉತ್ತಮ ಗುಣಮಟ್ಟದ ಸೇವೆ ಮುಂದುವರಿಸಿದೆ ಎಂದರು.

ಕಳೆದ ಆರ್ಥಿಕ ಕ್ಯಾಲೆಂಡರ್ ಸಾಲಿನ ಬ್ಯಾಂಕ್‌ನ ಕಾರ್ಯಚಟುವಟಿಕೆಗಳ ಮತ್ತು ಪರಿಶೋಧಿತ ಲೆಕ್ಕಪತ್ರಗಳ ವರದಿಯನ್ನು ಸಭಿಕರಿಗೆ ತಿಳಿಸಿದ ಆಲ್ಬರ್ಟ್ ಡಿ'ಸೋಜಾ, ಅಸ್ತಿತ್ವದಲ್ಲಿರುವ ಷೇರುದಾರರಿಗೆ ಹೆಚ್ಚುವರಿ ಷೇರುಗಳನ್ನು




ಹಾಗೂ ಬ್ಯಾಂಕ್‌ನ ಸದಸ್ಯರಾಗಲು ಇಚ್ಛಿಸುವ ಹೊಸ ಸದಸ್ಯರಿಗೆ ಹೊಸ ಷೇರುಗಳನ್ನು, ಬ್ಯಾಂಕ್‌ನ ಷೇರು ಬಂಡವಾಳದ ನಿಗದಿತ ಮಿತಿಗೆ ಒಳಪಟ್ಟು ವಿತರಿಸಲಾಗುತ್ತಿದೆ. ಆಸಕ್ತಿವುಳ್ಳವರು ಇದರ ಸದುಪಯೋಗವನ್ನು ಪಡೆಯಬಹುದು. ಬ್ಯಾಂಕಿಂಗ್ ಕ್ಷೇತ್ರದಲ್ಲಿ ತಮ್ಮ ವೃತ್ತಿಜೀವನವನ್ನು ಆರಂಭಿಸಲು ಆಸಕ್ತಿ ಹೊಂದಿರುವ ಯುವ ಹಾಗೂ ಅರ್ಹ ಪದವೀಧರರನ್ನು ಬ್ಯಾಂಕ್ ಆಹ್ವಾನಿಸುತ್ತಿದ್ದು, ಆಸಕ್ತ ಅಭ್ಯರ್ಥಿಗಳು ಬ್ಯಾಂಕ್‌ಗೆ ಅರ್ಜಿ ಸಲ್ಲಿಸಬಹುದು. ಬ್ಯಾಂಕ್‌ಗೆ ನಿರಂತರ ಬೆಂಬಲ ಹಾಗೂ ಸಹಕಾರ ನೀಡುತ್ತಿರುವ ನಮ್ಮ ಎಲ್ಲಾ ಷೇರುದಾರರು ಮತ್ತು ಗ್ರಾಹಕರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇವೆ. ಬ್ಯಾಂಕ್‌ನ ಅಭಿವೃದ್ಧಿಗಾಗಿ ಬದ್ಧತೆ, ನಿಷ್ಠೆ ಹಾಗೂ ಸಮರ್ಪಣಾ ಮನೋಭಾವದಿಂದ ಸೇವೆ ಸಲ್ಲಿಸುತ್ತಿರುವ ನಮ್ಮ ಸಿಬ್ಬಂದಿ ವರ್ಗಕ್ಕೂ ವಿಶೇಷ ಕೃತಜ್ಞತೆ ಸಲ್ಲಿಸುವೆ ಎನ್ನುತ್ತಾ ಈ ಬಾರಿಯೂ ಬ್ಯಾಂಕ್ ಮಂಡಳಿ ಷೇರುದಾರರಿಗೆ 10% ಷೇರುಪಾಲು (ಲಾಭಾಂಶ) ಘೋಷಿಸುವೆ ಎಂದರು.

ಬ್ಯಾಂಕ್‌ನ ಉಪ ಕಾರ್ಯಾಧ್ಯಕ್ಷ ಹಾಗೂ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಮ್ಯಾಕ್ಸಿಮ್ ಐ.ಪಿಂಟೋ, ವೃತ್ತಿಪರ ನಿರ್ದೇಶಕ ಸಿಎ। ಪೌಲ್ ನಜರೆತ್, ನಿರ್ದೇಶಕರುಗಳಾದ ವಿಲಿಯಂ ಸಿಕ್ವೇರಾ, ಅಬ್ರಹಾಂ ಕ್ಲೇಮೆಂಟ್ ಲೋಬೋ, ಸಂಜಯ್ ಶಿಂಧೆ, ಥಾಮಸ್ ಡಿ.ಲೋಬೊ, ಲಾರೆನ್ಸ್ ಡಿ'ಸೋಜಾ, ಅಡ್ವೋಕೇಟ್ ಪಿಯೂಸ್ ವಾಸ್, ಜೆರಾಲ್ಡ್ ಕರ್ಡೋಜಾ, ಆ್ಯನ್ಸಿ ಡಿ'ಸೋಜಾ, ಹಿಲಾರಿ ಎಲ್.ಮೆಂಡೋನ್ಸಾ, ಅಡ್ವಕೇಟ್ ಫಿಯೊನಾ ಎಂ.ನಝರೆತ್, ಆಶಾ ಎಸ್.ಡಿ'ಸೋಜಾ, ಆಡಳಿತ ಮಂಡಳಿ (ಬಾಹ್ಯ) ಸದಸ್ಯರಾದ ಸಿಎ। ಎಲ್‌ರೋಯ್ ರೋಡ್ರಿಗಸ್, ಜೂಡ್ ಪಿ.ಲೋಬೊ, ಅಡ್ವಕೇಟ್ ಸನ್ನ ಎ.ಲೋಬೊ, ಲ್ಯಾನ್ಸಲೋಟ್ ತಾವ್ರೋ, ಆಗಸ್ಟಿನ್ ಕ್ವಾಡ್ರೋಸ್, ಪ್ರಧಾನ ಪ್ರಬಂಧಕ ಮತ್ತು ಸಿಇಒ ಹೆನ್ರಿ ಬಿ.ಕ್ವಾಡ್ರೋಸ್, ಹೆಚ್ಚುವರಿ ಪ್ರಧಾನ ಪ್ರಬಂಧಕ ಝಿನೋನ್ ಡಿ'ಕ್ರೂಜ್ ವೇದಿಕೆಯಲ್ಲಿದ್ದರು.

ಝೇವಿಯರ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ (ಮಾಹಿಮ್) ಮುಂಬಯಿ ಇದರ ನಿರ್ದೇಶಕ, ಸಹಪ್ರಾಧ್ಯಾಪಕ ಫಾ। (ಡಾ।) ಜೋನ್ ರೋಸ್ ಸಂತಿಯಾಗೊ (ಎಸ್.ಜೆ.) ಆದಿಯಲ್ಲಿ ಅನುಗ್ರಹ ನುಡಿಗಳನ್ನಾಡಿ ಮಹಾಸಭೆಗೆ ವಿಧಿವತ್ತಾಗಿ ಚಾಲನೆಯನ್ನಿತ್ತರು.

ಫಾ। ಜೋನ್ ಮಾತನಾಡಿ ದೂರದೃಷ್ಟಿಯ ನಾಯಕತ್ವದ ಮೂಲಕ ವಿಶಿಷ್ಟವಾಗಿ ಗುರುತಿಸಿಕೊಂಡಿರುವ ಮಾಡೆಲ್ ಬ್ಯಾಂಕ್ ಸಾಧನೆಗಳಿಗೆ ಹಾಗೂ ಸಂಸ್ಥೆಯು ಸಮುದಾಯದಲ್ಲಿ ಗಳಿಸಿರುವ ವಿಶ್ವಾಸ ಹಾಗೂ ನಂಬಿಕೆಗೆ ಅಭಿನಂದನೆ ಸಲ್ಲಿಸುತ್ತೇನೆ. ಬ್ಯಾಂಕ್‌ನ ನಿರಂತರ ಬೆಳವಣಿಗೆ, ವಿಸ್ತರಿಸುತ್ತಿರುವ ಶಾಖಾ ಜಾಲ, ಆಧುನಿಕ ಬ್ಯಾಂಕಿಂಗ್ ವ್ಯವಸ್ಥೆ ಹಾಗೂ ತಂತ್ರಜ್ಞಾನಕ್ಕೆ ನೀಡುತ್ತಿರುವ ಆದ್ಯತೆ ಮತ್ತು ಸಮಾಜದ ವಿವಿಧ ವರ್ಗಗಳ ಜನರಿಗೆ ಸೇವೆ ಸಲ್ಲಿಸುವ ಬದ್ಧತೆ ಶ್ಲಾಘನೀಯವಾಗಿದೆ. ಸಹಕಾರ ಮತ್ತು ಸೇವೆಯ ಆಶಯಗಳಿಗೆ ಬದ್ಧವಾಗಿ ಸಂಸ್ಥೆಯು ನಿರಂತರವಾಗಿ ಪ್ರಗತಿಯತ್ತ ಸಾಗುತ್ತಿರುವುದು ವಿಶೇಷವಾಗಿ ಸಂತಸ ತಂದಿದೆ. ಸಮುದಾಯದ ಹಿತಾಸಕ್ತಿ ಹಾಗೂ ಅಭಿವೃದ್ಧಿಗಾಗಿ ಸಂಸ್ಥೆಯು ಮಾಡುತ್ತಿರುವ ಉತ್ತಮ ಕಾರ್ಯಗಳಿಗೆ ನಾವು ವಿಶೇಷ ಕೃತಜ್ಞತೆ ಸಲ್ಲಿಸಿ, ಈ ಪಥಸಂಸ್ಥೆಯು ಮುಂಬರುವ ದಿನಗಳಲ್ಲಿ ಇನ್ನಷ್ಟು ಯಶಸ್ಸು ಹಾಗೂ ಪ್ರಗತಿಯನ್ನು ಸಾಧಿಸುವಂತಾಗಲಿ ಎಂದು ಶುಭಾಶಂಸನೆಗೈದರು.

ಮ್ಯಾಕ್ಸಿಮ್ ಐ.ಪಿಂಟೋ ಹಾಗೂ ಅಡ್ವೋಕೇಟ್ ಪಿಯೂಸ್ ವಾಸ್ ಮಾತನಾಡಿ ಬ್ಯಾಂಕ್‌ನ ಸೇವೆಯನ್ನು ಮನವರಿಸಿ ಭವಿಷ್ಯದ ಯೋಜನೆಗಳನ್ನು ತಿಳಿಸಿ ಸರ್ವರ ಸಹಯೋಗವನ್ನು ಆಶಿಸಿದರು.

ಸಿಇಓ ಹೆನ್ರಿ ಬಿ.ಕ್ವಾಡ್ರೋಸ್ ಅವರು ಅಂತ್ಯಗೊಂಡ ಹಣಕಾಸು ಸಾಲಿನ ಪರಿಶೋಧಿತ ಲೆಕ್ಕ ಪತ್ರಗಳು, ಆಯವ್ಯಯ ಪಟ್ಟಿ ಮತ್ತು ಲಾಭ-ನಷ್ಟಗಳ ವಿವರಗಳನ್ನು ಮಂಡಿಸಿ ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸಿ ಗತ ಹಣಕಾಸು ಸಾಲಿನಲ್ಲಿ ಬ್ಯಾಂಕ್ ವ್ಯವಹಾರ ವೃದ್ಧಿಗೆ ಹಲವು ಕಾರ್ಯತಂತ್ರಾತ್ಮಕ ಕ್ರಮಗಳನ್ನು ಕೈಗೊಂಡಿದ್ದು, ಗ್ರಾಹಕರಿಗೆ ಗುಣಮಟ್ಟದ ಸೇವೆ ಒದಗಿಸುವಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದೆ. ಬ್ಯಾಂಕ್‌ನ ಒಟ್ಟು ವ್ಯವಹಾರ ಪ್ರಮಾಣ ರೂ.1,973.68 ಕೋಟಿಗೆ ತಲುಪಿದೆ. ಠೇವಣಿಯಲ್ಲೂ ಏರಿಕೆಯಾಗಿದೆ. ಆದ್ದರಿಂದ ಈ ಬಾರಿಯೂ ಆರ್‌ಬಿಐ ಲೆಕ್ಕಶೋಧನಾ ಶ್ರೇಣೀಕರಣ ಪ್ರಕಾರ (ಆಡಿಟ್ ಕ್ಲಾಸಿಫಿಕೇಶನ್) 'ಎ' ಶ್ರೇಣಿಯೊಂದಿಗೆ ಧೃಢೀಕೃತ ಗೊಳಿಸಿದೆ ಎಂದರು.

ಸಭಿಕ ಸದಸ್ಯರಲ್ಲಿನ ಡಿ.ಜೆ ಎನ್.ಡಿಸಿಲ್ವಾ, ರೀಟಾ ಡೆಸಾ, ಜೋನ್ ಲೋಬೊ, ಎಸ್.ಲೋರೆಟ್ಟಾ, ಥೋಮಸ್ ಫೆರ್ನಾಂಡಿಸ್, ಕು। ಇನಾಷಿಯಾ ಡಿಸೋಜಾ ಮತ್ತಿತರರು ಮಾತನಾಡಿ ಸಲಹೆಗಳನ್ನಿತ್ತು ಬ್ಯಾಂಕ್‌ನ ಶ್ರೇಯಸ್ಸಿಗೆ ಹಾರೈಸಿದರು. ಬ್ಯಾಂಕ್‌ನ ಮುಖ್ಯ ಅಧಿಕಾರಿಗಳು ಸೇರಿದಂತೆ ವಿವಿಧ ಶಾಖೆಗಳ ಮುಖ್ಯಸ್ಥರು ಹಾಜರಿದ್ದು ಗತ ಸಾಲಿನಲ್ಲಿ ಅಗಲಿದ ಬ್ಯಾಂಕ್‌ನ ಸದಸ್ಯರು, ಗ್ರಾಹಕರು, ಹಿತೈಷಿಗಳಿಗೆ ಶ್ರದ್ಧಾಂಜಲಿ ಕೋರಲಾಯಿತು.

ಹಿರಿಯ ಪ್ರಬಂಧಕಿ ಬೀಯೆಟಾ ಕಾರ್ವಾಲೋ ಸ್ವಾಗತಿಸಿದರು ಸಭಾ ಕಲಾಪ ನಿರೂಪಿದರು. ಝಿನೋನ್ ಡಿ'ಕ್ರೂಜ್ ವಂದಿಸಿದರು. ರಾಷ್ಟ್ರಗೀತೆಯೊಂದಿಗೆ ಮಹಾಸಭೆ ಸಮಾಪನಗೊಂಡಿತು.